श्री गुरुभ्यो नमः श्री गणेशाय नमः श्री दक्षिणामूर्तये नमः

ಶ್ರೀ ಗುರುಭ್ಯೋ ನಮಃ ಶ್ರೀ ಗಣೇಶಾಯ ನಮಃ ಶ್ರೀ ದಕ್ಷಿಣಾಮೂರ್ತಯೇ ನಮಃ

श्रीदेवी उपनिषदः

ಶ್ರೀದೇವೀ ಉಪನಿಷತ್ತುಗಳು

भावनोपनिषत्, त्रिपुरोपनिषत्, कौलोपनिषत्

भास्कराय भाष्य समेत

बहृचोपनिषत्

अप्पय्य दीक्षित भाष्य समेत

अरुणोपनिषत्

लक्ष्मीधर व्याख्या समेत

ಭಾವನೋಪನಿಷತ್, ತ್ರಿಪುರೋಪನಿಷತ್, ಕೌಲೋಪನಿಷತ್

ಭಾಸ್ಕರರಾಯ ಭಾಷ್ಯ ಸಹಿತ

ಬಹ್ವೃಚೋಪನಿಷತ್


ಅಪ್ಪಯ್ಯದೀಕ್ಷಿತ ಭಾಷ್ಯ ಸಹಿತ

ಅರುಣೋಪನಿಷತ್

ಲಕ್ಷ್ಮೀಧರ ವ್ಯಾಖ್ಯೆಯೊಂದಿಗೆ

ಕನ್ನಡ ಅನುವಾದಕ : ಶಿವಾಜಿ ಕುಮಾರ ಅಧಿಕಾರಿ ಪಾರೆಂಕಿ

ಬಿಂದುತ್ರಿಕೋಣವಸುಕೋಣದಶಾರಯುಗ್ಮ ಮನ್ವಶ್ರನಾಗದಳಸಂಯುತಷೋಡಶಾರಮ್ ।
ವೃತ್ತತ್ರಯಂ ಚ ಧರಣೀಸದನತ್ರಯಂ ಚ ಶ್ರೀಚಕ್ರಮೇತದುದಿತಂ ಪರದೇವತಾಯಾಃ ॥



ಅನುಕ್ರಮಣಿಕೆ

ಪ್ರಸ್ತಾವನೆ

ಶ್ರೀ ಮಾತ್ರೇ ನಮಃ

ಇಲ್ಲಿ ಪ್ರಕಟಿಸಿರುವ ಉಪನಿಷತ್ತುಗಳು ಅಥರ್ವವೇದದ ಸೌಭಾಗ್ಯಕಾಂಡದಲ್ಲಿರುವಂತಹವುಗಳು, ಬಹ್ವೃಚ ಮತ್ತು ಅರುಣಾಗಳನ್ನು ಹೊರತುಪಡಿಸಿ. ಬಹ್ವೃಚವು ಋಗ್ವೇದದಲ್ಲಿಯೂ, ಅರುಣಾ ಕೃಷ್ಣಯಜುರ್ವೇದದಲ್ಲಿಯೂ ಸ್ಥಾನಪಡೆದುಕೊಂಡಿವೆ. ಇಲ್ಲಿರುವ ಎಲ್ಲಾ ಉಪನಿಷತ್ತುಗಳು ಪರಾಶಕ್ತಿಯನ್ನು ತ್ರಿಪುರಸುಂದರೀ ಮುಂತಾದ ರೂಪಗಳಿಂದಲೂ ಮತ್ತು ಕೆಲವು ಶ್ರೀಚಕ್ರರೂಪವಾಗಿಯೂ ಪರಿಗಣಿಸಿ ಉಪಾಸನಾವಿಧಾನಗಳನ್ನು ತಿಳಿಸುತ್ತವೆ. ಆಗಮಾನುಸಾರಿಗಳ ಪ್ರಕಾರ ಉಪನಿಷತ್ತುಗಳು ಶ್ರುತಿ ಎಂದೇ ಪರಿಗಣಿಸಲ್ಪಟ್ಟಿವೆ. ಕರ್ಮ, ಉಪಾಸನಾ ಮತ್ತು ಜ್ಞಾನ ಕಾಂಡಗಳನ್ನು ಹೊಂದಿರುವ ವೇದಗಳು ತ್ರಯೀವಿದ್ಯಾ ಎಂದು ಕರೆಯಲ್ಪಟ್ಟಿವೆ.

'ಅಪರಾಧಪರಂಪರಾವೃತಂ ನ ಹಿ ಮಾತಾ ಸಮುಪೇಕ್ಷತೇ ಸುತಮ್', 'ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ', 'ಮಾತೇವ ಪುತ್ರಾನ್ ರಕ್ಷಸ್ವ', 'ಮಾತೇವರಕ್ಷತಿ ಪಿತೇವಹಿತೇ ನಿಯುಂಕ್ತೇ', 'ಮಾತೃಪ್ರಿಯಂ ಕಿಲ ಜಡಂ ಸುತಮಾಮನಂತಿ', 'ನ ಮಾತುಃ ಪರಮಸ್ತಿ ದೈವತಮ್' ಮುಂತಾದ ಪ್ರಮಾಣವಚನಗಳಂತೆ ತಾಯಿಯು ಆವಶ್ಯಕವಾಗಿ ಪೂಜನೀಯಳಾಗಿದ್ದಾಳೆ. ಅದರಲ್ಲಿಯೂ ಜಗನ್ಮಾತೆಯು, ಪರದೇವತೆಯು, ಮೂರುಲೋಕಗಳ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುವವಳಾಗಿ, ಯಾವುದೇ ಅಪೇಕ್ಷೆಯಿಲ್ಲದೇ ಸಕಲ ಜಗತ್ತಿನ ಪರಿಪಾಲನೆಗೆ ಬದ್ಧಕಂಕಣಳಾಗಿರುವುದರಿಂದ ಪೂಜ್ಯಳಾಗಿರುವಳು. ಅವಳ ಉಪಾಸನೆಯಲ್ಲಿ ಕಾಯಿಕ, ವಾಚಿಕ. ಮಾನಸಿಕ ರೂಪದ ಬಹಿರ್ಯಾಗ, ಜಪ ಮತ್ತು ಅಂತರ್ಯಾಗಗಳನ್ನು ತ್ರಿಪುರತಾಪಿನೀ ಮುಂತಾದವುಗಳಲ್ಲಿ ತಿಳಿಸಿದಂತೆ ಆಚರಿಸುತ್ತಾರೆ. ಅದರಲ್ಲಿಯೂ ಪರಮಶ್ರೇಯಸ್ಸನ್ನು ನೀಡುವ ಭಾವನೆಗಳ ಮೂಲಕ ಮಾಡುವ ಅಂತರ್ಯಾಗಕ್ರಮವನ್ನು ಭಗವಂತನು ಪರಂಪರೆಯಲ್ಲಿ ಭಾವನೋಪನಿಷತ್ತಿನ ರೂಪದಲ್ಲಿ ಪ್ರಕಾಶಪಡಿಸಿದನು. ಭಾಸ್ಕರರಾಯರು ಅದರ ಭಾಷ್ಯವನ್ನು ಬಲು ಸುಂದರವಾಗಿ ನಿರೂಪಿಸಿದ್ದಾರೆ. ಈ ಉಪನಿಷತ್ತು ಕಾದಿಮತದ ಅನುಸಾರವಾಗಿ ಅಂತರ್ಯಾಗವನ್ನು ಪ್ರಸ್ತುತಪಡಿಸುತ್ತದೆ. ಭಾಸ್ಕರರ ಅಭಿಪ್ರಾಯದಂತೆ 31ನೆಯ ಋಕ್‌ನಲ್ಲಿ ಎಲ್ಲಾ ದ್ವೈತಭಾವನೆಗಳನ್ನು ನಾಶಮಾಡಿ, ಅದಕ್ಕೆ ಕಾರಣವಾದ ಹಲವು ಶಕ್ತಿಗಳನ್ನು ಮೂಲದೇವತೆಯೊಡನೆ ವಿಲೀನಗೊಳಿಸುವ ಭಾವನೆಯೇ ಹೋಮ ಎಂದು ತಿಳಿಸಲಾಗಿದೆ. ಇದರೊಂದಿಗೆ ಶ್ರೀಅಪ್ಪಯ್ಯದೀಕ್ಷಿತರ ಭಾಷ್ಯವನ್ನೂ ಆಸಕ್ತರ ಅವಗಾಹನೆಗಾಗಿ ನೀಡಲಾಗಿದೆ. ಇಲ್ಲಿ ದೀಕ್ಷಿತರು ಪರಾಶಕ್ತಿಯ ನಿರ್ಗುಣೋಪಾಸನೆಯನ್ನು ಒತ್ತಿ ಹೇಳಿದ್ದಾರೆ.

ಇದರೊಂದಿಗೆ ತ್ರೈಪುರದ ಷೋಡಶಾರ್ಚನೆಯ ಸೂಕ್ತಗಳನ್ನು ಪರದೇವತೆಯ ವಿನಿಯೋಗದ ಪಾರಾಯಣದಲ್ಲಿ ಸಕಲ ಭಕ್ತಜನರಿಗೆ ಅನುಕೂಲವಾಗಲೆಂದು ಶ್ರೀಭಾಸ್ಕರರಾಯ ಭಾಷ್ಯದೊಂದಿಗೆ ನೀಡಿದೆ. ಎಂಟನೆಯ ಋಕ್ ಕಾದಿವಿದ್ಯೆಯನ್ನು ಉದ್ಧರಿಸಿದೆ ಮತ್ತು ಒಂಬತ್ತನೆಯ ಋಕ್ ಹಾದಿವಿದ್ಯೆಯನ್ನು. ಪಂಚ'ಮ'ಕಾರಗಳ ಕಾರಣವಾಗಿ ಶ್ರೀಅಪ್ಪಯ್ಯದೀಕ್ಷಿತರು ಈ ಉಪನಿಷತ್ತನ್ನು ಸಾತ್ವಿಕರಿಗೆ ಪಾರಾಯಣಯೋಗ್ಯವೆಂದು ಹೇಳಿ ಕ್ಷತ್ರಿಯರಿಗೆ ಅನುಷ್ಠಾನಯೋಗ್ಯವೆಂದು ಅಭಿಪ್ರಯಿಸುತ್ತಾರೆ.

> ಪುಂರೂಪಂ ವಾ ಸ್ಮರೇದ್ದೇವೀಂ ಸ್ತ್ರೀರೂಪಂ ವಾ ವಿಚಿಂತಯೇತ್ ।
> ಅಥವಾ ನಿಷ್ಕಲಂ ಧ್ಯಾಯೇತ್ ಸಚ್ಚಿದಾನಂದಲಕ್ಷಣಮ್ ॥

ಮುಂತಾದ ಪ್ರಮಾಣಗಳು ತಮ್ಮ ತಮ್ಮ ಇಚ್ಛಾನುಸಾರವಾಗಿ ಪುರುಷ, ಸ್ತ್ರೀ ಯಾ ನಿರ್ಗುಣಬ್ರಹ್ಮ ರೂಪಗಳಲ್ಲಿ ಪರದೇವತೆಯನ್ನು ಧ್ಯಾನಿಸಬೇಕೆಂದು ತಿಳಿಸುತ್ತದೆ. ಲೋಕದಲ್ಲಿ ಶ್ರೀವಿದ್ಯೆಯ ಸುಮಾರು ಹನ್ನೆರಡು ಭೇದಗಳಿದ್ದರೂ, ಕಾದಿ ಮತ್ತು ಹಾದಿ ವಿದ್ಯೆಗಳು ಹೆಚ್ಚಾಗಿ ಪ್ರಚಲಿತವಾಗಿವೆ. ಮನು, ಚಂದ್ರ, ಕುಬೇರ, ಲೋಪಾಮುದ್ರಾ, ಮನ್ಮಥ, ಅಗಸ್ತ್ಯ, ನಂದಿಕೇಶ, ಸೂರ್ಯ, ವಿಷ್ಣು, ಷಣ್ಮುಖ, ಶಿವ ಮತ್ತು ದುರ್ವಾಸ ಇವರು ಹನ್ನೆರಡು ವಿದ್ಯೆಗಳ ದ್ರಷ್ಟಾರರು ಎಂದು ಹೇಳಲಾಗಿದೆ. 'ಕಾದಿ ವಿದ್ಯೇತಿ ವಾ ಹಾದಿ ವಿದ್ಯೇತಿ ವಾ ಸಾದಿ ವಿದ್ಯೇತಿ ವಾ ರಹಸ್ಯಮ್' ಎಂದು ಬಹ್ವೃಚೋಪನಿಷತ್ತಿನಲ್ಲಿ ಹೇಳಿದ ಕ್ರಮದಂತೆ ಶ್ರೀವಿದ್ಯೆಯನ್ನು ಸ್ಥೂಲವಾಗಿ ಮೂರು ವಿಭಾಗವಾಗಿ ತಿಳಿಸಿದೆ. ಜ್ಞಾನಾರ್ಣವ ತಂತ್ರದಂತೆ ಚಂದ್ರ ಮತ್ತು ನಂದಿಯರು ಸಾದಿ ವಿದ್ಯೋಪಾಸಕರು; ಲೋಪಾಮುದ್ರೆಯು ಹಾದಿವಿದ್ಯೋಪಾಸಕಿ. ಮನು, ಮನ್ಮಥ, ದುರ್ವಾಸ ಇತರರು ಕಾದಿ ವಿದ್ಯೋಪಾಸಕರು. 'ವಿದ್ಯಾದ್ವಯಮಿದಂ ಭದ್ರೇ ದೇವಾನಾಮಪಿ ದುರ್ಲಭಮ್ ।' ಎಂಬ ವಾಕ್ಯವು ಲೋಪಾಮುದ್ರಾ, ಕಾಮರಾಜ ವಿದ್ಯೆಗಳನ್ನು ಹನ್ನೆರಡರಲ್ಲಿಯೂ ಅತೀ ಶ್ರೇಷ್ಠವಾದುದೆಂದು ತಿಳಿಸಿ ಪ್ರಶಂಸಿಸಿದೆ. ಉಪಾಸನೆಯು ವಾಮಮಾರ್ಗ ದಕ್ಷಿಣಮಾರ್ಗ ಎಂದು ಎರಡು ವಿಧವಾಗಿದೆ.

ಶ್ರೀಭಾಸ್ಕರರಾಯರ ಭಾಷ್ಯದೊಂದಿಗೆ ದುರ್ಲಭವಾದ ಕೌಲೋಪನಿಷತ್ತನ್ನು ಪಾರಾಯಣದ ಮೂಲಕ ಪುರುಷಾರ್ಥಸಿದ್ಧಿಗೆ ಈ ಗ್ರಂಥದಲ್ಲಿ ಸೇರಿಸಲಾಗಿದೆ. ಭಾಸ್ಕರರ ಅಭಿಪ್ರಾಯದಂತೆ ಈ ಉಪನಿಷತ್ತು ಧರ್ಮ ಅಥವಾ ವಿಮರ್ಶಾಶಕ್ತಿಯ ಜಿಜ್ಞಾಸೆಗೆ ಸಂಬಂಧಿಸಿದ್ದಾಗಿದೆ. ವಿಮರ್ಶಾಶಕ್ತಿಯು ಧರ್ಮವಾಗಿದ್ದಾಳೆ, ಏಕೆಂದರೆ ಧರ್ಮಿಯಾದ ಬ್ರಹ್ಮನಲ್ಲಿ ಧರ್ಮವು ಅಂತರ್ಗತವಾಗಿದೆ. ಮತ್ತು ಅದರಲ್ಲಿ ಬ್ರಹ್ಮ ಮತ್ತು ವಿಮರ್ಶಾಶಕ್ತಿಯ ಐಕ್ಯವನ್ನೂ ಸಾಧಿಸಲಾಗಿದೆ.

ಬಹ್ವೃಚೋಪನಿಷತ್ತನ್ನು ಶ್ರೀಅಪ್ಪಯ್ಯದೀಕ್ಷಿತರ ಭಾಷ್ಯದೊಂದಿಗೆ ಸೇರಿಸಲಾಗಿದೆ. ಅದರಲ್ಲಿ ಅವರು ಕಾದಿ ಮತ್ತು ಹಾದಿ ವಿದ್ಯೆಗಳೊಂದಿಗೆ ಸಾದಿವಿದ್ಯೆಯನ್ನೂ ಪ್ರಸ್ತಾಪಿಸುತ್ತಾರೆ. ಮೋಕ್ಷಗಾಮಿಗಳಿಗೆ ನಿರ್ಗುಣೋಪಾಸನೆಯನ್ನೂ ಮತ್ತು ಅಭ್ಯುದಯಪರರಿಗೆ ಸಗುಣೋಪಾಸನೆಯನ್ನೂ ಅದರಲ್ಲಿ ವಿಧಿಸಲಾಗಿದೆ. ತೈತ್ತರೀಯ ಆರಣ್ಯಕದ ಅರುಣೋಪನಿಷತ್ತನ್ನು ಶ್ರೀಲಕ್ಷ್ಮೀಧರರ ಶ್ರೀವಿದ್ಯೆಯ ಪರವಾದ ವ್ಯಾಖ್ಯೆಯೊಂದಿಗೆ ನೀಡಿದೆ. ಅರುಣಾ ಅಂದರೆ ಕೆಂಪಗಿರುವವಳು ಮತ್ತು ಕೆಂಪಾಗಿರುವುದು ವಿಮರ್ಶೆಯಾಗಿದೆ. ಮತ್ತು ದೇವ್ಯಥರ್ವಶೀರ್ಷ ಉಪನಿಷತ್ತು ಪಾರಾಯಣ ಮಾತ್ರದಿಂದಲೇ ಮಹಾಫಲಪ್ರದವಾಗಿವೆ. ಅದ್ವೈತಭಾವನೋಪನಿಷತ್, ಕೌಲೋಪನಿಷತ್ತಿನ ಪಾಠಾಂತರ, ಕಾಲಿಕೋಪನಿಷತ್ ಮತ್ತು ತಾರೋಪನಿಷತ್ತನ್ನು ಆಸಕ್ತರ ಅವಗಾಹನೆಗಾಗಿ ಸೇರಿಸಿದೆ.

भावनोपनिषत् ।

(भास्करराय भाष्य सहित)

ಭಾವನೋಪನಿಷತ್

(ಭಾಸ್ಕರರಾಯ ಭಾಷ್ಯ ಸಹಿತ)

ಸ್ವಾವಿದ್ಯಾಪದತತ್ಕಾರ್ಯಂ ಶ್ರೀಚಕ್ರೋಪರಿ ಭಾಸುರಮ್ ।
ಬಿಂದುರೂಪಶಿವಾಕಾರಂ ರಾಮಚಂದ್ರಪದಂ ಭಜೇ ॥

ओं भद्रंकर्णेभिः श्रुणुयाम देवाः भद्रं पश्येमाक्षभिर्यजत्राः ।
स्थिररङ्गैःस्तुष्टुवाग्ं सस्तनूभिः व्यशेमदेवहितं यदायूः ।
स्वस्तिनः इन्द्रो वृद्धश्रवा स्वस्तिनः पूषा विश्ववेदाः ।
स्वस्तिनस्ताक्ष्र्यो अरिष्टनेमिः स्वस्तिनो बृहस्पतिर्दधातु ॥

ಓಂ ಭದ್ರಂಕರ್ಣೇಭಿಃ ಶ್ರುಣುಯಾಮ ದೇವಾಃ ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।
ಸ್ಥಿರೈರಂಗೈಃಸ್ತುಷ್ಟುವಾಗ್ಂ ಸಸ್ತನೂಭಿಃ ವ್ಯಶೇಮದೇವಹಿತಂ ಯದಾಯೂಃ ।
ಸ್ವಸ್ತಿನಃ ಇಂದ್ರೋ ವೃದ್ಧಶ್ರವಾ ಸ್ವಸ್ತಿನಃ ಪೂಷಾ ವಿಶ್ವವೇದಾಃ ।
ಸ್ವಸ್ತಿನಸ್ತಾರ್ಕ್ಷ್ಯೋ ಅರಿಷ್ಟನೇಮಿಃ ಸ್ವಸ್ತಿನೋ ಬೃಹಸ್ಪತಿರ್ದಧಾತು ॥

ಹರಿಃ ಓಂ ಆತ್ಮಾನಮಖಂಡಮಂಡಲಾಕಾರಮಾವೃತ್ಯ ಸಕಲಬ್ರಹ್ಮಾಂಡಮಂಡಲಂ ಸ್ವಪ್ರಕಾಶಂ ಧ್ಯಾಯೇತ್ ॥

ಭಾಸ್ಕರರಾಯ ವಿರಚಿತ ಭಾವನೋಪನಿಷತ್ ಭಾಷ್ಯ.

ಶ್ರೀನಾಥಾಂಘ್ರಿಪರಾಗೈಕೋಪರಾಗಾದಪರಾಗಧೀಃ ।
ಭಾವನೋಪನಿಷದ್ಭಾಷ್ಯಂ ಭಾಷಿತೇ ಭಾಸ್ಕರಸ್ಸುಧೀಃ ॥

ಶ್ರೀತ್ರಿಪುರಸುಂದರೀಯ ಸ್ಥೂಲ-ಸೂಕ್ಷ್ಮ-ಪರಾ ಭೇದದಿಂದ ಮೂರು ವಿಧವಾಗಿ ಮಾಡುವ ಉಪಾಸನೆಯೆಂಬ ಕ್ರಿಯೆಯು ಮೂರು ವಿಧವಾಗಿದೆ ಕಾಯಿಕೀ-ವಾಚಿಕೀ-ಮಾನಸೀ ಎಂದು. ಅವುಗಳನ್ನೇ ಬಹಿರ್ಯಾಗ-ಅಂತರ್ಯಾಗ-ಭಾವನಾ ರೂಪವೆಂದು ತಿಳಿಸಿ, ಒಂದೊಂದರಲ್ಲೂ ಅನೇಕ ವಿಧಗಳು ಸಮ್ಮಿಳಿತವಾಗಿರುವುದರಿಂದ ಪ್ರಾಧಾನ್ಯತೆಯನ್ನು ಹೇಳುವುದಾದರೆ ಕಾಯಿಕಕ್ರಿಯೆಗಳಿಗೇ ಇರುವುದು. ಮೊದಲ ಎರಡನ್ನು ತ್ರಿಪುರತಾಪಿನೀ ಮೊದಲಾದ ಉಪನಿಷತ್ತುಗಳಲ್ಲಿ ಉಪದೇಶಿಸಿದ್ದು, ರಹಸ್ಯವಾಗಿರುವ ಕಾಲಚಕ್ರದಲ್ಲಿ ಅಂತರ್ಗತವಾದ ಶ್ರೀಚಕ್ರದ ಭಾವನಾ ಎಂಬ ಹೆಸರಿನ ಮೂರನೆಯ ವಿಧದ ಉಪಾಸನೆಯನ್ನು ಅಥರ್ವವೆಂಬ ಆದಿವೇದಪುರುಷನು ಯೋಗಿಜನರಿಗೆ ಪ್ರಕಟಿಸಿದ್ದು, ಮೊದಲಿಗೆ ಸದ್ಗುರುವಿನ ಶ್ರೇಷ್ಠವಾದ ರೂಪವನ್ನು ತಿಳಿಸಲು 'ಶ್ರೀಗುರುಃ

ಸರ್ವಕಾರಣಭೂತಾ ಶಕ್ತಿಃ' ಎಂದು ಮುಂತಾಗಿ ಎರಡು ಆರಂಭಿಕ ವಾಕ್ಯಗಳಿವೆ. ಈ ಉಪನಿಷತ್ತಿನಲ್ಲಿ ಕೇಳಿಬರುವ 'ಭಾವನಾಪರೋ ಜೀವನ್ಮುಕ್ತೋ ಭವತಿ' ಎಂಬ ವಾಕ್ಯವು ಆಮ್ನಾಯವಾಕ್ಯಗಳಂತಿದ್ದು, ಜೀವನ್ಮುಕ್ತಿಯ ಭಾವನೆಯಿಂದಲೇ ಲಭಿಸುವುದು ಎಂದು ಭಾವನೆಯ ಪರಿಣಾಮವನ್ನು ತಿಳಿಸಿರುವುದು ಒಂದು ಅಪೂರ್ವವಿಧಿಯಾಗಿದೆ. ಅರ್ಥಭಾವನೆಯನ್ನು ಕರಣೀಭೂತಗೊಳಿಸಿ ಭಾವ್ಯಾರ್ಥದ ಪರರೂಪಭಾವನೆಗೆ ಸ್ವರ್ಗದಂತೆ ಲೌಕಿಕತೆ ಇರುವುದರಿಂದ ಅದರ ಸ್ವರೂಪನಿರೂಪಣೆಗೆಂದು ಸರ್ವವೂ ಶ್ರೀಗುರುಃಸ್ವರೂಪ ಎಂದು ಮುಂತಾಗಿ ಹೇಳಲಾಗಿದೆ. ಅದರಿಂದ 'ಯನ್ನ ದುಃಖೇನ' ಮುಂತಾದ ವಾಕ್ಯಗಳಂತಹ ವಿಧಿವಾಕ್ಯಗಳಂತೆ ಸ್ವಾರ್ಥದಲ್ಲಿ ಪ್ರಮಾಣವಾಗಿ ಸ್ವೀಕರಿಸಬಹುದು. ಅದರ ಭಾವನೆಯು ಕಾದಿಮತ–ಕೌಲಮತ ಭೇದವೆಂಬ ಎರಡು ಲಕ್ಷಣಗಳಿಂದ ತಂತ್ರಗಳಲ್ಲಿ ಲಭ್ಯವಿದ್ದು, ಹಾಗೆಯೇ ಪ್ರಕೃತ ಉಪನಿಷತ್ತಿನಲ್ಲಿ ಕಾದಿಮತಾನುಸಾರಿಯಾಗಿ ವರ್ಣಿಸಿರುವುದು; 'ಕಾದಿಮತೇನಾಂತಶ್ಚಕ್ರಭಾವನಾಃ ಪ್ರತಿಪಾದಿತಾ, ಯ ಏವಂ ವೇದ' ಎಂದು ಅದು ಉಪಸಂಹಾರವಾಗಿರುವುದು. ಶಾಖಾಭೇದದಿಂದ ಈ ಉಪನಿಷತ್ತಿನ ಪಾಠದಲ್ಲಿ ಭೇದಗಳು ಕಂಡುಬಂದು, ಕಾದಿಮತದ ತಂತ್ರಸೂತ್ರಗಳಲ್ಲಿರುವ ವಿವರಣೆಗಳಿಗೆ ಅನುಗುಣವಾದ ಪಾಠವನ್ನು ಅನುಸರಿಸಿ ನಾನು ವ್ಯಾಖ್ಯಾನಿಸಿರುವೆನು. ಹಾಗಾಗಿಯೇ ಪ್ರಯೋಗವಿಧಿಯನ್ನು ಬರೆಯುವ ಸಮಯದಲ್ಲಿ ಪ್ರಕೃತಶಾಖೆಯ ಅಂಶಗಳನ್ನು, ನಿತ್ಯಾಹೃದಯ, ತಂತ್ರರಾಜ, ಬಿಂದುಸೂತ್ರ ಮೊದಲಾದವುಗಳನ್ನೂ ಆಧರಿಸಿರುವೆನು. (ಪ್ರಯೋಗವಿಧಿಯನ್ನು ಪ್ರತ್ಯೇಕವಾದ ಹೊತ್ತಗೆಯಾಗಿ ಪ್ರಕಟಿಸಿರುವುದರಿಂದ ಇಲ್ಲಿ ಪ್ರಕಾಶಿಸಿಲ್ಲ).

> श्रीगुरुस्सर्वकारणाभूता शक्तिः ॥ १ ॥
>
> ಶ್ರೀಗುರುಸ್ಸರ್ವಕಾರಣಭೂತಾ ಶಕ್ತಿಃ ॥ 1 ॥

> तेन नवरन्ध्ररूपो देहः ॥ २ ॥
>
> ತೇನ ನವರಂಧ್ರರೂಪೋ ದೇಹಃ ॥ 2 ॥

ಈ ಎರಡು ವಾಕ್ಯಗಳನ್ನು ತಂತ್ರರಾಜದಲ್ಲಿ ಹೀಗೆ ವಿವರಿಸಿದ್ದಾರೆ:

> ಗುರುರಾದ್ಯಾ ಭವೇಚ್ಛಕ್ತಿಸ್ಸಾ ವಿಮರ್ಶಮಯೀ ಮತಾ ।
> ನವತ್ವಂ ತಸ್ಯ ದೇಹಸ್ಯ ರಂಧ್ರತ್ವೇನಾವಭಾಸತೇ ॥

ಎಂದು. ಇಲ್ಲಿ ಆದಿ ಎಂಬ ಶಬ್ದವು ಸರ್ವಕಾರಣಭೂತವಾಗಿರುವುದರ ವಿವರಣೆಯಾಗಿದೆ; ಕಾರಣವು ಕಾರ್ಯದ ಪೂರ್ವಭಾವವಾಗಿರುವುದರಿಂದ. ಈಶ್ವರಾನುಗ್ರಹದಿಂದ ಉತ್ಪತ್ತಿಯಾಗುವ ವಿವೇಕವು ಸರ್ವ ಸಂಶಯಭೇದಗಳಿಗೆ ಮಂತ್ರವೀರ್ಯಪ್ರಕಾಶದಿಂದ ತಾತ್ತ್ವಿಕಪದಾರ್ಥಗಳಲ್ಲಿ ಅವಕಾಶಕಲ್ಪಿಸುವುದನ್ನು ವಿಮರ್ಶ ಪದದಿಂದ ಕರೆಯಲಾಗಿರುವ ಗುರು ಎನ್ನಲಾಗಿದೆ. ಮತ್ತು ಗುರುವು ರಂಧ್ರಗಳಿಂದ ಅಭಿನ್ನನಾಗಿರುವನು. ಅವುಗಳಲ್ಲಿ ಎರಡು ಶ್ರೋತ್ರಗಳು ಮತ್ತು ವಾಕ್ ದಿವ್ಯೌಘ, ಎರಡು ಕಣ್ಣುಗಳು ಮತ್ತು ಉಪಸ್ಥ ಸಿದ್ಧೌಘ, ಮೂಗು ಮತ್ತು ಪಾಯಿ (ಗುದ) ಮಾನವೌಘ (ಗುರು ಪರಂಪರೆ) ಎಂಬುದು ಸಂಪ್ರದಾಯವು. ಇಂತಹ ವಿಮರ್ಶನವಕವು ಮೂಲಭೂತವಾಗಿ ಸುಷುಮ್ನಾನಾಡೀಯಲ್ಲಿಯೇ ಇರುವುದಾಗಿ, ನವರಂಧ್ರಗಳು ಸುಷುಮ್ನಾದ ಮೂಲದಲ್ಲಿರುವ ಶ್ರೋತ್ರ ಮುಂತಾದ ನಾಡೀಗಳಿಗೆ ಸಂಬಂಧಿಸಿರುವುದರಿಂದ, ಸುಷುಮ್ನಾವನ್ನು ಆವರಿಸಿರುವ ಚಿಚ್ಛಕ್ತಿಯೇ ಆಯಾಯ ನಾಡೀಗಳ ಮೂಲಕ ಆಯಾಯ ವಿಷಯಗಳ ಅವಭಾಸ ಮಾಡಿಸುವುದು. ನಾಡೀಗಳು ಇರುವ ಪ್ರಕಾರವನ್ನು

ಪ್ರಾಗುಕ್ತಮೂಲಾಧಾರಸ್ಯ ಮಧ್ಯಸ್ಥತ್ರ್ಯಸ್ರಮಧ್ಯತಃ ।
ಸುಷುಮ್ನಾ ಪೃಷ್ಠವಂಶಾಖ್ಯವೀಣಾದಂಡಸ್ಯ ಮಧ್ಯಗಾ ॥
ಮೂರ್ಧನಿ ಬ್ರಹ್ಮರಂಧ್ರಾಂತಾ ನಾಸಾಗ್ರಾದ್ದ್ವಾದಶಾಂಗುಲಾ ।
ತನ್ಮೂಲಾತ್ಪಾಯುಗಾ ಪ್ರೋಕ್ತಾಽಲಂಬುಸಾಖ್ಯಾ ತು ನಾಡಿಕಾ ॥
ತ್ರ್ಯಸ್ರಾಗ್ರಾದುತ್ಥಿತಾ ನಾಶೀ ಕುಹುರ್ನಾಮ ಧ್ವಜಾಂತಗಾ ।
ತದ್ವಾಮದಕ್ಷಪಾರ್ಶ್ವಾಭ್ಯಾಂ ದ್ವೇ ವಿಶ್ವೋದರವಾರುಣೇ ॥
ಜಠರಾಂತಾ ಸರ್ವಗಾ ಚ ಪ್ರೋಕ್ತೇ ತದ್ವದನಂತರೇ ।
ಹಸ್ತಿಜಿಹ್ವಾಯಶಸ್ವಿನ್ಯೌ ಪಾದಾಂಗುಷ್ಠಾಂತವಿಸ್ತೃತೇ ॥
ತಥೈವೇಡಾಪಿಂಗಲೇ ದ್ವೇ ನಾಸಾರಂಧ್ರದ್ವಯಾಂತಗೇ ।
ಗಾಂಧಾರೀ ಚ ತಥಾ ಪೂಷಾ ನೇತ್ರದ್ವಯಗತೇ ಕ್ರಮಾತ್ ॥
ತಥೈವ ಕರ್ಣಗಾಮಿನ್ಯೌ ಶಂಖಿನೀ ಚ ಪಯಸ್ವಿನೀ ।
ಜಿಹ್ವಾಗ್ರಗಾ ಸರಸ್ವತ್ಯಾಖ್ಯೈವಂ ನಾಡ್ಯಶ್ಚತುರ್ದಶ ॥

ಎಂದು ಹೇಳಿದೆ. ಮೂಲಾಧಾರದ ನಾಡೀಗಳ ಸ್ಥಿತಿಕ್ರಮವನ್ನು

ಮೂಲಾಧಾರೇ ತ್ರ್ಯಸ್ರಮಧ್ಯೇ ಸುಷುಮ್ನಾಽಲಂಬುಸೇ ಉಭೇ ।
ಪ್ರಾಕ್‌ಪ್ರತ್ಯಗಾಸ್ಥಿತೇ ಅನ್ಯಾಸ್ತ್ರಿಕೋಣಾಗ್ರಾತ್‌ಪ್ರದಕ್ಷಿಣಾಃ ॥
ಯಾ ಲೇಖಾಸಂಸ್ಥಿತಾ ನಾಡ್ಯಃ ಕುಹುಶ್ಚೈವ ತು ವಾರುಣಾ ।
ಯಶಸ್ವಿನೀ ಪಿಂಗಲಾ ಚ ಪೂಷಾನಾಮ್ನೀ ಪಯಸ್ವಿನೀ ॥
ಸರಸ್ವತೀ ಶಂಖಿನೀ ಚ ಗಾಂಧಾರೀ ತದನಂತರೇ ।
ಇಡಾ ಚ ಹಸ್ತಿಜಿಹ್ವಾ ಚ ತತೋ ವಿಶ್ವೋದರಾಭಿಧಾ ॥
ರಂಧ್ರಪಾಯುಧ್ವಜಾಶೇಷಪನ್ನಾಸಾನೇತ್ರಕರ್ಣಯೋಃ ।
ಜಿಹ್ವಾಕರ್ಣಾಕ್ಷಿನಾಸಾಂಘ್ರಿಜಠರಾಂತಾಶ್ಚತುರ್ದಶ ॥

ಎಂದಿದೆ. 'ಗುರುರುಪಾಯಃ' ಎಂಬ ಶಿವಸೂತ್ರಕ್ಕೆ ವಾರ್ತಿಕ ಹೇಳುತ್ತಾ

ಗುರುರೇವ ಪರಾ ಶಕ್ತಿರೀಶ್ವರಾನುಗ್ರಹಾತ್ಮಿಕಾ ।
ಅವಕಾಶಪ್ರದಾನೇನ ಸೈವ ಯಾಯಾದುಪಾಯತಾಮ್ ॥
ಅಕೃತ್ರಿಮಾಹಮಾಮರ್ಶಸ್ವರೂಪಾದ್ಯಂತವೇದನಾತ್ ।
ಪರಮೇಷ್ಠಿಸಮತ್ವೇನ ಪರಮೋಪಾಯತಾ ಗುರೋಃ ॥

ಎಂದಿದ್ದಾರೆ.

ಸಗುರುರ್ಮತ್ಸಮಃ ಪ್ರೋಕ್ತೋ ಮಂತ್ರವೀರ್ಯಪ್ರಕಾಶಕಃ ।
ಆದಿಮಧ್ಯಾಂತಹೀನಾಸ್ತು ಮಂತ್ರಾಃ ಸ್ಯುಃ ಶರದಭ್ರವತ್ ।
ಗುರೋರ್ಲಕ್ಷಣಮೇತಾವದಾದಿಮಾಂತ್ಯಂ ನಿವೇದಯೇತ್ ॥ ಮಾಲಿನೀತಂತ್ರ ॥

ಅಂತಹ ವಿವೇಕವೆಂಬ ವೃತ್ತಿಯಿಂದ ಅವಚ್ಛಿನ್ನಳಾದ ಚಿಚ್ಛಕ್ತಿಯು ಪ್ರಾಣಶಕ್ತಿಯಾಗಿ ಸುಷುಮ್ನಾನಾಡೀಯಲ್ಲಿ ವಿಹರಿಸುವಾಗ ವಿಮರ್ಶಮಯೀ ಎಂದು ಕರೆಯಲ್ಪಟ್ಟಿದ್ದಾಳೆ. ಶ್ರೀಗುರುವು ಅವಳ ದಿವ್ಯ–ಸಿದ್ಧ–ಮಾನವ ಓಘಭೇದವಿರುವ ಮೂರು ರೂಪಗಳು. ಅವುಗಳಲ್ಲಿ ಪ್ರತಿಯೊಂದೂ ಪುನಃ ಮೂರುವಿಧವಾಗಿ ಪ್ರಕಾಶಾನಂದನಾಥನಿಂದ ಸುಭಗಾನಂದನಾಥನವರೆಗಿನ ಒಂಬತ್ತು ರೂಪಗಳಿಂದ ತಂತ್ರಗಳಲ್ಲಿ ಪ್ರಸಿದ್ಧವಾಗಿದೆ. ಅವಳ ಸ್ಥಿತಿಯನ್ನು ತಿಳಿಸುವ **ತೇನೇತಿ.** ವಿಮರ್ಶಶಕ್ತಿಯ ಸ್ವರೂಪವು ನವರಂಧ್ರಮಯವಾಗಿದೆ. ಶ್ರೋತ್ರ, ಚಕ್ಷು, ಮೂಗು ಎರಡೆರಡರಂತೆ ಆರು; ನಾಲಗೆ, ಗುಹ್ಯ, ಗುದ ಮೂರು ಸೇರಿ ಒಂಬತ್ತು ರಂಧ್ರಗಳು ತಮ್ಮ ತಮ್ಮ ವಿಷಯಗಳ ವಿಮರ್ಶೆಯಿಂದ ಲಭಿಸುವ ಉಪದೇಶವನ್ನು ಗ್ರಹಣಮಾಡಿ ಕಾರ್ಯಮಾಡುವ ಸಾಧರ್ಮ್ಯವನ್ನು ಮೆರೆಯುವುದರಿಂದ ಅವುಗಳು ವಿಮರ್ಶಾರೂಪವಾಗಿವೆ. ಅವಳಿಂದ ಅಭಿನ್ನವಾದ ಸ್ವದೇಹವೂ ರಂಧ್ರನವಕಗಳಿಮ್ದ ಕೂಡಿರುವುದು ಎಂಬ ಅರ್ಥ. ತಂತ್ರರಾಜದಲ್ಲಿ ಕೂಡ ಅವಳಿಗೆ ನವತ್ವವು ಅನವಯವಾಗುವುದೇ ವಿನಃ ದೇಹ ಪದಕ್ಕೆ ಅನ್ವಯವಾಗುವುದಿಲ್ಲ. ದೇಹರಂಧ್ರಗಳ ನವತ್ವದಿಂದ ಗುರುವಿನ ನವತ್ವವು ಭಾವಿಸಲ್ಪಡುತ್ತದೆ. ಸ್ವದೇಹದಲ್ಲಿರುವ ನವರಂಧ್ರಗಳು ನವನಾಥರಾಗಿವೆ. ಅದರಿಂದ ರಂಧ್ರನವಕಗಳ ಕಾರ್ಯಗಳಾದ ತಮ್ಮ ತಮ್ಮ ವಿಷಯವಿಮರ್ಶೆಯ ಸಮಷ್ಟಿಯು ಗುರುವಿನೊಡನೆ ಅಭೇದವಾಗಿ ಭಾವಿಸಲ್ಪಡುವುದು ಎಂಬುದು ಸಿದ್ಧವಾಗುವುದು. ಕೆಲವರು ಶ್ರೋತ್ರಾದಿ ಅವಯವಗಳು ಮತ್ತು ಅವುಗಳ ನಾಡೀಗಳೊಡನೆ ಅಭೇದಭಾವನೆ ಇರಬೇಕು ಎಂದು ಹೇಳುತ್ತಾರೆ. [1–2]

नवचक्ररूपं श्रीचक्रम् ॥ ३ ॥
ನವಚಕ್ರರೂಪಂ ಶ್ರೀಚಕ್ರಮ್ ॥ 3 ॥

ದೇಹ ಪದವನ್ನು ಸೇರಿಸಿಕೊಳ್ಳಬೇಕು. ಸ್ವಕೀಯದೇಹವೇ ತ್ರೈಲೋಕ್ಯಮೋಹನ ಮೊದಲಾದ ಒಂಬತ್ತು ಚಕ್ರಗಳ ಸಮಷ್ಟಿರೂಪದ ಶ್ರೀಚಕ್ರದಿಂದ ಅಭಿನ್ನವಾಗಿದೆ. ಚಕ್ರವಿಭಾಗಗಳಲ್ಲಿರುವ ಆವರಣಾದೇವತೆಗಳ ಸ್ಥಾನಗಳು ಶಾಖಾಭೇದದಿಂದ ವಿವರಿಸಲ್ಪಡುವುದರಿಂದ ರಹಸ್ಯವಾಗಿವೆ. ಹಾಗಾಗಿಯೇ ತಂತ್ರರಾಜದಲ್ಲಿ ಹೇಳಿರುವುದನ್ನು ನಿತ್ಯಾಷೋಡಶಿಕಾರ್ಣವದಲ್ಲಿ ವಿವರಿಸಿದೆ. ಅದನ್ನು ಬಿಂದುಸೂತ್ರದಲ್ಲಿ 'ಅಪರಶಿವೋದಿತವ್ಯಾಕುಲಸ್ಥಾನನಿರ್ಣೀತ–ಚರಣದೇಶಿಕಪ್ರಸಾದಾಧಿಗತವಿಭಾವನಾರಹಸ್ಯಮುಪಸಂಹಾರಮ್' ಎಂದು ಹೇಳಿದೆ. ಒಬ್ಬ ಶಿವನು ತಂತ್ರಕರ್ತನಾಗಿ ಪ್ರಸಿದ್ಧನಾದರೆ, ಅಪರಶಿವ ಅಂದರೆ ವೇದಪುರುಷನು ಕೂಡ ಶಾಖಾಭೇದಗಳಲ್ಲಿ ಉಕ್ತವಾಗಿರುವ ಸ್ಥಾನಗಳನ್ನು ನಿರ್ಣಯಿಸಲು ಅಸಮರ್ಥನಾಗಿ ವ್ಯಾಕುಲನಾಗಿರುವನು; ಗುರುವಿನ ಪ್ರಸಾದದಿಂದ ಲಭಿಸಿರುವ ಅದರ ಭಾವನಾರಹಸ್ಯ ಮತ್ತು ಅಂತಹ ದೇಹರೂಪವಾದ ಶ್ರೀಚಕ್ರದ ಪರೋಕ್ಷಾನುಭವಗಳು ರಹಸ್ಯವಾಗಿರುವುವು ಎಂದು ಅದರ ಅರ್ಥವು ಎಂದು ಪದ್ಮಪಾದಾಚಾರ್ಯರು ವರ್ಣಿಸಿರುವರು.

'ಅಟ್ಟಶೂಲಾ ಜನಪದಾಃ ಶಿವಶೂಲಾಶ್ಚತುಷ್ಪಥಾಃ ॥' ಎಂಬ ಭಾರತಶ್ಲೋಕದಲ್ಲಿ ಶಿವಶಬ್ದವು ವೇದಪರವಾಗಿ ಪ್ರಯೋಗವಾಗಿದೆ. ಅಪರಶಿವೈಃ ಅಂದರೆ ಶಾಖಾಂತರಗಳಲ್ಲಿ ಎಂಬ ಅರ್ಥವನ್ನು ಹೇಳಬಹುದು. [3]

वाराहीपितृरूपा कुरुकुल्लाबलिदेवतामाता ॥ ४ ॥
ವಾರಾಹೀಪಿತೃರೂಪಾ ಕುರುಕುಲ್ಲಾಬಲಿದೇವತಾಮಾತಾ ॥ 4 ॥

पुरुषार्थास्सागराः ॥ ५ ॥

ಪುರುಷಾರ್ಥಾಸ್ಸಾಗರಾಃ ॥ 5 ॥

ಸ್ವದೇಹ ಇಂದ್ರಿಯ ಬುದ್ಧಿ ಮೊದಲಾದವುಗಳು ಸಂಕ್ರಾಂತವಾಗಿರುವ ಈ ಜನಕ–ಜನನೀ ಅಂಶವಿಶೇಷವು ಅಸ್ಥಿ, ಮಾಂಸ ಮೊದಲಾದ ರೂಪತ್ವವಿರುವುದರಿಂದ ವಾರಾಹೀ–ಕುರುಕುಲ್ಲಾ ಎಂಬ ಕ್ರಮದಿಂದ ಭಾವಿಸಲ್ಪಡುವುದು. ವಾರಾಹೀಯು ಸ್ತ್ರೀರೂಪವಾದರೂ ಇಲ್ಲಿ ಪುಂರೂಪದಿಂದ ಪಿತೃರೂಪವಾಗಿ ಪರಿಗಣಿಸಿದೆ. ಪಶ್ಚಿಮದಿಂದ ಉತ್ತರದವರೆಗೆ ಕಂಡುಬರುವ ಇಕ್ಷು–ಇರಾ–ಘೃತ–ಕ್ಷೀರ ಸಾಗರಗಳು ಸ್ವಧರ್ಮವಾದ ಪುರುಷಾರ್ಥ ಚತುಷ್ಟಯ ರೂಪವಾಗಿರುವುದು.

ಬಲಿದೇವ್ಯಃ ಸ್ವಮಾಯಾಯಾಃ ಸ್ಯುಃ ಪಂಚಮೀ ಜನಕಾತ್ಮಿಕಾ ।
ಕುರುಕುಲ್ಲಾ ಭವೇನ್ಮಾತಾ ಪುರುಷಾರ್ಥಾಸ್ತು ಸಾಗರಾಃ ॥ ತಂತ್ರರಾಜತಂತ್ರ ॥

ಇಲ್ಲಿನ ಪ್ರಥಮಚರಣವು ಶಾಖಾಂತರಮೂಲಕವಾಗಿದೆ. ಕುರುಕುಲ್ಲಾಳಿಗೆ ಬಲಿದೇವತಾತ್ವದ ಸಾಮರ್ಥ್ಯವು ವಿಶೇಷಣವಾಗಿ ಅಂತಹ ಬುದ್ಧಿಯನ್ನು ಉತ್ಪಾದಿಸಿ ಉನ್ಮಾರ್ಗಪ್ರವರ್ತಕಳಾಗಿರುವ ಶಕ್ತಿಯು ಎಂದು *ಸ್ವಮಾಯಾಃ* ಪದವು ತಿಳಿಸುವುದು ಎನ್ನುತ್ತಾನೆ ಮನೋರಮಾಕಾರನು. [4–5]

देहो नवरत्नद्वीपः ॥ ६ ॥

ದೇಹೋ ನವರತ್ನದ್ವೀಪಃ ॥ 6 ॥

त्वगादिसप्तधातुरोमसंयुक्तः ॥ ७ ॥

ತ್ವಗಾದಿಸಪ್ತಧಾತುರೋಮಸಂಯುಕ್ತಃ ॥ 7 ॥

सङ्कल्पाः कल्पतरवः तेजः कल्पकोद्यानम् ॥ ८ ॥

ಸಂಕಲ್ಪಾಃ ಕಲ್ಪತರವಃ ತೇಜಃ ಕಲ್ಪಕೋದ್ಯಾನಮ್ ॥ 8 ॥

ರಕ್ತ ಮೊದಲಾದ ಏಳು ಧಾತುಗಳು ತ್ವಕ್ ಮತ್ತು ರೋಮದೊಡನೆ ಸೇರಿಕೊಂಡು ನವರತ್ನರೂಪದ ಖಂಡನವಕಗಳಾಗಿವೆ. ಇಲ್ಲಿ ಸಂಪ್ರದಾಯದಂತೆ ಲಭಿಸುವ ಅರ್ಥದಲ್ಲಿ 'ಮಾಂಸರೋಮತ್ವಗ್ರುಧಿರಶುಕ್ರಮಜ್ಜಾಸ್ಥಿ–ಮೇದಓಜಾಂಸಿ ಪುಷ್ಯರಾಗನೀಲವೈಢೂರ್ಯವಿದ್ರುಮಮೌಕ್ತಿಕಮರಕತವಜ್ರಗೋಮೇದಪದ್ಮರಾಗತ್ಮಕನವರತ್ನ–ಮಯಖಂಡರೂಪಾಣಿ ಪ್ರತೀಚ್ಯಾದಿನಿಋತ್ಯಾಂತದಿಕ್ಷು ಮಧ್ಯೇಽವಸ್ಥಿತಾನೀತಿ ವಿಭಾವಯೇದಿತಿ', ಅಂದರೆ ಮಾಂಸ, ರೋಮ, ಚರ್ಮ, ರಕ್ತ, ಶುಕ್ರ, ಮಜ್ಜೆ, ಅಸ್ಥಿ, ಮೇದಸ್, ಓಜಸ್ ಎಂಬ ಧಾತುಗಳು ಪುಷ್ಯರಾಗ, ನೀಲ, ವೈಢೂರ್ಯ, ಹವಳ, ಮುತ್ತು, ಮರಕತ, ವಜ್ರ, ಗೋಮೇದಿಕ, ಪದ್ಮರಾಗ ಎಂಬ ರತ್ನಖಂಡಗಳಾಗಿ ಪೂರ್ವ ಮೊದಲಾದ ಎಂಟು ದಿಕ್ಕುಗಳು ಮತ್ತು ಮಧ್ಯಗಳಲ್ಲಿ ಸ್ಥಿತವಾಗಿರುವಂತೆ ಭಾವಿಸುವುದು. 'ಸರ್ವಶಾಖಾಪ್ರತ್ಯಯ–ಮೇಕಂ ಕರ್ಮ', 'ಸರ್ವವೇದಾಂತಪ್ರತ್ಯಯಮೇಕಮುಪಾಸನಮ್' ಎಂಬ ಪೂರ್ವೋತ್ತರಮೀಮಾಂಸದ ನ್ಯಾಯಗಳಂತೆ ಗುಣಗಳ ಉಪಸಂಹಾರದ ಆವಶ್ಯಕತೆಯು ಕಾಲಚಕ್ರೇಶ್ವರೀ ಮೊದಲಾದ ಒಂಬತ್ತು ದೇವತೆಗಳ ಭೇದದಿಂದ ಕೂಡ ಧಾತುಗಳು ಶಾಖಾಂತರದಲ್ಲಿ ಭಾವನೀಯವಾಗಿವೆ. ಆ ಪ್ರಕಾರವನ್ನು ಪ್ರಯೋಗವೂ

ಸ್ಪಷ್ಟೀಕರಿಸುತ್ತದೆ. ಮನಸಿನ ಸಂಕಲ್ಪ ವಿಶೇಷಗಳು ಸಂತಾನ ಮೊದಲಾದ ಕಲ್ಪವೃಕ್ಷಗಳಾಗಿವೆ; ಸಂಕಲ್ಪ ಪುರಸ್ಸರವಾದ ಕರ್ಮವೃತ್ತಿಯಿಂದ ಫಲಸಿದ್ಧಿಯಾಗುವುದು ಎಂಬ ಅಭಿಮತದಿಂದ. ಅದಕ್ಕೆ ಆಧಾರಭೂತವಾದ ತೇಜಸ್ಸು, ಮನಸ್ಸು ಕಲ್ಪಕೋದ್ಯಾನವಾಗಿದೆ. 'ಮನೋ ಜ್ಯೋತಿಃ' (ತೈ.ಸ. 1–5–3) ಎಂಬ ಶ್ರುತಿವ್ಯವಹಾರದಿಂದ ಸಂಕಲ್ಪ–ವಿಕಲ್ಪಾತ್ಮಕವಾದ ಮನಸ್ಸನ್ನೇ ತೇಜಃ ಪದದಿಂದ ಹೇಳುತ್ತಾರೆ. [6–8]

रसनया भाव्यमाना मधुराम्लतिक्तकटुकषायलवणरसाः षड्ृतवः ॥ ९ ॥
ರಸನಯಾ ಭಾವ್ಯಮಾನಾ ಮಧುರಾಮ್ಲತಿಕ್ತಕಟುಕಷಾಯಲವಣರಸಾಃ ಷಡೃತವಃ ॥ 9 ॥

ಮಧುರ ಮೊದಲಾದ ನಾಲಗೆಯಿಂದ ಅನುಭವಿಸುವಂತಹವುಗಳು ಮತ್ತು ಅವುಗಳ ಅನುಭವವಿಶಿಷ್ಟತೆಯು ವಸಂತ ಮೊದಲಾದ ಋತುಗಳ ಭೇದದಿಂದ ಭಾವಿಲ್ಪಡುವುವು; ಅದಕ್ಕಿಂತ ಭಿನ್ನವಾದ ಪದಾರ್ಥಗಳಿಗೆ ಅವುಗಳು ನಿಷ್ಠವಾದರೆ, ಮನಸಿನ ಪರಾವೃತ್ತಿಗೆ ಆಪತ್ತುಂಟಾಗುವುದು. ಹಾಗಾಗಿಯೇ ನಾಲಗೆಗೆ ರುಚಿಯ ಭಾವನೆಯು ವಿಶೇಷಣವಾಗಿದೆ.

ರತ್ನದ್ವೀಪೋ ಭವೇದ್ದೇಹೋ ನವತ್ವಂ ಧಾತುರೋಮಭಿಃ ।
ಸಂಕಲ್ಪಾಃ ಕಲ್ಪತರವಃ ಸ್ವಾಧಾರಾ ಋತವಃ ಸ್ಮೃತಾಃ ॥ ತಂತ್ರರಾಜತಂತ್ರ ॥

ಸ್ವಾಧಾರ ಪದದಿಂದ ಡಾಕಿನೀ ಮೊದಲಾದ ಆರು ಯೋಗಿನೀಗಳ ಆಧಾರಭೂತವಾದ ಸುಷುಮ್ನಾದ ಅಂತರ್ಗತವಾದ ಷಟ್ಚಕ್ರಗಳು ಹೇಳಲ್ಪಡುತ್ತವೆ. ಸುಷುಮ್ನಾದಲ್ಲಿರುವ ಇಡಾ–ಪಿಂಗಳಾತ್ಮಕ ಚಂದ್ರ–ಅರ್ಕರ ಸಂಯೋಗವು ಕಾಲಾತ್ಮಕತೆಯನ್ನು ಅನುಮತಿಸುವುದರಿಂದ, ಅದರಲ್ಲಿರುವ ಚಕ್ರಗಳ ಋತುರೂಪತ್ವವು ಯುಕ್ತವಾಗಿದೆ ಎಂದು ಹೇಳಬಹುದು. ವಸ್ತುತಃ ಶ್ರುತಿಯ ಪ್ರತ್ಯಕ್ಷ ಅನುರೋಧದಿಂದಾಗಿ ಸ್ವ ಅನುಭವಿಸಲ್ಪಡುವ ರಸ ಪರತ್ವವು ಸ್ವಾಧಾರ ಪದಕ್ಕೆ ಯುಕ್ತವಾಗಿದೆ. ಇನ್ನು ಭಾವ್ಯಮಾನಾ ಎಂಬುದರಿಂದ ವರ್ತಮಾನಕಾಲದಲ್ಲಿ ಅಂದರೆ ಆಯಾಯ ಕಾಲದಲ್ಲಿ ಅನುಭವಿಸಲ್ಪಡುವ ರಸಭಾವ ಎಂದಾಗುವುದು, ಅನುಭವಿಸಿದ ಸಂಸ್ಕಾರಾತ್ಮಕ ರಸಗಳು ಎಂದಲ್ಲ. *ಸ್ವಮಾತ್ಮಾ ಆಧಾರಃ ಸಮವಾಯೀ ಯೇಷಾಮ್* ಎಂಬ ವ್ಯುತ್ಪತ್ತಿಯಿಂದ ಸ್ವಾಧಾರ ಪದವು ರಸಾನುಭವ ಜನ್ಯ ಸಂಸ್ಕಾರ ಪರವಾಗಿದೆ. ವೈದ್ಯಪದ್ಧತಿಯಲ್ಲಿ ಋತುಭೇದದಿಂದ ರಸವ್ಯವಸ್ಥೆಯನ್ನು ಹೇಳಿರುವುದು ಋತು ಮತ್ತು ಸಂಸ್ಕಾರಗಳಿಗೆ ಅಭೇದವನ್ನು ಸೂಚಿಸುವುದು. [6]

ज्ञानमर्घ्यं ज्ञेयं हविः ज्ञाता होता ।
ज्ञातृज्ञानज्ञेयानामभेदभावनं श्रीचक्रपूजनम् ॥ १० ॥
ಜ್ಞಾನಮರ್ಘ್ಯಂ ಜ್ಞೇಯಂ ಹವಿಃ ಜ್ಞಾತಾ ಹೋತಾ ।
ಜ್ಞಾತೃಜ್ಞಾನಜ್ಞೇಯಾನಾಮಭೇದಭಾವನಂ ಶ್ರೀಚಕ್ರಪೂಜನಮ್ ॥ 10 ॥

ಇದನ್ನು ತಂತ್ರರಾಜದಲ್ಲಿ ಹೀಗೆ ವಿವರಿಸಿದ್ದಾರೆ:

ಜ್ಞಾತಾ ಸ್ವಾತ್ಮಾ ಭವೇತ್ ಜ್ಞಾನಮರ್ಘ್ಯಂ ಜ್ಞೇಯಂ ಹವಿಃ ಸ್ಥಿತಮ್ ।
ಶ್ರೀಚಕ್ರಪೂಜನಂ ತೇಷಾಮೇಕೀಕರಣಮೀರಿತಮ್ ॥ ತಂತ್ರರಾಜತಂತ್ರ ॥

ಜ್ಞಾನ ಶಬ್ದವು ಘಟ ಮುಂತಾದವುಗಳ ಜ್ಞಾನದ ಪರವಾಗಿದೆ. ಅರ್ಘ್ಯ ಶಬ್ದವು ಪೂಜಾಸಾಮಗ್ರಿಯ ಪರವಾಗಿದೆ. ಜ್ಞೇಯ ಶಬ್ದವು ಬಾಹ್ಯವಿಷಯಗಳ ಪರವಾಗಿದೆ; ವಿಷಯಗಳೆಲ್ಲವೂ ಹವಿಸ್ಸೆಂದು ಶ್ರುತಿಯಲ್ಲಿ ನಿರ್ದಿಷ್ಟವಾಗಿದೆ, ನೈವೇದ್ಯವೆಂದ ಅರ್ಥದಲ್ಲಿ. ಹಾಗಾಗಿ ಅರ್ಘ್ಯ ಶಬ್ದದ ಅರ್ಥವು ಇತರ ವಿಶೇಷ ಅರ್ಘ್ಯದ ಪರವಾಗಿ ಸಂಕುಚಿತಗೊಂಡಿದೆ. ಪೂಜಿಸಲ್ಪಡುವ ದೇವತೆಯಾದರೋ ಚಿದ್ರೂಪಳು ಎಂದು ಪ್ರಸಿದ್ಧವಾಗಿರುವವಳು. ವಿಷಯಗಳ ಜ್ಞಾತಾ ಪೂಜಕನು, ಪ್ರಕೃತದಲ್ಲಿ ಶಿಷ್ಯತ್ವವಿರುವವನು ಎಂದು ಶ್ರುತಿಯಲ್ಲಿ ಉಕ್ತವಾಗಿ ತಂತ್ರಗಳಲ್ಲಿ ನಿರ್ದಿಷ್ಟವಾಗಿದೆ. ಸ್ವಾತ್ಮಚೈತನ್ಯದ ಭೇದಗಳಾಗಿ ಪ್ರತೀತವಾಗುವ ಜ್ಞಾತೃ, ಜ್ಞಾನ, ಜ್ಞೇಯಗಳು ಭೇದಜನಕ ನಾಮರೂಪಗಳ ಅನುಸಂಧಾನದಿಂದ ಚಿನ್ಮಾತ್ರಾರೂಪವಾಗಿ ಭಾವಿಸಲ್ಪಡುವುವು. ತಂತ್ರದಲ್ಲಿ ಭಾವತುಂಬಿರುವ ಪೂಜನಪದಾರ್ಥವನ್ನು ಈ ಮೂರರಿಂದ ಅಭಿನ್ನವೆಂದು ತಿಳಿಯಲ್ಪಡುವುದು, ಭೇದಭಾವನೆಯಿಂದ ಅಲ್ಲ. ಲೋಕದಲ್ಲಿ ವಿಶೇಷ ಅರ್ಘ್ಯಜಲವು ಬಿಂದು ಮೊದಲಾದವುಗಳ ನೈವೇದ್ಯವಾಗಿ, ತನ್ನ ಮನಸಿನಲ್ಲಿರುವ ದೇವತೆಗೆ ಸಮರ್ಪಿಸುವುದೆಂಬ ಸಂಬಂಧದಿಂದ ಪೂಜಾರ್ಹವಾಗಿದೆ. ಅಂತೆಯೇ ಪ್ರಕೃತದಲ್ಲಿ ಈ ಮೂರನ್ನೂ ಚಿತ್ತದೊಡನೆ ತಾದಾತ್ಮ್ಯವಿರುವಂತೆ ಭಾವಿಸುವುದು ಉಚಿತವಾಗಿದೆ. ಅದಕ್ಕೆ ಅನುಕೂಲವಾದ ಕೃತಿಗಳೇ ವಿಭಾವನೆಗಳು ಎಂದು ಹೇಳಲ್ಪಟ್ಟಿವೆ. ವಿಭಾವನೆಯ ಪೂಜಿಸಲ್ಪಡುವ ಪದಾರ್ಥತ್ವದಿಂದ ವಿಭಾವನೆ ಮತ್ತು ಪೂಜನೆಗಳ ಅಭೇದವನ್ನು ಸೂಚಿಸಲ್ಪಟ್ಟು, ವಿವಿಧ ವಿಭಾವನೆಗಳು ಲಭಿಸುತ್ತವೆ. ಅದರಿಂದ ಕರಣಗಳಿಂದ ಮಾಡುವ ಶ್ರೌತ ಪೂಜನ ಶಬ್ದವು ಪೂಜೆಗೆ ಅನುಕೂಲವಾದ ಕೃತಿ ಎಂಬ ವಿಷಯಪರವಾಗಿದೆ ಎಂಬುದಾಗಿ ಕಂಡುಬರುವುದು ಏಕೀಕರಣವು ಎಂದು ವಿವರಿಸಬಹುದು. [10]

> नियति शृङ्गारादयो रसा अणिमादि सिद्धयः ॥ ११ ॥
> ನಿಯತಿ ಶೃಂಗಾರಾದಯೋ ರಸಾ ಅಣಿಮಾದಿಸಿದ್ಧಯಃ ॥ 11 ॥

ನಿಯತಿ ಅಂದರೆ ಪ್ರಾರಬ್ಧ, ಶೃಂಗಾರಗಳು ಒಂಬತ್ತುರಸಗಳು. ಆದಿ ಪದದಿಂದ ಭಯಾನಕ, ರೌದ್ರ, ಬೀಭತ್ಸ, ಹಾಸ್ಯ, ವೀರ, ಕರುಣಾ, ಅದ್ಭುತ ಮತ್ತು ಶಾಂತಗಳು ಪರಿಗ್ರಹವಾಗುವುವು. ಈ ಹತ್ತು ಕ್ರಮವಾಗಿ ಅಣಿಮಾ ಮೊದಲಾದ ಹತ್ತು ಸಿದ್ಧಿಗಳೊಡನೆ ಅಭಿನ್ನವಾಗಿದೆ. ಈ ಕ್ರಮವನ್ನು ಬಿಂದುಸೂತ್ರದಿಂದ ತಿಳಿಯಬಹುದು. ಶೃಂಗಾರಾದಿ ಎಂಬಲ್ಲಿ ಆದಿ ಪದದಿಮ್ದ ಗೃಹಿತವಾಗುವವುಗಳನ್ನು ಹಿಂದೆ ಹೇಳಿದ ಕ್ರಮದಲ್ಲಿ ಅಲ್ಲದೆ ಬೇರೆ ವಿಧವಾಗಿ ತಿಳಿಯುವುದು ಉಚಿತವಲ್ಲ. ಕಾಮಾಕರ್ಷಿನೀ ಮೊದಲಾಗಿ ಕಂಡುಬರುವ ಆವರಣದೇವತೆಗಳ ಪಾಠಕ್ರಮದಲ್ಲಿ ನಿರ್ಣಯವಾಗಿರುವಂತೆ ವ್ಯುತ್ಕ್ರಮದಲ್ಲಿ ಹೇಳಿರುವಂತಹವುಗಳು ವಿಶ್ವಸನೀಯವಲ್ಲ. [11]

> कामक्रोधलोभमोहमदमात्सर्यपुण्यपापमया ब्राहम्याद्यष्टशक्तयः ॥ १२ ॥
> ಕಾಮಕ್ರೋಧಲೋಭಮೋಹಮದಮಾತ್ಸರ್ಯಪುಣ್ಯಪಾಪಮಯಾ
> ಬ್ರಾಹ್ಮ್ಯಾದ್ಯಷ್ಟಶಕ್ತಯಃ॥ 12 ॥

ಇಲ್ಲಿ ಮಯಟ್ ಪ್ರತ್ಯಯವು ಬ್ರಹ್ಮಮಯವಾದ ಜಗತ್ತು ಇತ್ಯಾದಿಗಳು ಎಂಬ ಭೇದಾರ್ಥಕವಾಗಿದೆ. ಮತ್ತು

> ಶ್ರೀಚಕ್ರೇ ಸಿದ್ಧಯಃ ಪ್ರೋಕ್ತಾ ರಸಾ ನಿಯತಿಸಂಯುತಾಃ ।
> ಊರ್ಮಯಃ ಪುಣ್ಯಪಾಪೇ ಚ ಬ್ರಾಹ್ಮ್ಯಾದ್ಯಾ ಮಾತರಃ ಸ್ಮೃತಾಃ ॥ ತಂತ್ರರಾಜತಂತ್ರ ॥

ಇಲ್ಲಿ ಊರ್ಮಿ ಶಬ್ದವು ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ ಎಂಬ ಆರು ವೈರಿಗಳ ಪರವಾಗಿದೆ, ಪುರಾಣಗಳಲ್ಲಿ ಕಾಮಾದಿಗಳನ್ನು ಊರ್ಮಿ ಪದದಿಂದ ಹಲವುಬಾರಿ ವ್ಯವಹರಿಸಿರುವುದು ಕಾಣಸಿಗುತ್ತದೆ. ಅದನ್ನು ಕ್ಷುಧೆ, ಪಿಪಾಸೆ, ಶೋಕ, ಮೋಹ, ಜರಾ, ಮರಣ ಪರವಾಗಿ ಬೇರೆಯೇ ಆದ ವ್ಯಾಖ್ಯಾನವು ಪ್ರತ್ಯಕ್ಷವಾಗಿ ಶ್ರುತಿವಿರೋಧವಾಗಿದೆ ಎಂದು ತಿಳಿಯುವುದು. [12]

आधारनवकं मुद्राशक्तयः ॥ १३ ॥

ಆಧಾರನವಕಂ ಮುದ್ರಾಶಕ್ತಯಃ ॥ 13 ॥

पृथिव्यप्तेजोवाय्वाकाशश्रोत्रत्वक्चक्षुर्जिह्वाघ्राणवाक्पाणि-
पादपायूपस्थानि मनोविकारः कामाकर्षिण्यादिषोडशशक्तयः ॥ १४ ॥

ಪೃಥಿವ್ಯಪ್ತೇಜೋವಾಯವ್ವಾಕಾಶಶ್ರೋತ್ರತ್ವಕ್ಚಕ್ಷುರ್ಜಿಹ್ವಾಘ್ರಾಣವಾಕ್ಪಾಣಿ-
ಪಾದಪಾಯೂಪಸ್ಥಾನಿ ಮನೋವಿಕಾರಃ ಕಾಮಾಕರ್ಷಿಣ್ಯಾದಿಷೋಡಶಶಕ್ತಯಃ ॥ 14 ॥

ಮೂಲಾಧಾರ ಮೊದಲಾದ ಆರು ಚಕ್ರಗಳು, ಎರಡು ಮೇಲಿನ ಮತ್ತು ಕೆಳಗಿನ ಸಹಸ್ರದಲಕಮಲಗಳು ಹಾಗೂ ಲಂಬಿಕಾಗ್ರ ಸೇರಿ ಒಂಬತ್ತು ಹಾಗೂ ಎಲ್ಲದರ ಸಮಷ್ಟಿ ಒಂದು, ಹೀಗೆ ಒಟ್ಟು ಹತ್ತು ಆಧಾರಗಳು ಹಾಗೂ ಸಂಕ್ಷೋಭಿಣೀ ಮೊದಲಾಗಿ ತ್ರಿಖಂಡದವರೆಗಿನ ಮುದ್ರಾಭಿಮಾನೀ ಹತ್ತು ಶಕ್ತಿಗಳು ಅಭಿನ್ನವಾಗಿವೆ. ಬೇರೊಂದು ತಂತ್ರದಲ್ಲಿ ಹೇಳಿರುವ ಮೂರನೆಯರೇಖೆಯ ಅಭಿಮಾನೀದೇವತೆಯನ್ನು ಭಾವಿಸುವುದು ಎಂಬುದು ಮತ್ತು ಅದಕ್ಕೆ ಪೂರಕವಾಗಿ ಬಿಂದುಸೂತ್ರದಲ್ಲಿ ಹೇಳಿರುವ ಆವರಣದೇವತೆಗಳ ಸ್ಥಾನವು ಇಲ್ಲಿ ಗ್ರಾಹ್ಯವಾಗುವುದಿಲ್ಲ. ಯೋಗಿನೀಹೃದಯದಲ್ಲಿ ಕಾದಿಮತಾನುಸಾರವಾಗಿ ಅಲ್ಲಿ ಮುದ್ರಾದೇವತೆಗಳನ್ನು ಶರೀರ ಅವಯವಗಳಾಗಿ ಇರುವಂತೆ ಹೇಳಿರುವುದು ಇತರ ಸ್ಥಾನಗಳಲ್ಲಿ ಅಗ್ರಾಹ್ಯವಾಗಿದೆ. ಈ ಉಪನಿಷತ್ತಿನಲ್ಲಿ ಹೇಳಿರುವ ದೇವತೆಯ ವಿಭಾವನೆಯ ಉಭಯರೂಪದ ಪೂಜೆ, ನ್ಯಾಸಗಳನ್ನು ನಿಧಿಕಾರ ಮೊದಲಾದ ಸಾಂಪ್ರದಾಯಿಕರಿಗೆ ಸಮ್ಮತವಾಗಿರುವುದು. ಹಾಗೆ ಕೆಲವರು ನ್ಯಾಸಧರ್ಮವನ್ನು ತಂತ್ರೋಕ್ತವಾಗಿ ಯೋಜಿಸಿಕೊಳ್ಳಬೇಕು ಎಂದು ಹೇಳುವರು. ಅವರು 'ಚತುರಶ್ರಾದ್ಯರೇಖಾಯೈ ನಮಃ' ಮುಂತಾಗಿ 'ನ್ಯಸೇತ್' ಇತ್ಯಾದಿಗಳಂತೆ ಪ್ರಯೋಗವಿಧಿಯಲ್ಲಿ ಉಪಸಂಹರಿಸುತ್ತಾರೆ. ಆದರೆ ಪ್ರತಿ ಆವರಣದೇವತೆಯೂ ಬೇರೆ ಬೇರೆಯಾಗಿರುವುದು ಸಿದ್ಧವಾಗಿರುವುದರಿಂದ, ಮುದ್ರಾಭಿಮಾನೀ ದೇವತೆಗಳ ವಿಭಾವನೆಯು ಮೇಲೆ ಹೇಳಿರುವ ವಿಧವಾಗಿದೆ. ಆಯಾಯ ಚಕ್ರೇಶ್ವರೀಯರ ವಿಭಾವನೆಯು ಇತರೆಡೆ ಹೇಳಿದಂತಿರಬಹುದು. ಪಂಚಭೂತಗಳು ಮತ್ತು ಹನ್ನೊಂದು ಇಂದ್ರಿಯಗಳು ಹಾಗೂ ಸರ್ವಾಶಾಪರಿಪೂರಕಚಕ್ರದಲ್ಲಿರುವ ದೇವತೆಗಳು (ಕಾಮಾಕರ್ಷಿಣೀ ಮೊದಲಾದ) ಅಭಿನ್ನರಾಗಿರುವರು. ಇಲ್ಲಿ ವಿಕಾರ ಶಬ್ದವು ಹದಿನಾರು ಸಂಖ್ಯೆಯ ಪರವಾಗಿದೆ. ಮನೋವಿಕಾರ ಒಂದೇ ಪದವಾಗಿದೆ ಮತ್ತು ವಿಕೃತ ಮನಸು ಎಂಬ ಅರ್ಥದಲ್ಲಿದೆ. 'ಕೃದಭಿಹಿತೋ ಭಾವೋ ದ್ರವ್ಯವತ್ ಪ್ರಕಾಶತ' ಎಂಬ ವ್ಯುತ್ಪತ್ತಿಯಂತೆ. ಹಾಗಾಗಿ 'ಇಕ್ಷುಧನುಃ' ಎಂಬಂತೆ ಪುನರುಕ್ತಿಯಾಗುವುದಿಲ್ಲ. [13–14]

वचनादानगमनविसर्गानन्दहानोपादानोऽपेक्षाख्य-
बुद्धयोऽनङ्गकुसुमाद्यष्टौ ॥ १५ ॥

ವಚನಾದಾನಗಮನವಿಸರ್ಗಾನಂದಹಾನೋಪಾದಾನೋಽಪೇಕ್ಷಾಖ್ಯ-
ಬುದ್ಧಯೋಽನಂಗಕುಸುಮಾದ್ಯಷ್ಟೌ ॥ 15 ॥

अलम्बुसा कुहूर्विश्वोदरा वारुणा हस्तिजिह्वा यशोवती पयस्विनी
गान्धारी पूषा शङ्खिनी सरस्वती इडा पिङ्गला सुषुम्नाचेति
चतुर्दशनाड्यः सर्वसङ्क्षोभिण्यादि चतुर्दश शक्तयः ॥ १६ ॥
ಅಲಂಬುಸಾ ಕುಹೂರ್ವಿಶ್ವೋದರಾ ವಾರುಣಾ ಹಸ್ತಿಜಿಹ್ವಾ ಯಶೋವತೀ
ಪಯಸ್ವಿನೀ ಗಾಂಧಾರೀ ಪೂಷಾ ಶಂಖಿನೀ ಸರಸ್ವತೀ ಇಡಾ ಪಿಂಗಲಾ ಸುಷುಮ್ನಾಚೇತಿ
ಚತುರ್ದಶನಾಡ್ಯಃ ಸರ್ವಸಂಕ್ಷೋಭಿಣ್ಯಾದಿ ಚತುರ್ದಶ ಶಕ್ತಯಃ ॥ 16 ॥

ಕರ್ಮೇಂದ್ರಿಯಗಳ ವಿಷಯಗಳಾದ ಮಾತು ಮೊದಲಾದವುಗಳು ಐದು; *ಹಾನಂ* ತ್ಯಾಗ; *ಉಪಾದಾನ* ಗ್ರಹಣ, ಸ್ವೀಕಾರ; *ಉಪೇಕ್ಷಾ* ಔದಾಸೀನ್ಯ ಇಂತಹ ಮೂರು ಬುದ್ಧಿಗಳು ಸೇರಿರುವ ಎಂಟು. ಈ ಬುದ್ಧಿತ್ರಯಗಳನ್ನು ದೋಷ ಎಂಬ ಪದದಿಂದ ತಂತ್ರರಾಜದಲ್ಲಿ ಹೇಳಿದ್ದಾರೆ.

ಭೂತೇಂದ್ರಿಯಮನಾಂಸ್ಯೇವ ಕ್ರಮಾನ್ನಿತ್ಯಾಃ ಕಲಾಃ ಪುನಃ ।
ಕರ್ಮೇಂದ್ರಿಯಾರ್ಥದೋಷಾಶ್ಚ ಜ್ಞೇಯಾಃ ಸ್ಯುಃ ಶಕ್ತಯೋಽಷ್ಟಕಾಃ ॥ ತಂತ್ರರಾಜತಂತ್ರ ॥

ವಾತ, ಪಿತ್ತ, ಕಫ ದೋಷಗಳೆಂದು ಕೆಲವರು ಹೇಳುತ್ತಾರೆ. ನಾಥನವಕವಾಸನಾ ಎಂಬುದನ್ನು ವ್ಯಾಖ್ಯಾನಿಸುವಾಗ ನಾಡೀಗಳ ಸ್ವರೂಪವನ್ನು ಹಿಂದೆಯೇ ವಿವರಿಸಿರುವೆನು. ಅವುಗಳು ಮನ್ವಶ್ರದಲ್ಲಿರುವ ದೇವತೆಗಳಿಗಿಂತ ಅಭಿನ್ನವಾಗಿರುವುವು. ಈ ನಾಡೀಗಳನ್ನು ಪೂರ್ವೋಕ್ತ ಪೃಥಿವೀ ಮುಂತಾದ ಹದಿನಾರರಂತೆ ವ್ಯುತ್ಕ್ರಮದಲ್ಲಿ ಸಮೀಕರಿಸಬೇಕು ಎಂದು ನಿಧಿಗ್ರಂಥದಲ್ಲಿ ತೋರಿಸಿರುವರು. ಶ್ರೌತಕ್ರಮ ಬೋಧಕವಾದ ಪ್ರತ್ಯಕ್ಷಶ್ರುತಿಯೊಳಗಿರುವ ಪಾಠಕ್ರಮವನ್ನು ತ್ಯಜಿಸಬೇಕಾದಾಗ ಅದರ ಮೂಲವನ್ನು ಚಿಂತಿಸಬೇಕು. [15–16]

प्राणापानव्यानोदानसमाननागकूर्मकृकरदेवदत्तधनञ्जया
दशवायवस्सर्वसिद्धिप्रदादिबहिर्दशारदेवताः ॥ १७ ॥
ಪ್ರಾಣಾಪಾನವ್ಯಾನೋದಾನಸಮಾನನಾಗಕೂರ್ಮಕೃಕರದೇವದತ್ತಧನಂಜಯಾ
ದಶವಾಯವಸ್ಸರ್ವಸಿದ್ಧಿಪ್ರದಾದಿಬಹಿರ್ದಶಾರದೇವತಾಃ ॥ 17 ॥

एतद्वायुसंसर्गकोपाधिभेदेन रेचकः पाचक शोषको दाहकः
प्लावक इति प्राणमुख्यत्वेन पञ्चधा जठराग्निर्भवति ॥ १८ ॥
ಏತದ್ವಾಯುಸಂಸರ್ಗಕೋಪಾಧಿಭೇದೇನ ರೇಚಕಃ ಪಾಚಕ ಶೋಷಕೋ ದಾಹಕಃ
ಪ್ಲಾವಕ ಇತಿ ಪ್ರಾಣಮುಖ್ಯತ್ವೇನ ಪಂಚಧಾ ಜಠರಾಗ್ನಿರ್ಭವತಿ ॥ 18 ॥

क्षारक उद्गारकः क्षोभको जृम्भको मोहक इति नागप्राधान्येन पञ्चविधाः ते मनुष्याणां देहगा भक्ष्यभोज्यचोष्यलेह्यपेयात्मक पञ्चविधमन्नं पाचयन्ति ॥ १९ ॥

ಕ್ಷಾರಕ ಉದ್ಗಾರಕಃ ಕ್ಷೋಭಕೋ ಜೃಂಭಕೋ ಮೋಹಕ ಇತಿ ನಾಗಪ್ರಧಾನ್ಯೇನ ಪಂಚವಿಧಾಃ ತೇ ಮನುಷ್ಯಾಣಾಂ ದೇಹಗಾಃ ಭಕ್ಷ್ಯಭೋಜ್ಯಚೋಷ್ಯಲೇಹ್ಯಪೇಯಾತ್ಮಕ ಪಂಚವಿಧಮನ್ನಂ ಪಾಚಯಂತಿ ॥ 19 ॥

एता दशवह्निकलास्सर्वज्ञाद्या अन्तर्दशार देवताः ॥ २० ॥

ಏತಾ ದಶವಹ್ನಿಕಲಾಸ್ಸರ್ವಜ್ಞಾದ್ಯಾ ಅಂತರ್ದಶಾರ ದೇವತಾಃ ॥ 20 ॥

ಪ್ರಾಣ ಮೊದಲಾದ ಐದು ಮಹಾವಾಯುಗಳು ಮತ್ತು ನಾಗ ಮೊದಲಾದ ಐದು ಉಪವಾಯುಗಳು ಒಟ್ಟು ಹತ್ತು, ಸರ್ವಾರ್ಥಸಾಧಕಚಕ್ರದ ಸರ್ವಸಿದ್ಧಿಪ್ರದಾ ಮುಂತಾದ ದೇವತೆಗಳಿಗಿಂತ ಅಭಿನ್ನವಾಗಿರುವುವು.

ಬಾಹ್ಯಶ್ಚತುರ್ದಶ ಪ್ರೋಕ್ತಾಃ ಕ್ಷೋಭಿಣ್ಯಾದ್ಯಾಸ್ತು ಶಕ್ತಯಃ ।
ವಾಯವೋ ದಶ ಸಂಪ್ರೋಕ್ತಾಃ ಸರ್ವಸಿದ್ಧ್ಯಾದಿಶಕ್ತಯಃ ॥ ತಂತ್ರರಾಜತಂತ್ರ ॥

ಮೊದಲನೆಯ ವಾಕ್ಯದಲ್ಲಿ ಪ್ರಾಣ ಮುಂತಾದ ದಶವಾಯುಗಳ ಸಂಬಂಧವನ್ನು ತಿಳಿಸಿದರೆ ಅವುಗಳ ಉಪಾಧಿಕತ್ವವನ್ನು ಎರಡನೆಯ ವಾಕ್ಯವು ವಿವರಿಸುತ್ತದೆ. ಮೂರನೆಯ ವಾಕ್ಯವು ಪಾಚಕದ ಕಾರ್ಯವನ್ನು ತಿಳಿಸುವುದು. ನಾಲ್ಕನೆಯ ವಾಕ್ಯವು ಸರ್ವರಕ್ಷಾಕರಚಕ್ರದೇವತೆಗಳೊಡನೆ ಅವುಗಳ ಅಭಿನ್ನತೆಯನ್ನು ತಿಳಿಸುವುದು.

ವಹ್ನಯೋ ದಶ ಸಂಪ್ರೋಕ್ತಾಃ ಸರ್ವಜ್ಞಾದ್ಯಾಶ್ಚ ಶಕ್ತಯಃ ॥ ತಂತ್ರರಾಜತಂತ್ರ ॥

ಇಲ್ಲಿ ಸಂಪ್ರೋಕ್ತಾ ಎಂಬುದು ಶ್ರುತಿಯಲ್ಲಿ ಹೇಳಿರುವ ರೇಚಕ ಮೊದಲಾದವುಗಳು ಎಂಬ ಅರ್ಥದಲ್ಲಿದೆ. ಕೆಲವರು ಪ್ರೋಕ್ತ ಪದವನ್ನು ಕಂಡುಬರುವ ಎಂಬ ಅರ್ಥದಲ್ಲಿ ಮನ್ನಿಸುತ್ತಾರೆ. ಅದೇ ಪಟಲದಲ್ಲಿ

ಅಗ್ನಿರ್ವಹ್ನಿಃ ಶುಚಿಸ್ತೇಜಃ ಪ್ರಭಾ ದಾವಃ ಶಿಖೀ ದ್ಯುತಿಃ ।
ದಾಹೋ ಗ್ರಾಸಃ .. .. ॥

ಎಂಬ ಹತ್ತು ಹೆಸರುಗಳನ್ನು ಹೇಳಿದ್ದಾರೆ. ಆದರೆ ಪ್ರಯೋಗದ ಮಂತ್ರಘಟಕದಲ್ಲಿ ಶ್ರೌತನಾಮಗಳೇ ಉಚಿತವಾಗಿವೆ. 'ವಿಧಿಶಬ್ದಸ್ಯ ಮಂತ್ರತ್ವೇ' (ಜೈ.ಸೂ. 23–4–10) ಎಂಬ ದಶಮಿಕಾಧಿಕರಣ ನ್ಯಾಯದಂತೆ. [17–20]

शीतोष्णसुखदुःखेच्छास्सत्त्वं रजस्तमो वशिन्यादिशक्तयोऽष्टौ ॥ २१ ॥

ಶೀತೋಷ್ಣಸುಖದುಃಖೇಚ್ಛಾಸ್ಸತ್ತ್ವಂ ರಜಸ್ತಮೋ ವಶಿನ್ಯಾದಿಶಕ್ತಯೋಽಷ್ಟೌ ॥ 21 ॥

ಶೀತ–ಉಷ್ಣ, ಸುಖ–ದುಃಖ ಎರಡು ದ್ವಂದ್ವಗಳು; ಇಚ್ಛೆ, ಸತ್ತ್ವ, ರಜಃ, ತಮಃ ಗುಣಗಳು ಸೇರಿರುವ ಎಂಟು, ವಾಗ್ದೇವತಾ ಅಷ್ಟಕ ರೂಪವಾಗಿವೆ.

ಶೀತೋಷ್ಣಸುಖದುಃಖೇಚ್ಛಾ ಗುಣಾಃ ಪ್ರೋಕ್ತಾಃ ಕ್ರಮೇಣ ವೈ ।
ವಶಿನ್ಯಾದ್ಯಾಃ ಶಕ್ತಯಃ ಸ್ಯುಃ .. .. .. ॥ ತಂತ್ರರಾಜತಂತ್ರ ॥ [21]

शब्दादितन्मात्राः पञ्चपुष्पबाणाः ॥ २२ ॥

ಶಬ್ದಾದಿತನ್ಮಾತ್ರಾಃ ಪಂಚಪುಷ್ಪಬಾಣಾಃ ॥ 22 ॥

मन इक्षुधनुः ॥ २३ ॥

ಮನ ಇಕ್ಷುಧನುಃ ॥ 23 ॥

रागः पाशः ॥ २४ ॥

ರಾಗಃ ಪಾಶಃ ॥ 24 ॥

द्वेषोऽङ्कुशः ॥ २५ ॥

ದ್ವೇಷೋಽಂಕುಶಃ ॥ 25 ॥

ಶಬ್ದ, ಸ್ಪರ್ಶ, ರೂಪ, ರಸ, ಗಂಧ ಎಂಬ ತನ್ಮಾತ್ರೆಗಳೆಂದು ಕರೆಯಲ್ಪಡುವುವು ಐದು ಬಾಣಗಳಿಂದ ಅಭಿನ್ನವಾಗಿವೆ. ಅವುಗಳ ಮುಖವು ಪುರುಷನಿಗೆ ಅಭಿಮುಖವಾಗಿವೆ. ವಿಕೃತಿಯಿಲ್ಲದ ಮನಸು ಇಕ್ಷುಚಾಪ, ಕಬ್ಬಿನಜಲ್ಲೆಯ ಧನುಸ್ಸಾಗಿದೆ; ವಿಷಯ ಪರಾಮರ್ಶೆಯ ರೂಪದಲ್ಲಿ ಇಂದ್ರಿಯಗಳ ಪ್ರೇರಕತ್ವವಿರುವುದರಿಂದ. *ರಾಗಃ* ಪ್ರೀತಿಯು; ಮೂವತ್ತಾರುತತ್ತ್ವಗಳಲ್ಲಿ ಸೇರಿರುವ ತತ್ತ್ವವಿಶೇಷವು, ಇಚ್ಛೆಗೆ ಸಮಾನವಲ್ಲ. ಅದಕ್ಕೆ ಅರುಣಾ ಎಂಬ ವಾಗ್ದೇವತೆಯ ವಾಸನೆಯಿದ್ದರೂ ಪುನರುಕ್ತಿಯಾಗುವುದಿಲ್ಲ. ಬಂಧಕತೆಗೆ ಸಾಮ್ಯತೆಯಿದ್ದು ಪಾಶದೊಡನೆ ಅಭೇದವಿದೆ. *ದ್ವೇಷಃ* ಕ್ರೋಧ; ಅಂಕುಶಕ್ಕೆ ದ್ವೇಷದ ನಿವಾರಕತ್ವವಿರುವುದರಿಂದ ಅಭೇದ ಹೇಳಲ್ಪಟ್ಟಿದೆ.

ರಾಗಸ್ವರೂಪಪಾಶಾಢ್ಯಾ ಕ್ರೋಧಾಕಾರಾಂಕುಶೋಜ್ಜ್ವಲಾ ।
ಮನೋರೂಪೇಕ್ಷುಕೋದಂಡಾ ಪಂಚತನ್ಮಾತ್ರಸಾಯಕಾ ॥ ರಹಸ್ಯನಾಮಸಾಹಸ್ರ ॥

.. .. ತನ್ಮಾತ್ರಾಃ ಪುಷ್ಪಸಾಯಕಾಃ ।
ಮನೋ ಭವೇದಿಕ್ಷುಧನುಃ ಪಾಶೋ ರಾಗ ಉದೀರಿತಾ ।
ದ್ವೇಷಃ ಸ್ಯಾದಂಕುಶಃ ಪ್ರೋಕ್ತಃ ಕ್ರಮೇಣ ವರವರ್ಣಿನಿ ॥ ತಂತ್ರರಾಜತಂತ್ರ ॥ [22–25]

अव्यक्तमहदहङ्काराः कामेश्वरीवज्रेश्वरीभगमालिन्योऽन्तस्त्रिकोणगा देवताः ॥ २६ ॥

ಅವ್ಯಕ್ತಮಹದಹಂಕಾರಾಃ ಕಾಮೇಶ್ವರೀವಜ್ರೇಶ್ವರೀಭಗಮಾಲಿನ್ಯೋಽಂತಸ್ತ್ರಿಕೋಣಗಾ ದೇವತಾಃ ॥ 26 ॥

ಇಲ್ಲಿ ಮಹತ್, ಅವ್ಯಕ್ತ ಶಬ್ದಗಳು ಬುದ್ಧಿ, ಪ್ರಕೃತಿ ತತ್ತ್ವಗಳ ಪರವಾಗಿವೆ. ಅವುಗಳಿಗೆ ಅದೇ ಕ್ರಮದಲ್ಲಿ ಕಾಮೇಶ್ವರೀ ಮುಂತಾದ ಶಕ್ತಿಯರೊಡನೆ ಅಭೇದವಿದೆ ಎಂದಾಗುವುದಿಲ್ಲ. ಆದರೆ ಅವ್ಯಕ್ತ, ಅಹಂಕೃತಿ, ಮಹತ್ ಆಕಾರದಿಂದ ಪ್ರತಿಲೋಮವಾಗಿ ಕಾಮೇಶ್ವರೀ ಮೊದಲಾದ ದೇವೀಯರೊಡನೆ ಅಭೇದವು ಎಂಬ ತಂತ್ರಗಳಲ್ಲಿರುವ ವಿವರಣೆಗೆ ಅನುಗುಣವಾಗಿ ವ್ಯುತ್ಕ್ರಮದಿಂದ ಭಾವಿಸಬೇಕು. [26]

ಇಲ್ಲಿ ಮುಖ್ಯವಾದ ವಿಶೇಷ್ಯವು ಲಲಿತೆಯಾಗಿರುವಳು. ವಿಶೇಷ್ಯವನ್ನು ಆವರಿಸಿರುವವನು ಕಾಮೇಶ್ವರನು. ಅವರಿಗೆ ರಕ್ತಚರಣ, ಶುಕ್ಲಚರಣ ರೂಪಕವಿರುವುದರಿಂದ ರಕ್ತ–ಶುಕ್ಲ ವರ್ಣದವರಾಗಿರುವರು. ಅದು ಅವರದೇ ಆದ ಸಂಬಂಧವಿಶೇಷವು. ಅವರಿಗೇ ಸ್ಥೂಲ, ಸೂಕ್ಷ್ಮ, ಮಿಶ್ರ ಚರಣತ್ವವಿದ್ದು ಮೂರುವಿಧದ ರೂಪವಿದೆ. ಉಪಾಸಕರು ವಿಷಯವನ್ನು ಪ್ರಕಾರಾಂತರದಿಂದ ಅರಿತುಕೊಳ್ಳುವುದು. ಅಲ್ಲಿ ಮುಖ್ಯವಿಶೇಷ್ಯದೊಡನೆ ಇರುವ ಸಂಬಂಧ ಪ್ರಕಾರದ ಅವಚ್ಛೇದಕತೆಯನ್ನು ಮುಂದಿನ ಮೂರುವಾಕ್ಯಗಳಲ್ಲಿ ವಿವೇಚಿಸುತ್ತಾ **ನಿರುಪಾಧಿಕೇತ್ಯಾದಿಭಿಃ.**

निरुपाधिकसंविदेव कामेश्वरः ॥ २७ ॥

ನಿರುಪಾಧಿಕಸಂವಿದೇವ ಕಾಮೇಶ್ವರಃ ॥ 27 ॥

ಉಪಾಧಿರಹಿತವಾದ ಶುದ್ಧಚೈತನ್ಯವೇ ಬಿಂದುರೂಪದ ಕಾಮೇಶ್ವರನು. 'ಸಂವಿತ್ಕಾಮೇಶ್ವರಃ ಸ್ಮೃತಃ' ಎಂದು ವಿವರಿಸಿರುವಂತೆ. [27]

सदानन्दपूर्णः स्वात्मैव परदेवता ललिता ॥ २८ ॥

ಸದಾನಂದಪೂರ್ಣಃ ಸ್ವಾತ್ಮೈವ ಪರದೇವತಾ ಲಲಿತಾ ॥ 28 ॥

ಚೈತನ್ಯದ ನಿರುಪಾಧಿಕತ್ವ ಎಂಬ ವಿಶೇಷಣದ ಬಲದಿಂದ ಅದರ ಅಂಕವೇ ನಿಲಯವಾಗಿರುವ ಪರದೇವತೆಗೆ ಸ್ವಲ್ಪ ಉಪಾಧಿವಿಶಿಷ್ಟತೆಯಿರುವುದರಿಂದ ಅವಳಿಗೆ ಭಿನ್ನವಾದ ಉಪಾಸ್ಯತ್ವವಿರುವುದು. ಅವಳು ಸ್ವಾತ್ಮವೇ ಆಗಿರುವಳು. ತನ್ನಿಂದ ಅಭಿನ್ನವಾಗಿ ಉಪಾಸಿತಳಾಗಿರುವ ಪರದೇವತೆಯು ರೂಪ, ಜ್ಞಾನಗಳ ವಿಶೇಷ ನಿರೂಪಣೆಯಿಂದ ಮುಖ್ಯ ವಿಶೇಷ್ಯವಾಗಿರುವವಳು ಎನಿಸಿದ್ದಾಳೆ. ಅವಳನ್ನೇ ಸಾಮಾನ್ಯವಾಗಿ ಲಲಿತಾ ಎಂದು ನಿರ್ದೇಶಿಸಿರುವುದು. ಇಲ್ಲಿ *ಸದಾನಂದಪೂರ್ಣಃ* ಅಂದರೆ ಉಪಾಧಿಕಥನವು. ಅವಳು ಅಂತಃಕರಣದಿಂದ ಅವಚ್ಛಿನ್ನಳಾಗಿರುವುದರಿಂದ ಅವಳ ಉಪಾಸನಾವಿಧಕ್ಕೆ ಪ್ರವೇಶವಿದೆ, ಅವಳ ಲಲಿತಾತ್ವದಿಂದಲ್ಲ. ಹಾಗಾಗಿ *ಸ್ವಾತ್ಮೈ* ಎನ್ನುವಾಗ ತನ್ನ, ಉಪಾಸಕನ ಆತ್ಮದಲ್ಲಿ ಅಂತರ್ಯಾಮಿಯಾಗಿರುವ ಎಂದು ಹೇಳುವುದು. ಹೀಗೆ ಒಬ್ಬನು ಆತ್ಮನನ್ನು ಅಂತಃಕರಣದ ಉಪಾಧಿಯಲ್ಲಿ ವಿವೇಚಿಸಿದಾಗ ಉತ್ತಮ ಉಪಾಸಕನಾಗುತ್ತಾನೆ. ಸತ್ತ್ವ, ಚಿತ್ತ್ವ, ಆನಂದತ್ವ ಎಂಬ ರೂಪದ ಧರ್ಮತ್ರಯಗಳಿಂದ ವಿನಿರ್ಮುಕ್ತನಾದ ಧರ್ಮಿಯು ಮಾತ್ರವೇ ಉಪಾಸ್ಯದೇವತೆಗೆ ಆಧಾರಭೂತನಾದ ಕಾಮೇಶ್ವರನು ಆಗುವನು ಎಂಬುದು ವಿವೇಚನೆಯು.

ನಿತ್ಯಂ ನಿರ್ದೋಷಗಂಧಂ ನಿರತಿಶಯಸುಖಂ ಬ್ರಹ್ಮಚೈತನ್ಯಮೇಕಮ್ ।
ಧರ್ಮೋ ಧರ್ಮೀತಿಭೇದದ್ವಿತಯಮಿತಿ ಪೃಥಗ್ಭೂಯ ಮಾಯಾವಶೇನ ॥
ಧರ್ಮಸ್ತತ್ರಾನುಭೂತಿಃ ಸಕಲವಿಷಯಿಣೀ ಸರ್ವಕಾರ್ಯಾನುಕೂಲಾ ।
ಶಕ್ತಿಃ ಸ್ವೇಚ್ಛಾದಿರೂಪಾ ಭವತಿ ಗುಣಗಣಶ್ಚಾಶ್ರಯಸ್ತ್ವೇಕ ಏವ ॥
ಕರ್ತೃತ್ವಂ ತತ್ರ ಧರ್ಮಂ ಕಲಯತಿ ಜಗತಾಂ ಪಂಚಸೃಷ್ಟ್ಯಾದಿಕೃತ್ಯೇ ।

ಧರ್ಮಃ ಪುಂರೂಪ ಆತ್ಮಾ ಸಕಲಜಗದುಪಾದಾನಭಾವಂ ಬಿಭರ್ತಿ ॥
ಸ್ತ್ರೀರೂಪಂ ಪ್ರಾಪ್ಯ ದಿವ್ಯಾ ಭವತಿ ಚ ಮಹಿಷೀ ಸ್ವಾಶ್ರಯಸ್ಯಾದಿಕರ್ತುಃ ।
ಪ್ರೋಕ್ತಾ ಧರ್ಮಪ್ರಭೇದಾವಪಿ ನಿಗಮವಿದಾಂ ಧರ್ಮಿವದ್ಬ್ರಹ್ಮಕೋಟಿಃ ॥ ರತ್ನತ್ರಯಪರೀಕ್ಷಾ ॥ [28]

लौहित्यमेतस्य सर्वस्य विमर्शः ॥ २९ ॥

ಲೌಹಿತ್ಯಮೇತಸ್ಯ ಸರ್ವಸ್ಯ ವಿಮರ್ಶಃ ॥ 29 ॥

ಸರ್ವ ಪದದಿಂದ ಕಾಮೇಶ್ವರ, ಲಲಿತಾ ಮತ್ತು ಸ್ವಯಂ ಎಂಬ ತ್ರಿತಯವು. ಇವುಗಳ ವಿಮರ್ಶೆಯ ಅನುಸಂಧಾನವೇ ದೇವೀನಿಷ್ಠವಾದ ಲೌಹಿತ್ಯವು. ಸರ್ವಕ್ಕೆ ಸ್ವಾತ್ಮದೊಡನೆ ಅನುರಾಗವಿರುವುದರಿಂದ, ರಾಗ ಮತ್ತು ಲೌಹಿತ್ಯಗಳಿಗೆ ಅಭೇದವಿದೆ.

ಸ್ವಾತ್ಮೈವ ದೇವತಾ ಪ್ರೋಕ್ತಾ ಲಲಿತಾ ವಿಶ್ವವಿಗ್ರಹಾ ।
ಲೌಹಿತ್ಯಂ ತದ್ವಿಮರ್ಶಃ ಸ್ಯಾದುಪಾಸ್ತಿರಿತಿ ಭಾವನಾ ॥ ತಂತ್ರರಾಜತಂತ್ರ ॥

ಮುಂದೆ ತಿಳಿಸಿರುವುದು ಗುರುಮುಖದಿಂದಲೇ ತಿಳಿದಿರುವ ರಹಸ್ಯವು: *ನಿರುಪಾಧಿಕ* ಪದದಿಂದ ಕೇವಲತ್ವವೂ, ಸದಾನಂದಪೂರ್ಣ ಪದದಿಂದ ಧರ್ಮವಿಶಿಷ್ಟತ್ವವೂ ಹೇಳಲ್ಪಟ್ಟು, ವಿಶಿಷ್ಟ–ಕೇವಲಗಳು ಅವಯವ–ಅವಯವಿ ಆಗಿರುವುದು ಸಿದ್ಧವಾಗಿ ತಾದಾತ್ಮ್ಯರೂಪವೇ ಸಂಬಂಧವಾಗಿದೆ; ಸಂಯೋಗ ಮುಂತಾದ ರೂಪದ ಭೇದ ಘಟಿತವಾಗುವುದಿಲ್ಲ. ಹಾಗೆಯೇ ತ್ರಿಪುರಸುಂದರೀ–ಕಾಮೇಶ್ವರರಿಗೆ ವಿಗ್ರಹಾತ್ಮಕ ಸ್ಥೂಲರೂಪದ ಸಂಬಂಧವು ಕಾಮೇಶ್ವರಾಂಕನಿಲಯತ್ವ ಪದದಿಂದ ವ್ಯವಹರಿಸಲ್ಪಡುವ ಶಿವ–ಶಕ್ತಿಯರ ಸಾಮರಸ್ಯಾತ್ಮಕವಾದ ಲಾಕ್ಷಾದ್ರವ–ವಸ್ತ್ರದಂತೆ ಸಂಯೋಗವಿಶೇಷವಾಗಿರುವುದು. ಇಂತಹ ಉಪಾಧಿ ವಿನಿರ್ಮುಕ್ತವಾಗಿರುವುದರ ಶುದ್ಧತ್ವದಿಂದ ಸ್ಫಟಿಕವರ್ಣದಿಂದಿರುವಂತೆ ಆರೋಪಿತವಾಗಿ, ರಾಗದ ಅಭಾವದಶೆಯಿಂದ ಶುದ್ಧಸ್ಫಟಿಕದೊಡನೆ ಅಭೇದದಲ್ಲಿ ಪರ್ಯವಸಾನವಾಗುವುದರಿಂದ ಕಾಮೇಶ್ವರನಿಗೆ ಶುಕ್ಲಚರಣತ್ವವಿರುವುದು. ತ್ರಿಪುರಸುಂದರೀಯನ್ನು ತನ್ನ ಆತ್ಮವೆಂದು ಅನುಸಂಧಾನಮಾಡುವ ಅವಳ ವಿಷಯಕವಾದ ಮಾನಸವೃತ್ತಿಯಾಗಿ, ವಿಷಯದ ಸಂಬಂಧದಿಂದ ವೃತ್ತಿ ಹಾಗೂ ವೃತ್ತಿ ಸಂಬಂಧದಿಂದ ಮನಸು ರಾಗದೊಡನೆ ಅಭೇದವಿರುವಂತೆ ಪರ್ಯವಸಾನವಾಗಿ ಅದರ ವಿಶಿಷ್ಟತೆಯಿಂದ ರಕ್ತಚರಣತ್ವವಿರುವುದು. ಹಾಗಾಗಿ ಎಲ್ಲಾ ವಿಷಯಗಳ ವಿಶೇಷ್ಯ–ವಿಶೇಷಣ ಎಂಬ ಸಂಬಂಧದ ವ್ಯಾಪ್ತಿಯನ್ನು ಹೇಳಲು, ಚರಣಪ್ರಭೆಯ ಸಮರಸಭಾವ ಸಂಬಂಧರೂಪದಿಂದ ಮಿಶ್ರಚರಣದ ಭಾವನೆಯು ಸೂಚಿತವಾಗುವುದು. ತಂತ್ರಶ್ಲೋಕದ 'ಗುರುರಾದ್ಯಾ ಭವೇಚ್ಛಕ್ತಿಃ' ಮುಂತಾದವುಗಳು ಹೇಳುವಂತೆ ಭಾವನೆಯ ಅನುಸಂಧಾನವು ಉಪಾಸಿಸುವಂತಹ ಎಂಬ ಪದವಾಚ್ಯವಾಗಿ ಹೇಳಲ್ಪಟ್ಟು ನಾಲ್ಕನೆಯ ಚರಣವು ಲಕ್ಷಿತವಾಗುವುದು. ಅಂತಹ ಉಪಾಸನೆಯು ಮೂರುರೂಪವಾಗಿದ್ದು ವಿಗ್ರಹ ಮೊದಲಾದ ರೂಪವು ಸ್ಥೂಲರೂಪದ್ದಾಗಿ, ಮಾನಸ ಜಪ ಎಂಬ ಸೂಕ್ಷ್ಮರೂಪವು ಮತ್ತು ಭಾವನಾ ಎಂಬ ಶ್ರೇಷ್ಠರೂಪವು. [29]

अनन्यचित्तत्वेन च सिद्धिः ॥ ३० ॥

ಅನನ್ಯಚಿತ್ತತ್ವೇನ ಚ ಸಿದ್ಧಿಃ ॥ 30 ॥

ಪ್ರತಿಯೊಂದು ಆವರಣವೂ ಒಂದೊಂದು ಸಿದ್ಧಿ, ಒಂದೊಂದು ಮುದ್ರೆಯೊಡನೆ ಬಹಿರ್ಯಾಗದಲ್ಲಿ ಪೂಜಿಸಲ್ಪಡುವುವು, ಅಂತಹ ವಾಸನಾವಿಧಾನದ ಅರ್ಥದಲ್ಲಿ ಈ ಶ್ರುತಿಯಿದೆ. *ಅನನ್ಯಚಿತ್ತತ್ವ* ಅಭೇದಭಾವನೆ. ಚಕಾರವು ಮುದ್ರೆಗಳನ್ನು ಸಂಗ್ರಹಿಸುವುದು.

ಸಿದ್ಧಿಸ್ತ್ವನನ್ಯಚಿತ್ತತ್ವಂ ಮುದ್ರಾ ವೈಭವವಾಸನಾ ॥ ತಂತ್ರರಾಜತಂತ್ರ ॥

ಆಯಾಯ ಆವರಣದೇವತೆಯನ್ನು ಸ್ವಶರೀರ ಅವಯವದೊಡನೆ ಅಭೇದದಿಂದ ಭಾವಿಸುವುದು, ಸ್ವಾತ್ಮದ ಅನನ್ಯತ್ವವೆಂದು ಚಿತ್ತದಲ್ಲಿ ಭಾವಿಸುವುದೇ ಆಯಾಯ ಆವರಣದ ಸಿದ್ಧಿಯಾಗಿದೆ. ಹಾಗೆ 'ಮತ್ತೋ ನ ಭಿದ್ಯಂತೇ' ಎಂಬ ಬುದ್ಧಿಯೇ ಸಿದ್ಧಿಯಾಗಿರುವುದು. ಸಿದ್ಧಿ ಪದವನ್ನು ಉಪಾಸನೆಯ ಫಲ ಎಂದು ಕೆಲವರು ಅರ್ಥೈಸುವರು. ಆ ಪಕ್ಷದಲ್ಲಿ ಹಿಂದೆ ತಿಳಿಸಿರುವ ಭಾವನೆಯ ವಿಷಯದ ವೈಲಕ್ಷಣ ಪ್ರಯುಕ್ತ ಭೇದದ ನಿರಸನವಾಗುವುದು ಉಪಾಸನೆಯ ಫಲವು ಎಂಬ ಅರ್ಥವಾಗುವುದು. ಅವುಗಳ ವೈಭವವನ್ನು ಹೇಳುವಾಗ ಅಪರಿಚ್ಛಿನ್ನತೆಯಿಂದ ಅವುಗಳನ್ನು ಭಾವಿಸುವುದೇ ಆಯಾಯ ಆವರಣಗಳ ಮುದ್ರಾಭಾವನೆಯು. [30]

भावनायाः क्रियोपचारः ॥ ३१ ॥

ಭಾವನಾಯಾಃ ಕ್ರಿಯೋಪಚಾರಃ ॥ 31 ॥

ಸ್ವಾತ್ಮ ಅಭೇದದಿಂದ ಲಲಿತೆಯನ್ನು ಭಾವಿಸುವುದೇ *ಕ್ರಿಯಾಃ* ಪುನಃ ಪುನಃ ಮಾಡುವ ಕಾರ್ಯಗಳಾಗಿವೆ. ಗಂಧ ಮುಂತಾದ ಭೇದತುಂಬಿರುವ ಭಾವನೆಯಿಂದ ಉಪಚಾರ ಸಮರ್ಪಿಸುವಾಗ ಹಿಂದೆ ಭಾವಿಸಿರುವುದನ್ನು ತಿರಸ್ಕರಿಸುವ ಆಪತ್ತಿರುವುದರಿಂದ ಅದಕ್ಕೆ ಅವಿರೋಧವಾದ ಉಪಚಾರ ಭಾವನೆಯನ್ನು ಸ್ವೇಚ್ಛೆಯಿಂದ ಕಲ್ಪಿಸುವುದು ಎಂಬ ಭಾವ.

ಉಪಚಾರಾಶ್ಚಲತ್ವೇಽಪಿ ತನ್ಮಯತ್ವಾಪ್ರಮತ್ತತಾ ॥ ತಂತ್ರರಾಜತಂತ್ರ ॥

ಚಲತ್ವ ಅಂದರೆ ಚಂಚಲತೆ, ಅಭೇದಭಾವನೆಯ ಅಭಾವ. ಅಂತಹ ಸ್ವಭಾವಶೀಲತ್ವವು ಕೂಡ ಬ್ರಹ್ಮಮಯತ್ವದ ಅಂಶವೇ ಆಗಿರುವುದು ಪ್ರಮಾದವಲ್ಲ ಎಂದು ಸಾವಧಾನತೆಯಿಂದ ಅವಳನ್ನು ಭಾವಿಸುವುದು ಉಪಚಾರವು ಎಂಬ ಅದರ ಅರ್ಥವು. ಒಂದುವೇಳೆ ಚಲ ಶಬ್ದವನ್ನು ಮನೋರಮಾದಲ್ಲಿ ವ್ಯಾಖ್ಯಾನಿಸಿರುವಂತೆ ಸ್ವಪ್ನ ಮುಂತಾದ ಅವಸ್ಥೆಗಳ ಪರವಾಗಿ ತಿಳಿದರೆ, ಶಬ್ದದ ಸ್ವಾರಸ್ಯದಿಂದ ಜಾಗ್ರತ್‌ಕಾಲದಲ್ಲಿ ಮಾತ್ರ ಸಾವಧಾನತೆಯು ಆವಶ್ಯವಾಗಿದೆ ಎಂದು ಹೇಳಬಹುದು. ಅಂತಹ ಸಾವಧಾನತೆಯನ್ನು ಯೋಗವಾಸಿಷ್ಠದಲ್ಲಿರುವ ಶಿವಪೂಜೆಯಲ್ಲಿ ತೋರಿಸಲಾಗಿದೆ. ಆತ್ಮನ ವಿಷಯೋಪಭೋಗ ಜನಿತ ಆನಂದವೆಲ್ಲವನ್ನು ಸ್ವಾತ್ಮ ಅಭೇದದಿಂದ ಅನುಸಂಧಾನಮಾಡುವುದು ಪ್ರಾರಬ್ಧದಿಂದ ಲಭಿಸಿದ ಸುಖ–ದುಃಖಗಳಾಗಿ ಕರ್ಮಕ್ಷಯಕಾರಕ ಪರಿಣಾಮವಿರುವುದು; ಕಟು, ಕಷಾಯ ವಸ್ತುಗಳಿಂದ ತನ್ನ ಅಂಗಮರ್ದಿಸಿ ಪಡೆದ ಸುಖದಂತೆ ಭಾವಿಸುವುದು ಸಪರ್ಯೆಯ ರೂಪವಾಗಿಯೇ ಇರುವುದು ಎಂಬುದು ನಿಷ್ಕರ್ಷೆಯು. 'ಸಪರ್ಯಾಪರ್ಯಾಯಸ್ತವ ಭವತು ಯನ್ಮೇ ವಿಲಸಿತಮ್' ಮುಂತಾಗಿ ಭಗವತ್ಪಾದ ಮೊದಲಾದವರು ಹೇಳಿರುವುದು ಇದೇ ಅರ್ಥದಲ್ಲಿದೆ. ಪರಂತು ಇಂತಹ ಪೂಜೆಯು ಅಹೋರಾತ್ರಿ ಸಾಧ್ಯವಿರುವುದರಿಂದ ಪ್ರಕೃತ ವಿಧಿಸಿರುವ ಭಾವನೆಯಿಂದ ಮುಹೂರ್ತಕಾಲ ನಿಯಮವಿಧಿಗೆ ಅವಿರೋಧವಾಗಿ ಮಾಡುವುದು ಉಪಚಾರ ಎಂದು ಹೇಳಬಹುದು. ಅವುಗಳ ಪ್ರಕಾರವು 'ಖೇ ಮಹಿಮ್ನಿ ಪ್ರತಿವಿಭಾವನಮಾಸನಮ್ ।', 'ಪಾದೋಽಸ್ಯ ವಿಶ್ವಾ ಭೂತಾನಿ' ಮುಂತಾಗಿರುವ ಶ್ರುತಿಯಿಂದ ಪಾದರೂಪದಲ್ಲಿರುವ ಆಕಾಶ ಇತ್ಯಾದಿ

ಪ್ರಪಂಚದಲ್ಲಿ ಇರು, ಕಂಡುಬರು, ಪ್ರಿಯವಾಗು ಮುಂತಾದ ಅಂಶಭಾವನೆಯ ರೂಪದಲ್ಲಿ ನಾಮರೂಪಗಳ ಕ್ಷಾಲನ, ಪಾದ್ಯ ಮುಂತಾಗಿ ಇವೆ. ಒಂದು ವಿಭಾಗದವರು ಕಲ್ಪಿಸಿರುವಂತೆ ಅದನ್ನೇ ಸೂಕ್ಷ್ಮಪ್ರಪಂಚದಲ್ಲಿ ಅರ್ಘ್ಯವನ್ನು ಮಲನಿರಾಸಕವಾಗಿ ಹೇಳಿರುವರು. ಭಾವನರೂಪದಲ್ಲಿ ಜಲವನ್ನು ಸ್ವೀಕರಿಸುವುದು ಆಚಮನವಾಗಿದೆ. ಸತ್ತ್ವ, ಚಿತ್ತ್ವ, ಆನಂದತ್ವ ಮೊದಲಾದ ಅಖಿಲ ಅವಯವಗಳನ್ನು ಅಭೇದದಿಂದ ಭಾವಿಸಿ ಮಾಡುವ ಜಲಸಂಪರ್ಕವು ಸ್ನಾನವಾಗಿದೆ. ಅವೇ ಅವಯವಗಳ ಜಲಸಂಪರ್ಕವನ್ನು ಪ್ರಸಕ್ತಿಯ ವೃತ್ತಿವಿಷಯಕವಾಗಿ ಮುಚ್ಚುವುದು ವಸ್ತ್ರವಾಗಿದೆ. ನಿರ್ವಿಷಯತ್ವ, ನಿರಂಜನತ್ವ ಮುಂತಾದ ಅನೇಕ ಬ್ರಹ್ಮಲಿಂಗ ವಿಶೇಷಣಗಳನ್ನು ಬ್ರಹ್ಮಾಭಿನ್ನ ಧರ್ಮವಾಗಿ ವಿಭಾವನೆಯು ಆಭರಣವು. ಸ್ವಶರೀರ ಅಂತರ್ಗತ ಪಾರ್ಥಿವ, ನಾಭಸ, ವಾಯವೀಯ, ತೇಜಸ ಭಾಗಗಳನ್ನು ಚಂದ್ರಮಂಡಲದಲ್ಲಿರುವ ಅಮೃತದೊಡನೆ, ಆ ಮಂಡಲದ ಜಡಭಾಗಗಳನ್ನು ತೆಗೆಯುವುದರೊಂದಿಗೆ ಸಚ್ಚಿದಾನಂದವು ಮಾತ್ರ ಶೇಷವಾಗಿರುವಂತೆ, ಬ್ರಹ್ಮಮಯತ್ವದ ವಿಭಾವನೆಯಿಂದ ಗಂಧದಿಂದ ತಾಂಬೂಲದವರೆಗಿನ ಆರು ಉಪಚಾರಗಳು. ಹಾಗೆಂದು ನಿತ್ಯಾಹೃದಯದಲ್ಲಿ 'ಭವತೀಂ ತ್ವನ್ಮಯ್ಯೈರೇವ ನೈವೇದ್ಯಾದಿಭಿರರ್ಚಯೇದ್ ।' ಮತ್ತು 'ಪಂಚಭೂತಮಯಂ ವಿಶ್ವಂ ತನ್ಮಯೀ ಸಾ ಸನಾತನೀ ।' ಎಂದು ಹೇಳಿದೆ. ಪ್ರಕೃತ ಭಾವನಾಂಗನೆಯ ಪಶ್ಯಂತೀ ಮೊದಲಾದ ಸಕಲ ಶಬ್ದಗಳಿಂದ ಸ್ವೀಕಾರವು ನಾದದ ಮೂಲಕ ಬ್ರಹ್ಮದ ಉಪಸಂಹಾರವೆಂಬ ವಿಭಾವನೆಯಾಗಿ ಸ್ತೋತ್ರವಾಗಿದೆ. ವಿಷಯಗಳ ಹಿಂದೆ ಓಡುವ ಚಿತ್ತವೃತ್ತಿಯನ್ನು ವಿಷಯಗಳ ಜಡತೆಯಿಂದ ನಿರಸ್ತಗೊಳಿಸಿ ಬ್ರಹ್ಮದಲ್ಲಿ ವಿಲೀನಗೊಳಿಸುವುದು ಪ್ರದಕ್ಷಿಣೆಯಾಗಿದೆ. ವಿಷಯಗಳ ಪರಾವರ್ತನೆಯೆಂಬ ವೃತ್ತಿಯನ್ನು ಬ್ರಹ್ಮದಲ್ಲಿಯೇ ಪ್ರವಹಿಸುವಂತೆ ಮಾಡುವುದು ನಮಸ್ಕಾರವಾಗಿದೆ.

ಬಾಹ್ಯ ಮತ್ತು ಅಂತಃ ಕರಣಗಳ ಏಕರೂಪದ ಸ್ಥಿತಿಯು ಆಸನವು ಎಂಬ ವಾಕ್ಯವನ್ನು ಕೆಲವರು ಮೂಲದಲ್ಲಿ ತೋರಿಸುತ್ತಾರೆ, ಆಗ ಅವರ ಕೆಲವು ಉಪಚಾರಗಳು ಪ್ರಕೃತ ಭಾವನೆಗೆ ಅನುಗುಣವಾಗಿದ್ದು, ಹೆಚ್ಚಿನ ಪುಸ್ತಕಗಳಲ್ಲಿ ಲಬ್ಧವಿಲ್ಲದಿದ್ದರೂ ತಂತ್ರಗಳಲ್ಲಿ ಅದರ ವಿವರಣೆಯಿರುವುದರಿಂದ ನಾನು ಅದನ್ನು ನಿರಾಕರಿಸುವುದಿಲ್ಲ. [31]

> अहं त्वमस्ति नास्ति कर्तव्यमकर्तव्यमुपासितव्यमिति विकल्पानां आत्मनि विलापनं होमः ॥ ३२ ॥
>
> ಅಹಂ ತ್ವಮಸ್ತಿ ನಾಸ್ತಿ ಕರ್ತವ್ಯಮಕರ್ತವ್ಯಮುಪಾಸಿತವ್ಯಮಿತಿ ವಿಕಲ್ಪಾನಾಂ ಆತ್ಮನಿ ವಿಲಾಪನಂ ಹೋಮಃ ॥ 32 ॥

ಅಹಮಿತಿ. ಶ್ರೀಚಕ್ರದಲ್ಲಿ ಈ ಮೊದಲು ಭಾವಿಸಿರುವ ಮತ್ತು ಇತರ ಅನಂತ ಶಕ್ತಿಗಳು.

> ಅನ್ಯಾಸ್ತು ಶಕ್ತಯಶ್ಚಕ್ರಗಾಮಿನ್ಯೋ ಯಾಃ ಮಮಂತತಃ ।
> ತಾಸ್ತು ವಿಶ್ವವಿಕಲ್ಪಾನಾಂ ಕಲ್ಪನಾಃ ಮಮುದೀರಿತಾಃ ॥

ಎಂದು ಮುಂತಾಗಿ ತಂತ್ರಗಳಲ್ಲಿ ವರ್ಣಿಸಿದೆ. ಅವರನ್ನು ತ್ರಿಪುರಸುಂದರೀಯೊಡನೆ ಅಭೇದಭಾವನೆಯಿಂದ ಕಲ್ಪಿಸಿಕೊಳ್ಳುವುದು ಹೋಮ ವಾಸನೆಯು ಎಂದು ಹೇಳುವರು. ಅದರಿಂದ ನೈವೇದ್ಯಾಂಗವಾದ ಹೋಮವೆಂಬ ಬಾಹ್ಯವಾದ ಉಪಚಾರವನ್ನು ಅನೇಕವಿಧವಾಗಿ ಹೇಳುವುದು ಸಂಗತವಾಗುವುದು. ಹಾಗಾಗಿಯೇ ವಿಸರ್ಜನಾತ್ಮಕ ಉಪಚಾರಪರತೆಯನ್ನು *ಅಹಂ* ಎಂದು ಆರಂಭವಾಗುವಲ್ಲಿಂದ ಮುಂದಿನ ಮೂರು ವಾಕ್ಯಗಳಲ್ಲಿ ಹೇಳಲಾಗಿದೆ. ನನ್ನ, ನಿನ್ನ ಪ್ರತ್ಯಯಗಳನ್ನು ಅಹಂ, ತ್ವಂ ಎಂಬುದರಿಂದ ಗ್ರಹಿಸಬೇಕು. ಅಸ್ತಿ–ನಾಸ್ತಿ ಎಂಬುದರಿಂದ ಲೌಕಿಕದ

ವಿಧಿನಿಷೇಧಗಳನ್ನು, ಕರ್ತವ್ಯಂ-ಅಕರ್ತವ್ಯಂ ಎಂಬುದರಿಂದ ವೈದಿಕ-ಕರ್ಮಕಾಂಡಗಳನ್ನು, ಉಪಾಸಿತವ್ಯ ಎಂಬುದರಿಂದ ವೇದಶಿರದ ವಿಧಿಗಳು ಗ್ರಹಿತವಾಗುವುವು. ನೋಪಾಸಿತವ್ಯ ಎಂಬ ನಿಷೇಧದಿಂದ ಉಪನಿಷತ್ತುಗಳ ಸ್ವದರ್ಶನವೇ ಆಗುವುದರಿಂದ ಅದನ್ನು ಉಲ್ಲೇಖಿಸಿಲ್ಲ. ಇಂತಹ ಏಳರಿಂದ ವೃತ್ತಿಸಾಮಗ್ರಿಗಳು ಲಕ್ಷಿತವಾಗುವುವು. ಈ ವಿಧದ ವಿಕಲ್ಪಗಳನ್ನು ಆತ್ಮಸ್ವರೂಪತ್ವವಿರುವ ರೂಪವಿಶೇಷಗಳೆಂಬ ವಿಭಾನೆಯೇ ಹೋಮಭಾವನೆಯಾಗಿದೆ. 'ಹೋಮೋ ವಿಶ್ವವಿಕಲ್ಪಾನಾಂ ಸ್ವಾತ್ಮನ್ಯಸ್ತಮಯೋ ದೃಢಮ್' ಎಂದು ವಿವರಿಸಿರುವಂತೆ. ವಿಕಲ್ಪಗಳ *ವಿಲಾಪನಂ* ನಿರ್ವ್ಯುತ್ಥಾನಪೂರ್ವಕವಾಗಿ ಅವುಗಳ ಶಕ್ತಿಕದಂಬದ ದೇವತೆಗಳೊಡನೆ ವಿಲೀನಗೊಳಿಸುವಂತೆ ಭಾವಿಸುವುದು ಎಂಬುದು ಫಲಿತಾರ್ಥವು. [32]

भावनाविषयाणामभेदभावना तर्पणम् ॥ ३३ ॥

ಭಾವನಾವಿಷಯಾಣಾಮಭೇದಭಾವನಾ ತರ್ಪಣಮ್ ॥ 33 ॥

ಶ್ರೀಗುರುವಿನಿಂದ ಮೊದಲಾಗಿ ಹೋಮದಲ್ಲಿ ಅಂತ್ಯವಾಗುವವರೆಗೆ ಯಾವೆಲ್ಲ ಪದಾರ್ಥಗಳನ್ನು ಇಲ್ಲಿ ಭಾವಿಸಿರುವೆವೋ, ಅವೆಲ್ಲವನ್ನೂ ಪರಸ್ಪರ ಅಭೇದಬಾವನೆಯಿಂದ, ವಿಷಯಗಳ ವೈಲಕ್ಷಣದ ಪ್ರಯುಕ್ತವಿರುವ ಭೇದಭಾವನೆಯನ್ನು ನಿರಾಕರಿಸುವ ಮೂಲಕ ಅವುಗಳನ್ನು ತ್ಯಜಿಸಿ ನಿರ್ವಿಕಲ್ಪ, ತುರೀಯ, ಅಖಂಡ, ಅಕ್ಷಯತೆ ಇರುವ ಸ್ವಾತ್ಮಮಾತ್ರವೇ ಉಳಿದುಕೊಂಡಿರುವಂತೆ ಭಾವಿಸುವುದು ತರ್ಪಣವಾಸನೆಯು. 'ತಾಂಬೂಲಮರ್ಚನಾ ಸ್ತೋತ್ರಂ ತರ್ಪಣಶ್ಚ ನಮಸ್ಕ್ರಿಯಾ ।' ಎಂದು ಪರಿಗಣಿತವಾದ ಉಪಚಾರವಿಧವೇ ತರ್ಪಣವಾಗಿದೆ; ಅಂತೆಯೇ ಆದುವೇ ಆವರಣದೇವತೆಗಳ ಉಪಚಾರರೂಪದಲ್ಲಿ ವಿಸರ್ಜನವಾಗುವುದು ಇನ್ನೊಂದು ವಿಧದ ತರ್ಪಣವು. ಅತರ್ಪಣತೆಯ ಭಾವನೆಯ ನಿರೋಧಕತೆಯು ಕೂಡ ತರ್ಪಣವಾಗಿದೆ.

ಏಷಾಮನ್ಯೋಽನ್ಯಸಂಭೇದಭಾವನಂ ತರ್ಪಣಂ ಸ್ಮೃತಮ್ ॥ ತಂತ್ರರಾಜತಂತ್ರ ॥

ಅಂತಹವುಗಳ ನ್ಯಾಸ, ಜಪ, ಹೋಮಗಳು ಮತ್ತು ಸಂಕೋಚನ, ನಿಧಿಕರಣ, ವ್ಯಾನಗಳು ಶ್ರುತಿವಿರೋಧ * ಆಗಿರುವುದರಿಂದ ಸ್ವೀಕಾರಾರ್ಹವಲ್ಲ. [33]

ಹೀಗಿರುವ ಪ್ರಬಂಧದಲ್ಲಿ ದೇಹರೂಪದ ಶ್ರೀಚಕ್ರವನ್ನು ಸ್ವಾತ್ಮದಲ್ಲಿಯೇ ಶೇಷರೂಪದಿಂದ ಇರುವಂತೆ ಹೇಳಿ, ಅದರೊಡನೆ ಬಾಹ್ಯ ಅಂಗಗಳ ಸಂಬಂಧವನ್ನು ತೋರಿಸಿ ಸ್ವಾತ್ಮದಲ್ಲಿಯೇ ವಿಲೀನಗೊಳಿಸುವುದನ್ನು ಹೇಳಲು

पञ्चदशतिथिरूपेण कालस्य परिणामावलोकनम् ॥ ३४ ॥

ಪಂಚದಶತಿಥಿರೂಪೇಣ ಕಾಲಸ್ಯ ಪರಿಣಾಮಾವಲೋಕನಮ್ ॥ 33 ॥

ಅಂತಹ ಪ್ರಪಂಚವು ಮೂರುವಿಧವಾಗಿದೆ – ಕಾಲರೂಪ, ದೇಶರೂಪ ಮತ್ತು ಉಭಯರೂಪ ಎಂದು. ಮೊದಲನೆಯದು ಹೀಗಿದೆ: ಚಂದ್ರಮಂಡಲನಿಷ್ಠವಾದ ಸಾದಾಖ್ಯಾ ಕಲೆಯಿಂದ ಅತಿರಿಕ್ತವಾಗಿ 'ದರ್ಶಾ ದೃಷ್ಟಾ ದರ್ಶತಾ..' (ತೈ.ಬ್ರಾ. 3-10-1) ಮುಂತಾದ ಶ್ರುತಿಯಲ್ಲಿಪರಿಗಣಿತವಾದ ಹದಿನೈದು ಕಲೆಗಳೇ ಪ್ರತಿಪದೆಯಿಂದ ಪೂರ್ಣಿಮೆಯವರೆಗಿನ ತಿಥಿಗಳು. ತಿಥಿರೂಪವಾಗುವುವೇ ಕಾಮೇಶ್ವರೀ ಮೊದಲಾಗಿ ಚಿತ್ರಾವರೆಗಿನ ನಿತ್ಯೆಯರಿಂದ

ಅಭಿನ್ನವಾಗಿವೆ. ಸಾದ ಎಂಬ ಕಲೆಯಾದರೋ ಲಲಿತೆಯೇ ಆಗಿರುವಳು. ಹೀಗಿರುವ ನಿತ್ಯವೂ ಪರಿವರ್ತನೆಯಾಗುತ್ತಿರುವ ಕಾಲರೂಪದ ತಿಥಿಚಕ್ರದೊಳಗೆಯೇ ಶ್ರೀಚಕ್ರವು ಇರುವುದು, ಹೊರಗಿನಿಂದಲ್ಲ.

ಎರಡನೆಯದನ್ನು ಹೀಗೆ ಹೇಳಬಹುದು: ಭೂಗೋಳದ ಉತ್ತರಭಾಗದಲ್ಲಿರುವ ಮೇರುವಿನ ದಕ್ಷಿಣದಲ್ಲಿ ಜಂಬೂ, ಪ್ಲಕ್ಷ, ಶಾಲ್ಮಲಿ, ಕುಶ, ಕ್ರೌಂಚ, ಶಾಕ, ಪುಷ್ಕರ ಎಂಬ ಏಳು ದ್ವೀಪಗಳಿವೆ. ಅವುಗಳ ಅಂತರಾಳದಲ್ಲಿ, ಭೂಗೋಳದ ವಲಯಾಕಾರವಾಗಿ ಲವಣ, ಇಕ್ಷು, ಸುರಾ, ಸರ್ಪಿ, ಮಧು, ಕ್ಷೀರ ಎಂಬ ಆರು ಸಮುದ್ರಗಳಿದ್ದು, ಪುಷ್ಕರದ ಹೊರಗಿನಿಂದಿರುವ ಮಧುರೋದ ಸಮುದ್ರವು ಏಳನೆಯದು. ಅದರ ದಕ್ಷಿಣದಲ್ಲಿ ಶ್ರೇಷ್ಠವಾದ ವ್ಯೋಮದಲ್ಲಿ ಹದಿನಾರು ದೇವತೆಗಳಿರುವರು. ಅದರಲ್ಲಿ ಮೇರು ಮೊದಲಾಗಿ ವ್ಯೋಮದಲ್ಲಿ ಅಂತ್ಯವಾಗುವ ಸ್ಥಾನಗಳಲ್ಲಿ ಕ್ರಮವಾಗಿ ಲಲಿತಾಳಿಂದ ಚಿತ್ರೆಯವರೆಗಿನ ನಿತ್ಯೆಯರು ಯುಗದ ಪ್ರಥಮ ವರ್ಷದಲ್ಲಿ ಇರುವರು. ಎರಡನೆಯ ವರ್ಷದಲ್ಲಿ ಜಂಬೂದ್ವೀಪದಿಂದ ಮೇರುವಿನವರೆಗೆ ಸಾಗುತ್ತಾರೆ. ಮೂರನೆಯ ವರ್ಷದಲ್ಲಿ ಲವಣಸಾಗರದಿಂದ ಜಂಬೂದ್ವೀಪದವರೆಗೆ ಎಂಬ ರೀತಿಯಲ್ಲಿ ಹದಿನಾರನೆಯ ವರ್ಷ ಪರಮವ್ಯೋಮದಿಂದ ಮಧುರಸಮುದ್ರದವರೆಗೆ ಲಲಿತಾ ಮೊದಲಾದ ಹದಿನಾರು ನಿತ್ಯೆಯರು ಸ್ಥಿತವಾಗಿರುವರು. ಹೀಗೆ ಹದಿನಾರು ನಿತ್ಯೆಯರು ಹದಿನಾರುವರ್ಷಗಳಲ್ಲಿ ಒಂದೊಂದು ಪ್ರದೇಶದಲ್ಲಿ ಪರಿವೃತರಾಗಿರುವರು. ಇಂತಹ ದೇಶರೂಪದ ಚಕ್ರದ ಅಂತರಾಳದಲ್ಲಿ ಶ್ರೀಚಕ್ರವಿದೆ, ಹೊರಗಿನಿಂದ ಅಲ್ಲ.

ಮೂರನೆಯದು ಹೇಗೆಂದರೆ: ಭೂಗೋಳದ ಮೇಲೆ ಮತ್ತು ಕೆಳಗೆ ವಲಯವಾಗಿರುವ ಚಂದ್ರ, ಬುಧ, ಶುಕ್ರ, ರವಿ, ಮಂಗಳ, ಗುರು, ಶನಿ, ನಕ್ಷತ್ರಗಳ ಎಂಟು ಕಕ್ಷೆಗಳ ಅಂತರಾಳದಲ್ಲಿರುವ ಹದಿನಾರು ಪ್ರದೇಶಗಳು ಕಾಲಚಕ್ರ ರೂಪವಾಗಿವೆ. ಅವುಗಳ ಸ್ಥಾನಗಳಲ್ಲಿ ದೇಶಗಳನ್ನು ಪರಿವೃತ–ವಿಪರಿವೃತ ಕ್ರಮದಿಂದ ಹದಿನಾರು ನಿತ್ಯೆಯರು ಪರಿವರ್ತಿಸುತ್ತಿರುವರು. ಈ ಚಕ್ರದ ಒಳಗೆಯೇ ಶ್ರೀಚಕ್ರವಿದೆ, ಹೊರಗಿನಿಂದಲ್ಲ. ಈ ಮೂರುವಿಧ ಚಕ್ರಗಳ ಪರಮಾರ್ಥಕರೂಪದ ನಿತ್ಯಾಚಕ್ರವೇ ಬ್ರಹ್ಮದಿಂದ ಅತಿರಿಕ್ತವಾದ ಎಲ್ಲವನ್ನೂ ದೇಶ–ಕಾಲಗಳಿಂದ ಅವಚ್ಛಿನ್ನಗೊಳಿಸಿ ಭೇದರೂಪದಿಂದ ತೋರಿಸಿದರೂ ಎಲ್ಲವೂ ನಿತ್ಯಾರೂಪವಾಗಿಯೇ ಇವೆ. ಸ್ವಾತ್ಮನಿಂದ ಅವುಗಳ ಅಭೇದಭಾವನೆಯನ್ನೇ ಇಲ್ಲಿ ವಿಧಿಸಲಾಗಿದೆ.

> ಅಥ ಷೋಡಶನಿತ್ಯಾನಾಂ ಸ್ವಾತ್ಮತ್ವೇ ಭಾವನಾಂ ಶ್ರುಣು ।
> ಯದಾ ತನ್ಮಯತಾ ಸಿದ್ಧಾ ಪ್ರತ್ಯಕ್ಷಾ ಭವತಿ ಧ್ರುವಮ್ ॥

ಹೀಗೆ ಉಪಕ್ರಮಿಸಿರುವ 'ಗುರುರಾದ್ಯಾ ಭವೇಚ್ಛಕ್ತಿಃ' ಮುಂತಾದವುಗಳಿಂದ ಲಲಿತೆಯನ್ನು ಸಾಂಗೋಪಾಂಗವಾದ ಸ್ವಾತ್ಮತ್ವವಾಸನಾವನ್ನು ಹೇಳಿ ಅಂತ್ಯದಲ್ಲಿ

> ತಿಥಿರೂಪೇಣ ಕಾಲಸ್ಯ ಪರಿಣಾಮಾವಲೋಕನಮ್ ।
> ನಿತ್ಯಾಃ ಪಂಚದಶೈತಾಃ ಸ್ಯುರಿತಿ ಪ್ರೋಕ್ತಾಸ್ತು ವಾಸನಾಃ ॥

ಎಂದು ಉಪಸಂಹಾರವನ್ನು ತಂತ್ರರಾಜದಲ್ಲಿ ಕಾಣಬಹುದು. ಅವಳೇ ಪ್ರಪಂಚದ ಉಪಸಂಹಾರ ಫಲಕವಾಗಿರುವಳು. ತಿಥಿರೂಪದಿಂದ ಮೂರುವಿಧದ ಚಕ್ರಗಳ ಉಪಲಕ್ಷಣದ ಮೂಲಕ ಪ್ರಪಂಚದ ಪರವಾಗಿರುವಳು. ಪ್ರಪಂಚರೂಪದಿಂದ ಕಾಲವೇ ಆಗಿ ಪರಿಣಾಮಹೊಂದಿದವಳಾಗಿ ಇರುವಂತೆ ವಿಭಾವನೆಯೇ ಹದಿನೈದು ನಿತ್ಯೆಯರ ವಿಭಾವನೆಯಾಗಿರುವುದು ಎಂಬ ಅರ್ಥವು. ತ್ರಿಪುರಸುಂದರೀಯೊಡನೆ ಅವುಗಳ

ಅಭೇದವನ್ನು ಕ್ಲಪ್ತವಾಗಿ ಅನುಸರಿಸುವುದು ಭಾವನಾವಿಷಯದ ಉಪದೇಶದಲ್ಲಿ ಹೇಳಿರುವುದನ್ನು ಕ್ರೋಡೀಕರಿಸಿ ಹಿಂದಿನ ವಾಕ್ಯಗಳಲ್ಲಿರುವ ಅಭೇದಭಾವನೆಯು ವಿಹಿತವಾಗಿಯೇ ಇದೆ ಎಂದು ತಿಳಿಸುತ್ತದೆ.

ವಸ್ತುತಃ ಎಲ್ಲಾ ಶಕ್ತಿಗಳು 21600 ಸಂಖ್ಯೆಯ ಶ್ವಾಸರೂಪದ ಕಾಲರೂಪವಾಗಿವೆ. ಅವುಗಳ ಸಮಷ್ಟಿಯು ಮೂರ್ತರೂಪಿಣಿಯಾದ ಲಲಿತೆಯಾಗಿರುವಳು. ಇತರ ಹದಿನೈದು ವ್ಯಷ್ಟಿವೇಷದವುಗಳು ಪ್ರತ್ಯೇಕವಾದ 1440 ಶ್ವಾಸರೂಪದವಾಗಿರುವುವು. ಅಂದರೆ ಹಾಗಿರುವ ವಿಭಾವನೆಯು ಎಂಬ ಅರ್ಥವು. ಇಂತಹ ಎರಡು ಪಕ್ಷಗಳ ಭಾವನೆಯ ಆವರಣಪೂಜನೆಯು ಶ್ರೇಷ್ಠಕಾರ್ಯವೆಂದು ಕೆಲವರು ಹೇಳುತ್ತಾರೆ. [34]

ಹೀಗೆ ಅಂತರ–ಬಾಹ್ಯ ಸಕಲ ಪ್ರಪಂಚಗಳ ವಿಲಾಪನಪೂರ್ವಕ ಸ್ವಾತ್ಮ ಮಾತ್ರವೇ ಶೇಷವಾಗಿರುವ ಭಾವನೆಯನ್ನು ಅಹರ್ನಿಶಿ ಧರಿಸಿರುವುದು ಅವಶ್ಯವಾಗಿದೆ ಎಂಬ ಧ್ವನಿಯು ಆ ಶಕ್ತಿಯ ಉತ್ತಮ–ಮಧ್ಯಮ–ಅಧಮ ಸಾಧಕ ಭೇದದಿಂದ ಮೂರುವಿಧವಾದ ಕಾಲನಿಯಮವನ್ನು ತಿಳಿಸಲು

> एवं मुहूर्तत्रितयं मुहूर्तद्वितयं मुहूर्तमात्रं वा भावनापरो जीवन्मुक्तो भवति स एव शिवयोगीति गद्यते ॥ ३५ ॥
> ಏವಂ ಮುಹೂರ್ತತ್ರಿತಯಂ ಮುಹೂರ್ತದ್ವಿತಯಂ ಮುಹೂರ್ತಮಾತ್ರಂ ವಾ ಭಾವನಾಪರೋ ಜೀವನ್ಮುಕ್ತೋ ಭವತಿ ಸ ಏವ ಶಿವಯೋಗೀತಿ ಗದ್ಯತೇ ॥ 35 ॥

ಏವಂ ಎಂಬುದರಿಂದ ಪೂರ್ವೋಕ್ತ ಸ್ವಾತ್ಮಮಾತ್ರ ವಿಷಯವಾಗಿರುವವಳ ಶ್ವಾಸಸ್ತಂಭನ ಸಹಿತವಾದ ನಿರ್ವಿಕಲ್ಪವೃತ್ತಿಯು ಹೇಳಲ್ಪಟ್ಟಿದೆ. ಅಂತಹ ಭಾವನೆಯಿಂದ ಹೊರತಾದ ವ್ಯಾಪಾರಶೂನ್ಯ ಅಭಿನ್ನಭಾವನೆಯ ಶ್ರೇಷ್ಠತೆಯಲ್ಲಿ ಆಸಕ್ತನು ನಿರಂತರ ಭಾವನೆಯಲ್ಲಿಯೇ ಇರುವನು. ಅವನು ಜೀವನ್ಮುಕ್ತಿರೂಪದ ಫಲಕ್ಕೆ ಭಾಗಿಯಾಗಿ ಚಿರಕಾಲವಿರುವನು. ಜೈಗೀಷವ್ಯ ಮೊದಲಾದವರು ಶಿವಯೋಗಿತ್ವದಿಂದ ಹೀಗೆ ವ್ಯವಹರಿಸಿದ್ದು ಅಂತಹ ಭಾವನಾಶಾಲಿತ್ವದಿಂದ; ಅಂತಹ ಪದವನ್ನು ಗಳಿಸಿರುವುದು ಇಂತಹ ಭಾವನೆಯಿಂದಲೇ ಎಂಬ ಅರ್ಥ. ವೇದತ್ರಯಗಳು ಬಹಿರಂಗವಾಗಿ ಕರ್ಮಪ್ರತಿಪಾದಕವಾಗಿವೆ. ಅಥರ್ವವೇದವಾದರೋ ಅಂತರಂಗಕರ್ಮಗಳನ್ನೇ ಪ್ರಚುರಗೊಳಿಸಿ ಪ್ರತಿಪಾದಿಸುವುದು; ಅದರ ಶಿರ ರೂಪದಲ್ಲಿರುವ ಈ ಉಪನಿಷತ್ತು ಅಂತಹ ಅಂತರಂಗದ ಭಾವನೆಯನ್ನು ತಿಳಿಸುವುದು. [35]

> कादिमतेनान्तश्चक्रभावनाः प्रतिपादिताः ॥ ३६ ॥
> ಕಾದಿಮತೇನಾಂತಶ್ಚಕ್ರಭಾವನಾಃ ಪ್ರತಿಪಾದಿತಾಃ ॥ 36 ॥

> य एवं वेद सोऽथर्वशिरोधीते ॥ ३७ ॥
> ಯ ಏವಂ ವೇದ ಸೋಽಥರ್ವಶಿರೋಽಧೀತೇ ॥ 37 ॥

ಇದರಲ್ಲಿ ಯಾವ ಅಂತಃಚಕ್ರಭಾವನೆಯನ್ನು ಹೇಳಿರುವುದೋ ಅದನ್ನು ಕಾದಿ ಎಂಬ ಶಕ್ತಿಮತದಂತೆ ಹೇಳಲಾಗಿದೆ, ಕೌಲಮತದಂತೆ ಅಲ್ಲ. ಈ ಉಪನಿಷತ್ತಿಗೆ ಇಂತಹ ಭಾವನಾಪ್ರತಿಪಾದಕತ್ವವಿರುವುದು ಪದಶಃ *ಯೋ ವೇದ* ಎಂಬ ವಾಕ್ಯವು ತಿಳಿಸಿ, ಅಂತಹವನು ಅಥರ್ವಶಿರದ ಅಧ್ಯಯನ ಮಾಡುವವನು ಎಂದು ಹೇಳುತ್ತದೆ. ಅಧ್ಯಯನ

ಮಾಡುವ ಭಾವನೆಯಲ್ಲಿ ಅರ್ಥ–ವಿಧಿ ಅರಿಯುವ ಭಾವವಿದೆ. 'ಯೋಽರ್ಯಜ್ಞ ಇತ್ ಸಕಲಂ ಭದ್ರಮಶ್ನುತೇ' ಎಂಬ ಬೇರೊಂದು ಶ್ರುತಿಯಂತೆ ಎಲ್ಲಾ ಪದಸ್ವಾರಸ್ಯಗಳಲ್ಲಿ ಶಬ್ದ ಮಾತ್ರ ಪಠಿಸುವುದರಿಂದ ಸ್ವಲ್ಪ ರಕ್ಷಣೆಯು ದೊರೆಯುವುದು ಎಂಬಂತೆ ಶಿವಮ್. [36–37]

इति भावनोपनिषत् ॥

ಇತಿ ಭಾವನೋಽಪನಿಷತ್ ॥

ಇತಿ ಭಾವನೋಽಪನಿಷದೋಽಥರ್ವಣಶಿರಸೋಽತನೋದ್ಭಾಷ್ಯಮ್ ।
ಭಾಸ್ಕರರಾಯೋ ವಿದುಷಾಂ ತುಷ್ಟ್ಯೈ ಜೀವನ್ಮುಮುಕ್ಷೂಣಾಮ್ ॥

। ಸಮಾಪ್ತಮ್ ।

ಓಂ ಭದ್ರಂಕರ್ಣೇಭಿಃ ಶ್ರುಣುಯಾಮ ದೇವಾಃ ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।
ಸ್ಥಿರೈರಂಗೈಃಸ್ತುಷ್ಟುವಾಗ್ಂ ಸಸ್ತನೂಭಿಃ ವ್ಯಶೇಮದೇವಹಿತಂ ಯದಾಯೂಃ ।
ಸ್ವಸ್ತಿನಃ ಇಂದ್ರೋ ವೃದ್ಧಶ್ರವಾ ಸ್ವಸ್ತಿನಃ ಪೂಷಾ ವಿಶ್ವವೇದಾಃ ।
ಸ್ವಸ್ತಿನಸ್ತಾರ್ಕ್ಷ್ಯೋ ಅರಿಷ್ಟನೇಮಿಃ ಸ್ವಸ್ತಿನೋ ಬೃಹಸ್ಪತಿರ್ದಧಾತು ॥

॥ ॐ तत् सत् ॥ ॐ ತತ್ ಸತ್॥

अथ भावनोपनिषद्भाष्यम् ।
ಅಥ ಭಾವನೋಪನಿಷದ್ಭಾಷ್ಯಮ್ ।

(ಅಪ್ಪಯದೀಕ್ಷಿತರ ವ್ಯಾಖ್ಯೆ)

ಓಂ ಶ್ರೀಕೃಷ್ಣಾಯ ಪರಮಾತ್ಮನೇ ನಮಃ

ಓಂ । ಶ್ರೀಚಕ್ರಾರಾಧನಂ ಸ್ಥೂಲಂ ನಿಂದ್ಯತೇ ಭಾವನಾಂತರಾತ್ ।
ಯಸ್ಯಾಂ ವ್ಯಾಖ್ಯಾಸ್ಯತೇ ಸೇಯಂ ಭಾವನೋಪನಿಷನ್ಮಯಾ ॥

ಇದರಲ್ಲಿ ಪರಮಕಾರಣಭೂತವಾದ ಶಕ್ತಿಯು ಶ್ರೀಗುರುವಿಗಿಂತ ಬೇರೆ ಅಲ್ಲ ಎಂದು ಹೇಳುತ್ತಾ ಶ್ರೀಚಕ್ರವು ನವರಂಧ್ರರೂಪದ ದೇಹಕ್ಕಿಂತ ಅನ್ಯವಲ್ಲ ಎಂದು ನಿರೂಪಿಸಲಾಗಿದೆ. ಅನ್ಯಥಾ ಭಾವನಾರೂಪದ ಶ್ರೀಚಕ್ರದ ಉಪಾಸನಾಕ್ರಮವನ್ನು ಮೊದಲು ತಿಳಿಸುವ ಉಪನಿಷತ್ತಿನಲ್ಲಿ ಸ್ಥೂಲ ಮತ್ತು ಬಾಹ್ಯವಾದ ಶ್ರೀಚಕ್ರ ಉಪಾಸನೆಯನ್ನು ಘೋಷಿಸುವ 'ಬಿಂದು ತ್ರಿಕೋಣ' ಮುಂತಾದ ಶ್ಲೋಕದ ಅನುರೋಧದಂತೆ ಕೆಲವರು ಶ್ರೀಚಕ್ರವನ್ನು ಬರೆದು ಉಪಾಸಿಸುವುದಾದರೋ ಮಂದಬುದ್ಧಿಯವರ ಆಧ್ಯಾತ್ಮಶಾಸ್ತ್ರದ ಅನಧ್ಯಯನದ ಫಲವಾಗಿರುವುದಾಗಿದ್ದು ವಿದ್ವಜ್ಜನರಿಗೆ ಅದು ಸುತರಾಂ ಉಪೇಕ್ಷಣೀಯವೇ ಆಗಿದೆ. ಶ್ರೀಚಕ್ರದ ಪೂಜನೆಯ ಪ್ರಕಾರವನ್ನು ಉಪನಿಷತ್ತಿನಲ್ಲಿ ಹೇಗೆ ಪ್ರಕಟಿಸಲಾಗಿದೆ? ಅದರಲ್ಲಿ 'ಜ್ಞಾತೃಜ್ಞಾನಜ್ಞೇಯಾನಾಮಭೇದಭಾವನಂ ಶ್ರೀಚಕ್ರಪೂಜನಮ್' (ಶ್ಲೋಕ 10) ಎಂದು ಉಚ್ಚಕಂಠದಿಂದ ಹೇಳಲಾಗಿದೆ. ಇಂತಹ ಸ್ಪಷ್ಟ ಅಭಿಪ್ರಾಯದ ಭಾವನಾತ್ಮಕವಾದ ಪೂಜನೆಯನ್ನು ಮಾಡುವುದು ದುರ್ಲಭವಾಗಿದ್ದು, ದುರ್ಬಲವಾದ ಇತರ ಪ್ರಮಾಣಗಳನ್ನು ಆಶ್ರಯಿಸುವವರು ಮರದ ಕೀಟದ ಕೊರೆಯುವಿಕೆಯಂತೆ ಕಾಮ್ಯಾರ್ಥವಾದ ಮೋಹಸಮುದ್ರದಲ್ಲಿ ಸ್ವಯಂ ಮಜ್ಜನಮಾಡುವುದಲ್ಲದೆ ಇತರರನ್ನೂ ಸ್ನಾನಮಾಡಿಸಿ ಹೆಚ್ಚಿನ ಆಯುಷ್ಯವನ್ನು ಕಳೆಯುತ್ತಾರೆ. ಇಲ್ಲಿ ಬ್ರಾಹ್ಮೀ ಮೊದಲಾದ ಎಂಟು ಶಕ್ತಿಯರು, ಕಾಮಾಕರ್ಷಿಣೀ ಮೊದಲಾದ ಹದಿನಾರು ಶಕ್ತಿಯರನ್ನು ಭೂಪುರ ಮುಂತಾದ ಕಡೆಗಳಲ್ಲಿ ಹೇಳಿರುವುದಾದರೆ, ಬಾಹ್ಯ ಸ್ಥೂಲ ಶ್ರೀಚಕ್ರೋಪಾಸನೆಗೆ ಉಪನಿಷತ್ತು ಪ್ರಮಾಣವಾಗಿ ಅದನ್ನು ಮಾಡಬಹುದು ಎಂದು ಕೆಲವರು ಹೇಳಿದರೂ ಅದನ್ನು ಹಾಗೆ ಹೇಳಿಲ್ಲ. ಅದರೊಳಗೆ ಸಗುಣದೇವತೆಯ ಭಾವನಾತ್ಮಕ ಆರಾಧನೆಯನ್ನು ವರ್ಣಿಸಿಲ್ಲ ಮತ್ತು ಅದರಿಂದ ಅರಿಯಲ್ಪಡುವ ಪ್ರತೀಕೋಪಾಸನೆಯನ್ನೂ ಹೇಳಿರುವುದಿಲ್ಲ. ಆಧ್ಯಾತ್ಮಿಕ ತತ್ತ್ವಗಳನ್ನು ಹೇಳುವ

ದೇಹೋ ದೇವಾಲಯಃ ಪ್ರೋಕ್ತೋ ಜೀವೋ ದೇವಃ ಸದಾಶಿವಃ ।
ತ್ಯಜೇದಜ್ಞಾನನಿರ್ಮಾಲ್ಯಂ ಸೋಽಹಂಭಾವೇನ ಪೂಜಯೇದ್ ॥

ಎಂಬ ವಚನದಂತೆ ಪೂಜಿಸುವುದೇ ಇದರಲ್ಲಿದೆ ಎಂದು ತಿಳಿಯಬೇಕು. ಇಲ್ಲಿ ಸಗುಣಮೂರ್ತಿ ಧ್ಯಾನಾತ್ಮಕ ಉಪಾಸನೆಗೆ ಅವಕಾಶವಿಲ್ಲದಿರುವುದರಿಂದ ಕೈಮುತಿಕನ್ಯಾಯದಂತೆ ರೇಖೆಗಳಿಂದ ಕೂಡಿರುವ ಶ್ರೀಚಕ್ರದ ಪ್ರತೀಕೋಪಾಸನೆಗೆ ಅವಕಾಶವಿಲ್ಲ ಎಂದು ಸಿದ್ಧವಾಗುವುದು. ಕೆಲವು ಅಂತಹ ಪ್ರತೀಕೋಪಾಸಕರು ಪ್ರಬಲ ಮಂತ್ರಶಾಸ್ತ್ರದ ಪ್ರವೀಣರೆಂದು ತಿಳಿದುಕೊಂಡು ಕೃತಾರ್ಥರಾದೆವೆಂದು ಬೀಗುತ್ತಾರೆ. ಆದರೆ ಅಂತಹವರು

ಉತ್ತಮಾ ತತ್ವಚಿಂತಾ ಸ್ಯಾನ್ಮಧ್ಯಮಂ ಶಾಸ್ತ್ರಚಿಂತನಮ್ ।
ಅಧಮಾ ಮಂತ್ರಚಿಂತಾ ಸ್ಯಾತ್ತೀರ್ಥಭ್ರಾಂತ್ಯಧಮಾಧಮಾ ॥

ಎಂಬ ಶ್ರುತಿಯಂತೆ ಅವುಗಳ ಅಂತರವನ್ನು ಅರಿತುಕೊಳ್ಳಬೇಕು. ಇನ್ನು *ನವರಂಧ್ರರೂಪೋ ದೇಹೋ ನವಶಕ್ತಿಮಯಂ ಶ್ರೀಚಕ್ರಮ್* ಮುಂತಾದವುಗಳಿಂದ ದೇಹಾದಿಗಳ ಅನನ್ಯತ್ವವು ಶ್ರೀಚಕ್ರ ಮುಂತಾದವುಗಳಿಗೆ ಇರುವಂತೆ ಭಾವಿಸಬೇಕು ಎಂದು ಹೇಳಿರುವುದಾದರೂ ಅದು ಹಾಗೆ ವಾಚ್ಯವಲ್ಲದೆ ಶ್ರೀಚಕ್ರ ಮುಂತಾದವುಗಳ ಅನನ್ಯತ್ವವು ದೇಹಾದಿಗಳಿಗಿದೆ ಎಂದು ಭಾವಿಸಬೇಕು ಎಂಬ ಅಭಿಪ್ರಾಯದಲ್ಲಿ ಆಗಿರುವುದು. *ಜ್ಞಾತೃಾದ್ಯ-ಭೇದಭಾವನಂ ಶ್ರೀಚಕ್ರಪೂಜನಂ* ಎಂಬುದರಿಂದ ಸ್ಪಷ್ಟವಾಕ್ಯದಲ್ಲಿ ಶ್ರೀಚಕ್ರ ಮುಂತಾದವುಗಳು ದೇಹ ಮೊದಲಾದವುಗಳಾಗಿವೆ ಎಂಬ ಬುದ್ಧಿಯಿಂದ ತಿಳಿಯುವುದು. ದೇಹಾದಿಗಳು ಶ್ರೀಚಕ್ರಾದಿಗಳಾಗಿವೆ ಎಂಬ ಬುದ್ಧಿಯಿರಬೇಕು ಎಂಬ ಉಪದೇಶವಾದರೆ ಆಗ ಅಂತಹ ಪೂಜನೆಯಲ್ಲಿ ಮುಖ್ಯತ್ವಕ್ಕೆ ಆಪತ್ತುಂಟಾಗಿ, ಭಾವನೋಪನಿಷತ್ತಿನ ಸಂಜ್ಞೆಯು ಅವಗತವಾಗುವುದಿಲ್ಲ. ಅಭ್ಯಂತರಭಾವನೆಯ ಅಪೇಕ್ಷೆಯಿರುವಲ್ಲಿ ಬಾಹ್ಯ ಪೂಜನೆಯು ಶ್ಲಾಘ್ಯವಾಗಿದೆ ಎಂದು ಹೇಳಿದಂತಾಗುವುದು. ದೇವೀ ವಿಷಯಕ ಮಂತ್ರಜಪ ಮಾತ್ರವೇ ಲಕ್ಷ್ಯವಾಗಿದ್ದರೆ, ನಿಷ್ಕಾಮ ಕ್ರಮದಲ್ಲಿ ಆ ಮೂಲಕ ಹೇಳಿರುವ ಪ್ರಕಾರದ ತತ್ತ್ವಭಾವನೆಯ ಅರ್ಥವಿಚಾರದ ಮುಕ್ತಿಪದವನ್ನು ಹೊಂದಬಹುದು; ಶ್ರೀಚಕ್ರ ಮೊದಲಾದ ಯಂತ್ರಾರಾಧಕರು ಸಕಾಮರಾಗಿರುವುದರಿಂದ ಎಂದಿಗೂ ಮುಕ್ತಿಪದಕ್ಕೆ ಅರ್ಹರಾಗುವುದಿಲ್ಲ, ಅದು ಸರ್ವದಾ ಬಹಿರ್ಮುಖವಾಗಿರುವುದರಿಂದ. ಇನ್ನು *ಅವ್ಯಕ್ತಮಹದಹಂಕಾರಾಃ ಕಾಮೇಶ್ವರೀವಜ್ರೇಶ್ವರೀಭಗಮಾಲಿನ್ಯೋऽಂತಸ್ತ್ರಿಕೋಣಗಾ ದೇವತಾಃ* ಎಂದು ಹೇಳಿರುವುದು ಅವ್ಯಕ್ತ ಮೊದಲಾದ ಎಲ್ಲ ತತ್ತ್ವಗಳೂ ಪರಮಾರ್ಥದ ಪರತತ್ತ್ವಪ್ರಾಪ್ತಿಯ ಅರ್ಥದ ಹೇಳಿಕೆಗಳು ಎಂಬುದು ವೇದಾಂತದ ಅಭಿಮತವು; ಇಲ್ಲಿ ಹೇಳಿರುವ ಮೂರುದೇವತೆಗಳು ಅವ್ಯಕ್ತ ಮುಂತಾದ ರೂಪದಲ್ಲಿ ಅವಸ್ಥಿತವಾಗಿರದಿದ್ದರೆ ವಿನಾಶಕರವೇ ಆಗುವುದು. ಯಾವುದೇ ವಿನಾಶಕಾರೀ ದೇವತೆಯು ನೀಚ ಎಂದಲ್ಲ; ಸರ್ವ ದೇವತೆಗಳ ಅಧಿಷ್ಠಾನಭೂತಳಾದ ಸದಾನಂದಘನ ಕಾಮೇಶ್ವರೀಯಲ್ಲಿ ಪೂರ್ಣರೂಪದಿಂದ ಏಕೀಕರಣವಾಗುವುದು ವಿಹಿತವಾಗಿರುವುದರಿಂದ. ಎಲ್ಲದರಲ್ಲಿಯೂ ಅಮೂರ್ತಭಾವನೆಯ ವಿನಃ, ಯಂತ್ರದಲ್ಲಿ ಮೂರ್ತದೇವತೆಗಳ ಭಾವನೆಯಿರುವುದೇ ನೀಚವಾಗಿರುವುದು. ಇನ್ನು ಹೇಳಿದ ಪ್ರಕಾರದ ಆವಾಹನ, ಆಸನ, ಅರ್ಘ್ಯ, ಪಾದ್ಯ, ಆಚಮನೀಯ, ಸ್ನಾನ, ವಸ್ತ್ರ ಮುಂತಾದ ಉಪಚಾರಗಳ ಬಾಹ್ಯ ಶ್ರೀಚಕ್ರದ ಆರಾಧನೆಯು ಭಾವನೆ ಮಾತ್ರವಿಲ್ಲದೆ ಹೇಗೆ ಇಂದ್ರಿಯಗಳ ವಿಷಯವ್ಯಾಪಾರಗಳಿಗೆ ವಿಮುಖವಾಗಲು ಅರ್ಹವಾಗಬಹುದು? ಹಾಗೆ 'ನೈವ ಕಶ್ಚಿತ್ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।' ಎಂಬ ವಚನವನ್ನು ಸ್ಮರಿಸಿಕೊಳ್ಳಬಹುದು.

ಮಂದರಾಗಿ ಪರತತ್ತ್ವಜ್ಞಾನದ ಅನಧಿಕಾರಿಗಳಾದ ಯಂತ್ರಾರಾಧಕರಿಗೆ ಅವರ ಆರಾಧನೆಯು ವಿಶ್ವಾಸಜನಕವಾಗಲು ಮೇಲೆಹೇಳಿದ ಪ್ರಕಾರದ ಭಾವನೋಪದೇಶವು ಯುಕ್ತವೆಂದೂ ಹೇಳಲಾಗುವುದಿಲ್ಲ; 'ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಮ್ ।' ಎಂಬುದನ್ನು ನೆನಪಿಸಿಕೊಳ್ಳಬಹುದು. ಅಂತಹವರಿಗೆ ಈ ಉಪನಿಷತ್ತು ಸರ್ವ ಅನರ್ಥಕಾರಿಯಾಗಿ ಉಪೇಕ್ಷಣೀಯವಾಗಿದೆ. ಯಂತ್ರಾರಾಧಕರ ಲೋಕದಲ್ಲಿ ಸ್ವ ಆರಾಧನೆಯ ಉತ್ತಮಪ್ರಮಾಣದ ಅನ್ವೇಷಣೆಯ ಪರವಾಗಿರುವವರಿಗೆ ಇಂತಹ ಉಪನಿಷತ್ತಿನ ಪುಸ್ತಕವನ್ನು ನೀಡುವುದು ಹಿರಿದಾದ ಸಹಾಯವಾಗಿದ್ದು, ಅದರ ಅರ್ಥವಿವರಣೆಯನ್ನು ಅರಿಯಲು ಪ್ರಾರ್ಥಿಸಿದರೆ, ಅವರಿಗೆ ಯಥಾರ್ಥ ಉಪದೇಶದಿಂದ ಬುದ್ಧಿಭೇದವು ನಾಶವಾದಾಗ ಈ ಶ್ರುತಿಯ ಉಪದೇಶವು ಅಪರಾಧವಾಗುವುದಿಲ್ಲ. ಮತ್ತು ಭಾವನಾಮಾತ್ರದಿಂದ ಇಂದ್ರಿಯಗಳನ್ನು ವಿಷಯವ್ಯಾಪಾರ ವಿಮುಖವಾಗಿಸಬಹುದು ಎಂದೂ ಹೇಳಲಾಗುವುದಿಲ್ಲ; ಭಾವನಾಕರ್ತೃಗಳ ಬುದ್ದಿಯು ಸರ್ವ ಇಂದ್ರಿಯಗಳಲ್ಲಿ ಲೀನವಾಗಿರುವುದರಿಂದ. ತಿಳಿಸಿರುವ ಪ್ರಕಾರದ

ಭಾವನಾರಹಿತರು ಕ್ಷಣದಲ್ಲಿಯೇ ಅಕರ್ಮಕರಾಗುವುದಿಲ್ಲ ಮತ್ತು ಅದು ಉಪನಿಷತ್ತುಗಳಿಗೂ ಹಾಗೂ ಸ್ಮೃತಿಗಳಿಗೂ ವಿರೋಧವಲ್ಲ. ಅದು ಬಾಹ್ಯಾರಾಧನೆಯಲ್ಲಿ ಲಕ್ಷಿತವಾಗುವ ದೇವೀಯ ಸಗುಣ, ಮೂರ್ತಭಾವವನ್ನೇ ಪ್ರತಿಪಾದಿಸುವುದು ಎಂದೂ ಹೇಳಲಾಗುವುದಿಲ್ಲ. ಚಿದಗ್ನಿಸ್ವರೂಪದ ಪರಮಾನಂದ ಶಕ್ತಿಯ ಸ್ಫುರಣೆಯಲ್ಲಿ ವಸ್ತ್ರ ಎಂಬ ತನ್ನಿಂದ ಹೊರತಾದ ವಸ್ತುವಿನ ಸಂಗರಹಿತತೆಯನ್ನು ಸ್ಮರಿಸಿದರೆ, ವಿಭೂಷಣಗಳ ಅಸಂಗತತೆಯನ್ನು ತಿಳಿಸಿ ಚಿದ್ರೂಪದ ನಿರ್ಗುಣಬ್ರಹ್ಮ ಭಾವನೆಯೇ ಪ್ರಕೃತವಾಗಿರುವುದು. ಅವಸ್ಥಾತ್ರಯಗಳ ಏಕೀಕರಣ ರೂಪದ ತಾಂಬೂಲವೆಂಬ ತುರೀಯ ಅವಸ್ಥೆಯ ರೂಪದ ನಮಸ್ಕಾರದಿಂದ ನಿರ್ಗುಣಬ್ರಹ್ಮಭಾವವೇ ಪ್ರಕೃತವಾಗಿರುವುದು. ಮೂಲಾಧಾರದಿಂದ ಬ್ರಹ್ಮರಂಧ್ರದವರೆಗೆ ಎಂದಿರುವ ಲಕ್ಷಣದ ಪ್ರದಕ್ಷಿಣೆಯಿಂದ ವ್ಯಷ್ಟಿತತ್ತ್ವಭಾವನೆಯೇ ಸೂಚಿತವಾಗದೆ, ಅಖಂಡವಾಗಿ ಬೋಧವಾಗುವ ಆನಂದಲಕ್ಷಣದ ಸಮಷ್ಟಿತತ್ತ್ವಭಾವನೆಯೇ ಆಗಿರುವುದು ಎಂದು ಶಂಕಿಸಬಹುದು. ದೇಹಶೂನ್ಯ ಪ್ರಮಾತೃವಿನ ನಿಮಜ್ಜನವೆಂಬ ಬಲಿಹರಣವು ದೇಹಶೂನ್ಯತ್ವದಿಂದ ಭಾವನೆಯಾಗಿ ಪ್ರಮಾತೃ ಸ್ವರೂಪದ ಸಮಷ್ಟಿಚೈತನ್ಯದಲ್ಲಿಯೇ ಮಗ್ನವಾಗುವುದು. ಅಂದರೆ ಸಮಷ್ಟಿ ಮೂಲಾಧಾರದಿಂದ ಬ್ರಹ್ಮರಂಧ್ರದ ತನಕ ಈಶ್ವರನೇ ಕಂಡುಬರುವನು ಎಂಬುದು ಸೂಚಿತವಾಗುವುದು. ಅದುದರಿಂದ ಎಲ್ಲದರಲ್ಲಿಯೂ ಬ್ರಹ್ಮಭಾವವೇ ಪ್ರಕೃತವಾಗಿರುವುದು.

ಅದರಲ್ಲಿ ಬಲಿಹರಣದ ಬಳಿಕ ಮಾಡುವ ಹೋಮವು ಹೇಗಿರುವುದು ಎಂದು ತಿಳಿಸಲು ನಿತ್ಯವೂ ಎನ್ನಲಾಗಿದೆ. *ಆತ್ಮನಿ ವಿಲಾಪನಂ* ನಿತ್ಯವೂ ಘಟಾಕಾಶಸ್ಥಾನದಲ್ಲಿ ಕೂಟಸ್ಥವಾಗಿರುವ ಆತ್ಮನನ್ನು ಶ್ರೇಷ್ಠವಾದ ಮಹಾಕಾಶಸ್ಥಾನದಲ್ಲಿರುವ ಚಿನ್ಮಾತ್ರ ಆತ್ಮನಲ್ಲಿಯೇ ವಿಲೀನವಾಗಿರುವಂತೆ ಚಿಂತಿಸುವುದೇ ಹೋಮವು. ನಾವು ಸೇವಿಸುವುದನ್ನು 'ಮಾಂ ಜುಹೋಮಿಸ್ವಾಹಾ' ಎಂದು ಸ್ವೀಕರಿಸುವುದು ಆತ್ಮನಿಗೆ ಹೋಮದ್ರವ್ಯವಾಗಿರುವುದು ಎಂದು ಹೇಳಬಹುದು. ಪರಿಪೂರ್ಣಧ್ಯಾನವೇ ಅವಳ ಪಾದಗಳಿಗೆ ನಿಮಜ್ಜನವು ಎಂದು ಮುಹೂರ್ತತ್ರಯ ಯಾ ಮೂಹೂರ್ತಕಾಲದಲ್ಲಿ ಭಾವಿಸುವುದರಿಂದ ದೇವತೆಗೆ ಆತ್ಮನೊಡನೆ ಐಕ್ಯವು ಸಿದ್ಧವಾಗುವುದು. ಹಾಗೆಂದು ಬೇರೊಂದು ಶ್ರುತಿಯಲ್ಲಿ 'ತ್ವಂ ವಾಽಹಮಸ್ಮಿ ಭಗವೋ ದೇವತೇಽಹಂ ವೈ ತ್ವಮಸೀ' ಎಂದು ಹೇಳಿದೆ. ಹೀಗೆ ಪ್ರತ್ಯಕ್ಷ ಐಕ್ಯದಲ್ಲಿ ಪರ್ಯವಸಾನವಾಗುವುದನ್ನು ತಿಳಿಸುವ ಈ ಭಾವನೋಪನಿಷತ್ತು, ಬಾಹ್ಯ ಶ್ರೀಚಕ್ರದ ಆರಾಧನೆಯನ್ನೇ ಆಧಾರವಾಗಿರಿಸಿ ಮಾನ್ಯಮಾಡಿರುವವರ ಪಂಡಿತತ್ವದ ಕುರಿತು ಏನೂ ಹೇಳುವುದಿಲ್ಲ. ಮತ್ತು ಚಿಂತಿತ ಕಾರ್ಯಸಿದ್ಧಿಯ ಲಕ್ಷ್ಯದ ಸಗುಣೋಪಾಸನೆಯನ್ನೇ ಇಲ್ಲಿ ಹೇಳಿದೆ ಎನ್ನುವುದೂ ಶಂಕಾಸ್ಪದವಾಗಿದೆ. ನಿರ್ಗುಣೋಪಾಸಕರಿಗಂತೂ ಮೋಕ್ಷವೆಂಬ ಕಾರ್ಯಸಿದ್ಧಿಯಾಗುವುದು. ಅಂತೆಯೇ ಎಲ್ಲ ಹೇಳದಿರುವುದನ್ನೂ ತಿಳಿದುಕೊಳ್ಳುವುದು.

ಇತಿ ಸುಂದರೇಶ್ವರತಾತಪಾದಶಿಷ್ಯ ಅಪ್ಪಯ್ಯದೀಕ್ಷಿತವಿರಚಿತೋಪನಿಷದ್ಭಾಷ್ಯೇ ಭಾವನೋಪನಿಷದ್ಭಾಷ್ಯಂ ಸಮಾಪ್ತಮ್ ।

॥ ॐ तत् सत् ॥ ॐ ತತ್ ಸತ್॥

त्रिपुरोपनिषत्

(भास्करराय भाष्य समेता)

ತ್ರಿಪುರೋಪನಿಷತ್

(ಭಾಸ್ಕರರಾಯ ಭಾಷ್ಯ ಸಹಿತ)

। ಶ್ರೀರಸ್ತು ।

। ತ್ರಿಪುರೋಪನಿಷದ್ಭಾಷ್ಯಮ್ ।

ಶಾಂತಿಮಂತ್ರ

ओं वाङ्मे मनसि प्रतिष्ठिता । मनो मे वाचि प्रतिष्ठितम् । आवीरावीर्म एधि ॥
वेदस्य म आणीस्थः श्रुतं मे मा प्रहासीः ॥
अनेनाधीतेनाहोरात्रान् सन्दधामि । ऋतं वदिष्यामि । सत्यं वदिष्यामि ॥
तन्मामवतु । तद्वक्तारमवतु । अवतु मां अवतु वक्तारम् ॥
ओं शान्तिः शान्तिः शान्तिः ॥

ಓಂ ವಾಙ್ಮೇ ಮನಸಿ ಪ್ರತಿಷ್ಠಿತಾ । ಮನೋ ಮೇ ವಾಚಿ ಪ್ರತಿಷ್ಠಿತಮ್ ॥
ಆವಿರಾವೀರ್ಮ ಏಧಿ ॥ ವೇದಸ್ಯ ಮ ಆಣೀಸ್ಥಃ ಶ್ರುತಂ ಮೇ ಮಾ ಪ್ರಹಾಸೀಃ ॥
ಅನೇನಾಧೀತೇನಾಹೋರಾತ್ರಾನ್ ಸಂದಧಾಮಿ । ಋತಂ ವದಿಷ್ಯಾಮಿ । ಸತ್ಯಂ ವದಿಷ್ಯಾಮಿ ॥
ತನ್ಮಾಮವತು । ತದ್ವಕ್ತಾರಮವತು । ಅವತುಮಾಂ ಅವತುವಕ್ತಾರಮ್ ॥
ಓಂ ಶಾಂತಿಃ ಶಾಂತಿಃ ಶಾಂತಿಃ ॥

ತತ್ತ್ವವಿದ್ಯೆಯನ್ನು ಪ್ರತಿಪಾದಿಸುವವರಿಗೆ ***ವಾಕ್*** ಅಂದರೆ ಮಾತು ಮನಸಿನಲ್ಲಿ ಇರುತ್ತದೆ; ಮನಸಿನ ಭಾವನೆಗಳು ಮಾತಿನರೂಪದಲ್ಲಿ ಹೊರಬರುತ್ತವೆ. ಆತ್ಮವಿದ್ಯೆಯ ಪ್ರತಿಪಾದಕರು ಹೇಳುವಂತೆ ಮನಸು ಮಾತಿನಲ್ಲಿದೆ; ನಮ್ಮ ಮಾತಿನ ಭಾವನೆಗಳು ನಮ್ಮ ಮನಸನ್ನು ಪ್ರತಿಬಿಂಬಿಸುತ್ತವೆ. ಹೀಗೆ ಮಾತು ಮತ್ತು ಮನಸು ಅವಿನಾವಭಾವ ಸಂಬಂಧವನ್ನು ಹೊಂದಿವೆ.

ಆವಿ ಶಬ್ದವು ಸ್ವಪ್ರಕಾಶಿತ ಬ್ರಹ್ಮಚೈತನ್ಯವನ್ನು ನಿರ್ದೇಶಿಸುತ್ತದೆ; ***ಏಧಿ*** ವಿಶಾಲತೆಯನ್ನು ಹೊಂದು; ಅವಿದ್ಯಾವರಣವನ್ನು ತೊಡೆದುಹಾಕಿ ಪ್ರಕಟವಾಗುವುದು ಎಂಬ ಭಾವ.

ಆಣೀ ಮಿತಿ; ***ಪ್ರಹಾಸೀಃ*** ವಿಸ್ಮರವಾಗು, ಮರೆತುಹೋಗು. ಓ ಮನಸೇ ವೇದಗಳಲ್ಲಿ ಪ್ರತಿಪಾದಿಸಿರುವ, ಕೇಳಿರುವ ಮಿತಿಯಿಲ್ಲದ ವಿಷಯಗಳು ನನ್ನಿಂದ ಮರೆಯಾಗದಿರಲಿ.

ಅನೇನಾಧೀತೇ ಈ ಉಪನಿಷತ್ತಿನ ವಿಷಯಗಳು ವಿಸ್ಮರಣೆಯಾಗದಂತೆ ಅಹೋರಾತ್ರಿ, ನಿರಂತರವಾಗಿ ಪಠಿಸುತ್ತೇನೆ. ***ಋತಂ*** ಮತ್ತು ***ಸತ್ಯ*** ಎರಡೂ ಶಬ್ದಗಳು ಒಂದೇ ಅರ್ಥವನ್ನು ತಿಳಿಸಿದರೂ, ಋತವು ಮಾನಸಿಕ ಮತ್ತು ಸತ್ಯವು ವಾಚಿಕವಾಗಿವೆ. ಉಪನಿಷತ್ತು ತಿಳಿಸುವ ಪಾರಮಾರ್ಥಿಕ ವಿಷಯವನ್ನೇ ಹೇಳುತ್ತೇನೆ.

ಈ ಬ್ರಹ್ಮತತ್ತ್ವವು ಶಿಷ್ಯರನ್ನು ಪೂರ್ಣವಾಗಿ ಕೇಳಲೆಂದು ಪಾಲಿಸಲಿ, ರಕ್ಷಿಸಲಿ; ಆಚಾರ್ಯರನ್ನು ಹೇಳುವ ಸಾಮರ್ಥ್ಯವನ್ನು ಹೆಚ್ಚಿಸಲು ರಕ್ಷಿಸಲಿ; ಈ ವಿದ್ಯಾಸಂಪ್ರದಾಯವನ್ನು ಪ್ರಚಾರಮಾಡುವವರನ್ನು, ವೃತ್ತಿವಿಷಯಕವಾದ ಅವಿದ್ಯೆಯನ್ನು ದೂರಮಾಡುವವರನ್ನು ರಕ್ಷಿಸಲಿ.

ಶಾಂತಿಃ ಶಾಂತಿಃ ಶಾಂತಿಃ (ಅಧಿಭೌತಿಕ, ಅಧಿದೈವಿಕ, ಅಧ್ಯಾತ್ಮಿಕ) ವಿಘ್ನಗಳು ಶಾಂತವಾಗಲಿ, ನಿವಾರಣೆಯಾಗಲಿ.

> ಸಹಸ್ರದಲಪದ್ಮೇ ಸ್ವೇ ನಾಥಾಂಘ್ರ್ಯಬ್ಜದ್ವಯೇ ಸತಿ ।
> ಕಮಲೇ ಕಮಲೋತ್ಪತ್ತಿರ್ನದೃಷ್ಟೇತ್ಯುಕ್ತಯಃ ಕಥಮ್ ॥
> ಶ್ರೀಸಾಂಖ್ಯಾಯನಕಲ್ಪಸೂತ್ರವಿಧಿಭಿಃಕರ್ಮಣಿ ಯೇ ಕುರ್ವತೇ–
> ಯೇಷಾಂ ಶಾಕಲ ಏವ ಮಂತ್ರನಿಚಯಃ ಕೌಷೀತಕಂ ಬ್ರಾಹ್ಮಣಮ್ ।
> ತೈರಾರಣ್ಯಕಮಧ್ಯಮಂತ್ರವಿತತಿರ್ಯಾ ಪಠ್ಯತೇ ಬಹ್ವೃಚೈಃ
> ಋಗ್ಭಿಷ್ಷೋಡಶಭಿರ್ಮಹೋಪನಿಷದಂ ವ್ಯಾಚಕ್ಷ್ಮಹೇ ತಾಂ ವಯಮ್ ॥

ಈ ಉಪನಿಷತ್ತು ಋಗ್ವೇದದ ಭಾಗವಾಗಿ ಷೋಡಶ ಋಕ್‌ಗಳಿಂದಕೂಡಿದೆ. ತ್ರೈವರ್ಣಿಕರು (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ) ಅನುಸರಿಸುವ ಆರಾಧನಾವಿಧಿಗಳು ಪೂರ್ವಕಾಂಡ ಮತ್ತು ಉತ್ತರಕಾಂಡ ಎಂಬ ಭೇದದಿಂದ ಎರಡುವಿಧವಾಗಿವೆ ಎಂದು ತಿಳಿಯಬೇಕು. ಎರಡರಲ್ಲಿಯೂ ಕಾಣಸಿಗುವ ಪರಂಪರಾಗತ ಮತ್ತು ವಿಶೇಷ ಕ್ರಿಯೆಗಳು ಒಳಗೊಂಡಿವೆ. ಕ್ರಿಯೆಗಳಲ್ಲಿ ಕೆಲವು ದೇವತೆಗಳೊಂದಿಗೆಯೂ, ಕೆಲವು ದೇವತಾರಹಿತವಾಗಿಯೂ ನಡೆಸಲ್ಪಡುವುವು; ಅಗ್ನಿಹೋತ್ರ ಸ್ನಾನ ಇತ್ಯಾದಿಗಳು, ರಾಮ ಕೃಷ್ಣರನ್ನು ಉಪಾಸಿಸಿದಂತೆ ಯಾ ಅಗ್ನಿ ಉಪಾಸನೆ ಮಾಡಿದಂತೆ. ದೇಹಾತೀತವಾದ ಆತ್ಮದ ಪರಲೋಕದ ಯಾತಾಯಾತದ ಕ್ಷಮತೆಯಲ್ಲಿ ವಿಶ್ವಾಸವಿರುವ ಕರ್ಮಾಧಿಕಾರಿಗಳು ಆಮುಷ್ಮಿಕ (ಪರಲೋಕ) ಫಲವನ್ನು ನೀಡುವ ಕ್ರಿಯೆಗಳನ್ನು ಮಾಡುವಾಗ ಅದೃಷ್ಯಫಲಗಳು ದೊರೆಯುವುದರಲ್ಲಿ ವಿಶ್ವಾಸವಿಟ್ಟು ಆಯಾ ದೇವತೆಗಳನ್ನು ಉಪಾಸಿಸುತ್ತಾರೆ. ಈ ರೀತಿಯ ಕ್ರಿಯೆಗಳಲ್ಲಿ ದೇವತೆಗಳನ್ನು ವಿಗ್ರಹರೂಪದಲ್ಲಿ ಉಪಾಸಿಸುವುದನ್ನು ಬಾದರಾಯಣ (ವ್ಯಾಸ) ಮುಂತಾದವರು ಸಮರ್ಥಿಸುತ್ತಾರೆ. ಈ ದೇವತಾಭಿಮುಖವಾದ ಆಸ್ತಿಕತೆಯು ಜನ್ಮಾಂತರ ಕರ್ಮಗಳ ಫಲವೆಂದೂ, ಪೂರ್ವಕಾಂಡದ ಕರ್ಮ ಪರಂಪರೆಗಳ ಅಧಿಕಾರಿಗಳ ಉಪಾಸನೆಯೆಂದೂ ದೇವತೆಗಳ ವಿಗ್ರಹಾರಾಧನೆಯನ್ನು ಜೈಮಿನಿ ಮುಂತಾದವರು ಕರ್ಮವೇ ಪ್ರಧಾನವೆಂಬ ಅರ್ಥದಲ್ಲಿ ಸಮರ್ಥಿಸುತ್ತಾರೆ.

ಅಂತಹಾ ಕರ್ಮಠರು ಕರ್ಮಪರಿಪಕ್ವತೆಯಿಂದ ಶಿವಶಕ್ತಿಯರ ಪೂಜೆಯನ್ನು ಕೈಗೊಳ್ಳಲು ಪ್ರವೃತ್ತರಾದರೆ, ಮೀಮಾಂಸಕಮತವನ್ನು (ಪೂರ್ವಕಾಂಡ) ಪರಿತ್ಯಜಿಸುತ್ತಾರೆ ಎಂದು ಮೃಗೇಂದ್ರಸಂಹಿತೆಯಲ್ಲಿ ವರ್ಣಿಸಲಾಗಿದೆ. ಈ ರೀತಿಯ ದೇವತೋಪಾಸನೆಯು ಮೂರ್ತರೂಪದ ಆರಾಧನೆ ಮುಂತಾದ ವಿರೋಧಾಭಾಸವುಳ್ಳ ಕರ್ಮಪ್ರಾಧಾನ್ಯತೆಯುಳ್ಳ ವಾದವನ್ನು ತ್ಯಜಿಸುತ್ತದೆ. ಆದರೆ ಅಂತಹಾ ಕರ್ಮಠರು ಚಿತ್ತದ ಪಕ್ವತೆಯ ವಿಶೇಷತೆಯಿಂದ ಅಂತರ್ಯದಲ್ಲಿ ತಮ್ಮ ಉಪಾಸನೆಯನ್ನು ಸಮರ್ಥಿಸುವುದರಲ್ಲಿ ವಿಶ್ವಾಸವುಳ್ಳವರಾದರೂ, ಕರ್ಮಗಳನ್ನು ತ್ಯಜಿಸುವಲ್ಲಿ ಸಂದೇಹವುಳ್ಳವರಾದರೆ ಉಭಯಭ್ರಷ್ಟತೆಯ ಆಪತ್ತು ಅವರನ್ನು ಕಾಡುತ್ತದೆ. ಈ

ಅಭಿಪ್ರಾಯದಿಂದ 'ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ' ಎಂಬ ವಚನವು ವಿಧಿಗಳನ್ನು ಮತ್ತು 'ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಮ್' ಎಂಬ ವಚನವು ನಿಷೇಧವನ್ನು ತಿಳಿಸುತ್ತದೆ. ಲೋಕಸಂಗ್ರಹದಲ್ಲಿ ತೊಡಗಿರುವವರು ತಮ್ಮ ಕರ್ಮಗಳನ್ನು ಪೂರ್ಣವಿಶ್ವಾಸದಿಂದ ಮಾಡಬೇಕೆಂದು ವಿಧಿಸಿ ಅಜ್ಞಾನದಿಂದ ಮಾಡುವ ಕರ್ಮ ಮುಂತಾದವುಗಳನ್ನು ನಿಷೇಧಿಸಲಾಗಿದೆ.

ಉತ್ತರಕಾಂಡವನ್ನು ಅನುಸರಿಸುವವರು ಪೂರ್ವಭೂಮಿಕೆಯನ್ನು ಸಮರ್ಥಿಸುವಾಗ ತಮ್ಮ ಅನುಷ್ಠಾನವನ್ನು ಪ್ರಕಾಶಿಸದೆ ಆವಶ್ಯಕ ಕಾರ್ಯಗಳನ್ನು ಮಾಡುತ್ತಾರೆ. ಅವರು ವಿಧಿನಿಷೇಧಗಳಿದ್ದರೂ ನಿರ್ಲಿಪ್ತತೆಯ ಹಾದಿಯಲ್ಲಿ ಚಲಿಸಿ ಜೀವನ್ಮುಕ್ತತೆಯ ಆವಶ್ಯಕತೆಗಳನ್ನು ಸಿದ್ಧಿಸಿಕೊಳ್ಳುತ್ತಾರೆ. ಅವರು ಬಹುಜನ್ಮಗಳ ಪೂರ್ವಕಾಂಡೋಕ್ತ ಕರ್ಮಾನುಷ್ಠಾನದ ಬಲದಿಂದ ಚಿತ್ತದ ಪಕ್ವತೆಯನ್ನು ಹೊಂದಿ ದೃಢವಾಗಿ ಎಲ್ಲವನ್ನೂ ಪರೀಕ್ಷಾರ್ಥದೃಷ್ಟಿಯಿಂದ ಪರಿಶೀಲಿಸಿ ಸ್ವಲ್ಪ ಸ್ವಲ್ಪವಾಗಿ ಮುಂದುವರೆಯುತ್ತಾರೆ; ಇಲ್ಲದಿದ್ದರೆ ಸಂಪ್ರದಾಯವನ್ನು ಮುರಿಯುವ ತೊಂದರೆಗೆ ಸಿಲುಕಬಹುದು.

ತ್ರಿಪುರಸುಂದರಿಯ ಉಪಾಸನೆಯ ಈ ಭೂಮಿಕೆಯ ಭೇದವನ್ನು ನಾನು ಸವಿಸ್ತಾರವಾಗಿ ವಾಮಕೇಶ್ವರತಂತ್ರದ ವ್ಯಾಖ್ಯಾನವಾದ ಸೇತುಬಂಧದ ವಿವರಣೆಯಲ್ಲಿ (ನಿತ್ಯಷೋಡಶಿಕಾರ್ಣವ–ಯೋಗಿನೀಹೃದಯದ ವ್ಯಾಖ್ಯಾನ) ತಿಳಿಸಿದ್ದೇನೆ. ಉಪಾಸನೆಯ ಶಾಸ್ತ್ರವು ದೇವತಾಪ್ರಧಾನವಾಗಿರುವುದೇ ವಿನಃ ಕರ್ಮಪ್ರಧಾನವಾಗಿಲ್ಲ. ಕ್ರಿಯಾಪ್ರಧಾನತೆಯಿಂದ ದೇವತಾರೂಪವು ಒಂದು ಸಿದ್ಧವಸ್ತುವಿನಂತೆ ಬೋಧವಾಗುವುದೆಂದು ವೇದಾಂತವು ಹೇಳುತ್ತದೆ. ದೇವತೆಯ ರೂಪವು ಮೂರು ವಿಧವಾಗಿದೆ – ಸ್ಥೂಲ, ಸೂಕ್ಷ್ಮ ಮತ್ತು ಪರಾ. ಧ್ಯಾನಶ್ಲೋಕವು ಸ್ಥೂಲರೂಪವನ್ನು ಹೇಳಿದರೆ, ಸೂಕ್ಷ್ಮರೂಪವು ಮೂಲಮಂತ್ರಾತ್ಮಕವಾಗಿದೆ; ಮೂರನೆಯದಾದ ಪರಾರೂಪವು ವಾಸನಾತ್ಮಕವಾಗಿದೆ (ಭಾವನಾತ್ಮಕ). ದೇವತಾರೂಪದಂತೆ ಉಪಾಸನೆಯೂ ಮೂರುವಿಧವಾಗಿದೆ – ಬಹಿರ್ಯಾಗ, ಜಪ ಮತ್ತು ಅಂತರ್ಯಾಗ ಎಂಬ ಭೇದದಿಂದ. ಅಂತೆಯೇ ಎಲ್ಲಾ ಪರಿಕರಗಳನ್ನೊಳಗೊಂಡ ಋಗ್ವೇದಪುರುಷನ ಈ ಮಹಾಉಪನಿಷತ್ತಿನ ರೂಪದ ಉಪದೇಶವು ಮೂರು ಪುರಗಳ ಉಪನಿಷತ್ತೆಂದು ಪ್ರಸಿದ್ಧವಾಗಿದೆ. ಈ ಉಪನಿಷತ್ತು ಪರದೇವತೆಯ ಮೂರನೆಯ ರೀತಿಯ ಉಪಾಸನೆಯ ವಿನಿಯೋಗಕ್ಕಾಗಿದೆ.

तिस्रः पुरस्त्रिपथा विश्वचर्षणी यत्राकथा अक्षरा सन्निविष्टा ।
अधिष्ठायैनामजरापुराणी महत्तरा महिमा देवतानाम् ॥
ತಿಸ್ರಃ ಪುರಸ್ತ್ರಿಪಥಾ ವಿಶ್ವಚರ್ಷಣೀ ಯತ್ರಾಕಥಾ ಅಕ್ಷರಾ ಸನ್ನಿವಿಷ್ಟಾ ।
ಅಧಿಷ್ಠಾಯೈನಾಮಜರಾಪುರಾಣೀ ಮಹತ್ತರಾ ಮಹಿಮಾ ದೇವತಾನಾಮ್ ॥ 1 ॥

ಪ್ರಧಾನದೇವತೆಯನ್ನು ನಿರ್ದೇಶಿಸುವ ಮೊದಲ ಋಕ್ **ತಿಸ್ರಃ ಪುರಃ ಇತ್ಯಾದಿ.** ಮುಕ್ತಿಯು ಐದು ವಿಧವಾಗಿದೆಯೆಂದು ಬಲ್ಲವರು ಹೇಳುತ್ತಾರೆ – ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ, ಕೈವಲ್ಯ. 'ಯ ಏವಂ ವಿದ್ವಾನುದಗಯನೇ ಪ್ರಮೀಯತೇ ದೇವಾನಾಮೇವ ಮಹಿಮಾನಂ ಗತ್ವಾಽಽದಿತ್ಯಸ್ಯ ಸಾಯುಜ್ಯಂ ಗಚ್ಛತ್ಯಥ ಯೋ ದಕ್ಷಿಣೇ ಪ್ರಮೀಯತೇ ಪಿತೃಣಾಮೇವ ಮಹಿಮಾನಂ ಗತ್ವಾ ಚಂದ್ರಮಸಃ ಸಾಯುಜ್ಯಂ ಸಲೋಕತಾಮಾಪ್ನೋತ್ಯೇತೌ ವೈ ಸೂರ್ಯಾಚಂದ್ರಮಸೋರ್ಮಹಿಮಾನೌ ಬ್ರಾಹ್ಮಣೋ ವಿಹಾನಭಿಜಯತಿ ತಸ್ಮಾದ್ಬ್ರಹ್ಮಣೋ ಮಹಿಮಾನಮಾಪ್ನೋತಿ ತಸ್ಮಾದ್ಬ್ರಹ್ಮಣೋ ಮಹಿಮಾನಮ್ ।' ಎಂದು ತೈತ್ತರೀಯವು ಹೇಳುತ್ತದೆ. ಅಂದರೆ ಊರ್ಧ್ವರೇತಸರಾಗಿ ಸ್ವ–ಆಶ್ರಮಧರ್ಮವನ್ನು ಅನುಷ್ಠಾನಮಾಡುವವರು

ಚಂದ್ರಲೋಕರೂಪದ ಸಾಲೋಕ್ಯವನ್ನೂ, ಪ್ರತೀಕೋಪಾಸನೆಯನ್ನು ಸ್ವ–ಸ್ವಾಮಿಭಾವನೆಯಿಂದ ಉಪಾಸನೆಯನ್ನು ಮಾಡುವವರು ಸಾಮೀಪ್ಯ ಮುಂತಾದ ಮೂರು ರೂಪದಲ್ಲಿ ಆದಿತ್ಯಲೋಕವನ್ನು ಪ್ರಾಪ್ತಿಸಿಕೊಳ್ಳುತ್ತಾರೆ. ನಿರ್ಗುಣೋಪಾಸಕರಾದ ಬ್ರಹ್ಮಜ್ಞಾನವುಳ್ಳವರು ಕೈವಲ್ಯರೂಪದ ಬ್ರಹ್ಮಪದವನ್ನು ಗಳಿಸುತ್ತಾರೆ. ಈ ಮೂರು ಮಾರ್ಗಗಳನ್ನು ವಿಷ್ಣುಪುರಾಣದ ಮೂರನೆಯ ಅಂಶದಲ್ಲಿ ಹೀಗೆ ವಿವರಿಸಿದ್ದಾರೆ:

> ಉತ್ತರಂ ಯದಗಸ್ತ್ಯಸ್ಯ ಅಜವೀಥ್ಯಾಶ್ಚ ದಕ್ಷಿಣಮ್ ।
> ಪಿತೃಯಾಣಃ ಸ ವೈ ಪಂಥಾ ವೈಶ್ವಾನರಪಥಾದ್ಬಹಿಃ ॥

ಮುಂತಾಗಿ ಹೇಳಿ

> ವಿವೇಕಜ್ಞಾನದೃಷ್ಟಂಚ ತದ್ವಿಷ್ಣೋಃ ಪರಮಂ ಪದಮ್ ।

ಎಂದು ಕೊನೆಯಾಗುವವರೆಗೆ. ಈ ಮೂರು ವಿಧದಮಾರ್ಗಗಳಲ್ಲಿ ಚಲಿಸುವುದನ್ನು ಮೂರು ಪುರಗಳ ದಾರಿ ಎಂದು ಕರೆದು ಅವುಗಳು ಸೇರುವ ಪುರಗಳ ಪರದೇವತೆಯನ್ನು ತ್ರಿಪುರಾ ಎಂದು ಹೇಳುವರು. 'ಆತ್ಮಬುಧ್ಯಾ ಪ್ರತೀಕೇನ ಮಾತೃಬುಧ್ಯಾಪ್ಯಹಂಧಿಯಾ ಕರ್ಮಣಾಪಿ ಭಜನ್ಮರ್ತ್ಯಃ ಕೈವಲ್ಯಂ ಪದಮಶ್ನುತೇ' ಎಂಬ ಶಕ್ತಿರಹಸ್ಯ ವಚನದಂತೆ ಪಂಚವಿಧದ ಆತ್ಮಕಾರ್ಯಗಳಿಂದ ತ್ರೈಪುರ ಪ್ರಾಪ್ತಿಯಗುವುದು. ಹಾಗೆ ***ತಿಸ್ರಃ ಪುರಃ*** ತ್ರಿಪುರಾ. ***ತ್ರಿಪಥಾ*** ಮೂರು ಪಂಥಗಳು, ಮಾರ್ಗಗಳು.

ಚರ್ಷಣೀ ಶಬ್ದವು ವೈದಿಕನಿಘಂಟುವಿನ ಪ್ರಕಾರ ಪ್ರಜಾವಾಚಕವಾಗಿದೆ. 'ವಿಶ್ವಾ ಸಮಸ್ತಾಶ್ಚರ್ಷಣಯೋ ಯಸ್ಯಾ ಸಾ ವಿಶ್ವಚರ್ಷಣೀ' ಎಂಬುದರಿಂದ ದೇವೀಯು ಸಮಸ್ತಪ್ರಾಣಿಗಳ ಉತ್ಪಾದನೆಯನ್ನು ಮಾಡುವವಳು. ವಿಶ್ವದೃಷ್ಟಿಯುಳ್ಳವಳು ಎಂದೂ ಹೇಳಬಹುದು. 'ತದೈಕ್ಷತ ಬಹು ಸ್ಯಾಂ ಪ್ರಜಾಯೇಯೇತಿ' ಎಂದು ಶ್ರುತಿಸಿದ್ಧವಾಗಿ ಬ್ರಹ್ಮದ ಪ್ರಾಥಮಿಕ ಈಕ್ಷಣೆಯೇ ಎಲ್ಲದರ ಜನಕವಾಗಿದೆ, ಅದನ್ನೇ ಇಚ್ಛಾಶಕ್ತಿ ಎನ್ನುವರು. 'ಸೋಽಕಾಮಯತ, ತಪೋಽಕುರುತ' ಎಂದು ಇನ್ನೊಂದು ಶ್ರುತಿಯಿದೆ. 'ಸ್ವಾಭಾವಿಕೋ ಜ್ಞಾನಬಲಕ್ರಿಯಾ ಚ' ಎಂಬ ಶ್ರುತಿಯಂತೆ ಬ್ರಹ್ಮತತ್ತ್ವವು ಜ್ಞಾನ, ಇಚ್ಛಾ ಮತ್ತು ಕೃತಿರೂಪದ ವೃತ್ತಿಗಳನ್ನು ಹೊಂದಿರುವುದು. ಅದರ ಇಚ್ಛಾ, ಜ್ಞಾನ, ಕ್ರಿಯಾರೂಪಗಳ ಸಮಷ್ಟಿಯನ್ನು ಶಾಂತ ಎಂದು ಹೇಳುತ್ತಾರೆ. ಪಶ್ಯಂತೀ ಮಧ್ಯಮಾ ವೈಖರೀ ಮೂರರ ಸಮಷ್ಟಿ ಸೂಕ್ಷ್ಮರೂಪವನ್ನು ಪರಾ ಎಂದು ಹೇಳುತ್ತಾರೆ. ವಾಮಾ ಜ್ಯೇಷ್ಠಾ ರೌದ್ರೀರೂಪಗಳ ಸಮಷ್ಟಿಯನ್ನು ಅಂಬಿಕಾ ಎನ್ನುತ್ತಾರೆ. ಅದರಲ್ಲಿ ಶಾಂತಾತ್ಮಿಕ ದೇವತೆಯು ಶ್ರೀಚಕ್ರದಲ್ಲಿನ ಬಿಂದು ಚಕ್ರದಲ್ಲಿರುವಳು ಎಂದು ನಿತ್ಯಾಹೃದಯದ ಪರಂಬ್ರಹ್ಮ ಪ್ರಕ್ರಮ್ಯದಲ್ಲಿ ಹೇಳಿದೆ.

> ಪ್ರಸೃತಂ ವಿಶ್ವಲಹರೀಸ್ಥಾನಂ ಮಾತೃತ್ರಯಾತ್ಮಕಮ್ ।
> ಬೈಂದವಂ ಚಕ್ರಮ್ ॥

ಇತ್ಯಾದಿಯಾಗಿ. ಹಾಗಾಗಿ ಮೂರು ಪುರಗಳು, ಮೂರು ಪಥಗಳು, ವಿಶ್ವಚರ್ಷಿಣೀ ಮೂರು ವಿಶೇಷಣಗಳಾಗಿ ನಿರ್ದಿಷ್ಟವಾಗಿವೆ. ವಿಶೇಷಣಗಳು ಬಹುವಚನ ಏಕವಚನವಾಗಿದ್ದು ವಿಶೇಷ್ಯದ ಮೂರು ಮೂರು ರೂಪಗಳು ಏಕಾತ್ಮಕತ್ವವನ್ನು ಸೂಚಿಸುತ್ತಿವೆ.

त्रिಕೋಣಮಂಡಲಂಚಾಸ್ಯಾ ಭೂಪುರಂ ಚ ತ್ರಿರೇಖಕಂ
ಮಂತ್ರೋಽಪಿ ತ್ರ್ಯಕ್ಷರಃ ಪ್ರೋಕ್ತಃ ತಥಾ ರೂಪತ್ರಯಂ ಪುನಃ ।
ತ್ರಿವಿಧಾ ಕುಂಡಲೀ ಶಕ್ತಿಃ ತ್ರಿದೇವಾನಾಂ ಚ ಸೃಷ್ಟಯೇ
ಸರ್ವಂ ತ್ರಯಂ ತ್ರಯಂ ಯಸ್ಮಾತ್ತಸ್ಮಾತ್ತು ತ್ರಿಪುರಾ ಮತಾ ॥ ಕಾಲಿಕಾಪುರಾಣ ॥

ಇಲ್ಲಿ ಅರ್ಥಸೃಷ್ಟಿಜನಕತ್ವವು ಶಬ್ದಸೃಷ್ಟಿಜನಕತ್ವವನ್ನು ನಿರ್ದೇಶಿಸುತ್ತದೆ. ***ಯತ್ರ*** ಶಾಂತಾ ಅಂಬಿಕಾ ಮತ್ತಿತರ ರೂಪಗಳು ತ್ರಿಪುರದಲ್ಲಿ ***ಅಕಥಾ*** ಅಕಥಾ ತ್ರಿಕೋಣವನ್ನು, ಅಕಾರಾದಿ ಕಕಾರಾದಿ ಥಕಾರಾದಿಯಾದ ಹದಿನಾರು ***ಅಕ್ಷರಾ*** ಅಕ್ಷರಗಳ ಗುಂಪನ್ನು ***ಸಂನಿವಿಷ್ಟಾ*** ಹೊಂದಿರುವ ಬಾಹುಗಳ ತ್ರಿಕೋಣವನ್ನು ಬೀಜದಲ್ಲಿರುವ ವೃಕ್ಷದಂತೆ ಸೂಚಿಸುತ್ತದೆ. ಉಳಿದ ಹ ಳ ಕ್ಷಗಳಲ್ಲಿ ಹಕಾರವು ವಿಮರ್ಶಾಸ್ವರೂಪವಾಗಿದ್ದು ವ್ಯಷ್ಟಿಯಾಗಿ ತ್ರಿಕೋಣದೊಳಗಿದೆ; 'ಹಕಾರಾರ್ಣಃ ಕಲಾರೂಪೋ ವಿಮರ್ಶಾಖ್ಯಃ ಪ್ರಕೀರ್ತಿತಃ ।' ಎಂಬಂತೆ ಪ್ರಸಿದ್ಧವಾಗಿದೆ. ಳಕಾರವು ಲಕಾರವನ್ನು ಸೇರಿಕೊಳ್ಳುತ್ತದೆ ಮತ್ತು ಕ್ಷಕಾರವು ಕ ಷಗಳ ಸಂಯುಕ್ತರೂಪವಾಗಿದ್ದು ಸ್ವತಂತ್ರವಲ್ಲ. ಹಾಗಾಗಿ ನಲುವತ್ತೆಂಟು ಅಕ್ಷರಗಳ ಮಾತೃಕೆಗಳು ಮಾತ್ರ ಇಲ್ಲಿ ಸೂಚಿತವಾಗಿವೆ. ಸೂತಸಂಹಿತೆಯಲ್ಲಿ ಹೇಳಿದೆ:

ಏಕಧಾ ಚ ದ್ವಿಧಾ ಚೈವ ತಥಾ ಷೋಡಶಧಾ ಸ್ಥಿತಾ ।
ದ್ವಾತ್ರಿಂಶದ್ಭೇದಸಂಭಿನ್ನಾ ಯಾ ತಾಂ ವಂದೇ ಪರಾಂ ಕಲಾಮ್ ॥

ಸ್ವರ ವ್ಯಂಜನಗಳೆಂಬ ಭಿನ್ನತೆಯಿಂದ, ಹದಿನಾರು ಸ್ವರಗಳು ಮತ್ತು ಮೂವತ್ತೆರಡು ವ್ಯಂಜನಗಳು ಸೂಚಿಸುವ ಪರಾ ಕಲೆಯನ್ನು ವಂದಿಸುತ್ತೇನೆ. ***ಅಧಿಷ್ಠಾಯೈ*** ಈ ಪರಾ ಕಲೆಯು ಬಿಂದುರೂಪದಿಂದ ತ್ರಿಪುರರೂಪದ ಅಕ್ಷರಗಳ, ಮಾತೃಕೆಗಳ ಅಧಿಷ್ಠಾತ್ರಿಯಾಗಿದ್ದಾಳೆ. ಅವಳು ***ಅಜರಾ*** ಅಜರೆಯಾಗಿದ್ದು (ಕ್ಷಯ, ಲಯ ಇಲ್ಲದವಳು); ***ಪುರಾಣೀ*** ಅತೀ ಪುರಾತನಳು; ***ಮಹತ್ತರಾ*** ಮಹತ್ತತ್ತ್ವವನ್ನು ಸೂಚಿಸುವವಳೂ, ಸರ್ವೋತ್ಕೃಷ್ಟಳೂ ***ಮಹಿಮಾ*** ಮಹಿಮಾನ್ವಿತಳೂ ಆಗಿದ್ದಾಳೆ. ಪುರಾಣ, ತಂತ್ರಗಳನ್ನು ಅನುಸರಿಸುವವರಿಗೆ ಮತ್ತು ಶಿವ, ವಿಷ್ಣು ಮುಂತಾದವರ ಉಪಾಸಕರಿಗೆ ಶ್ರೀವಿದ್ಯೆಯ ಶ್ರೇಷ್ಠತೆಯನ್ನು ತ್ರಿಪುರೋಪನಿಷತ್ತು ಬಹುಶಃ ಪ್ರದರ್ಶಿಸುತ್ತಿದೆ. 'ಶಂಭುಃ ಪೂಜಯತೇ ದೇವೀಂ ಮಂತ್ರಶಕ್ತಿಮಯೀಂ ಶುಭಾಮ್ ।' ಎಂಬ ವಚನದಂತೆ ಪರಬ್ರಹ್ಮವೇ ಸಕಲರಿಂದ ಪ್ರತಿಮಾಭೇದದಿಂದ ಪೂಜಿತವಾಗಿದೆ ಎಂದು ಪದ್ಮಪುರಾಣದಲ್ಲಿ ವಿಸ್ತಾರವಾಗಿ ಹೇಳಿದೆ. ಹಾಗೆಯೇ 'ನ ಹಿ ಭಿಕ್ಷುಕೋ ಭಿಕ್ಷುಕಾಂತರಂ ಯಾಚಿತುಮರ್ಹತಿ ಸತ್ಯನ್ಯಸ್ಮಿನ್ನಭಿಕ್ಷುಕೇ' ಎಂಬ ನ್ಯಾಯದಂತೆ ವಿವಿಧ ದೇವತೆಗಳ ಉಪಾಸನೆಯ ಅಪೇಕ್ಷೆಯು ಪರದೇವತೆಯ ಉಪಾಸನೆಯೇ ಆಗುವುದು ಎಂಬುದು ಧ್ವನ್ಯರ್ಥವು.

ತ್ವದ್ದತ್ತೈಶ್ವರ್ಯಭಾಜಃ ಪರಮಶಿವ ಕಥಂಕಾರಮನ್ಯಾನ್ ಸುರೇಂದ್ರಾನ್ ।
ಯಾಚೇ ದೇಹೀತಿ ಶಕ್ರದ್ರುಹಿಣಹರಿಮುಖಾನ್ ಭಿಕ್ಷುಕಾನ್ ಭಿಕ್ಷುಕೋಽಹಮ್ ॥
ಅಜ್ಞೋಽಪಿ ದ್ವಾದಶಾಹಕ್ರತುವಿಕೃತಿಶತಸ್ವಾಂಗಭೂತೋಽಪಿ ಚೋಕ್ಥ್ಯೇ ।
ಜ್ಯೋತಿಷ್ಟೋಮೋಕ್ಥ್ಯಧರ್ಮಾನಭಿಲಷತಿ ನ ತು ದ್ವಾದಶಾಹೋಕ್ಥ್ಯಧರ್ಮಾನ್ ॥

ಎಂದು ನಾನು ಪರಶಿವಸ್ತವದಲ್ಲಿ ಹೇಳಿರುವೆನು. ಬಿಂದುಚಕ್ರದ ಅಧಿಷ್ಠಾತ್ರಿಯ ಅಜರಾ ಇತ್ಯಾದಿ ವಿಶೇಷಣಗಳು ಅವಳ ಪರಬ್ರಹ್ಮಸ್ವರೂಪವನ್ನು ಹೇಳುತ್ತದೆ. ಅಜರಾ ಇತ್ಯಾದಿ ಪದಗಳು ನಪುಂಸಕಲಿಂಗವನ್ನು ಸೂಚಿಸಿದರೂ, ದೇವತಾ ಪದವು ವಿಶೇಷತೆಯ ಅಭಿಪ್ರಾಯದಿಂದ ಸ್ತ್ರೀತ್ವವನ್ನು ಸೂಚಿಸುತ್ತದೆ.

अष्टाचक्रानवद्वारा देवानाम् पूरयोध्या ।
ಅಷ್ಟಾಚಕ್ರಾನವದ್ವಾರಾ ದೇವಾನಾಂ ಪೂರಯೋಧ್ಯಾ ।
ತಸ್ಯಾಂ ಹಿರಣ್ಯಮಯಃ ಕೋಶಃ ಸ್ವರ್ಗೋ ಲೋಕೋ ಜ್ಯೋತಿಷಾವೃತಃ ॥
ತಸ್ಮಿನ್ ಹಿರಣ್ಯಮಯೇ ಕೋಶೋ ತ್ರ್ಯಸ್ರೇ ತ್ರಿಪ್ರತಿಷ್ಠಿತೇ
ತಸ್ಮಿನ್ ಯದ್ಯಕ್ಷಮಾತ್ಮನ್ವತ್ ತದ್ವೈ ಬ್ರಹ್ಮವಿದೋವಿದುಃ ॥ ಅಥರ್ವಣವೇದ ॥

ಭೂಪುರದಿಂದ ತ್ರಿಕೋಣದವರೆಗಿನ ಅಷ್ಟಚಕ್ರಗಳ ಮೇಲಿರುವ ನವದ್ವಾರಗಳ ಈ ಹಿರಣ್ಯಮಯ ಕೋಶವು ಗರ್ಭೀಕೃತರೂಪದ ಮೂರುಬಿಂದುಗಳಾಗಿವೆ. ಅಲ್ಲಿರುವ ಯಕ್ಷನು ಮಹತ್ತತ್ತ್ವವಾಗಿದೆ. ಯಕ್ಷ ಪದವು ಬಹಿಃ ಪೂಜೆಯ ಯೋಗ್ಯತೆಯನ್ನು ನಿರ್ದೇಶಿಸುತ್ತದೆ. ಅಲ್ಲಿರುವ ಸ್ವಾತ್ಮತತ್ತ್ವವನ್ನು ಅರಿತ ಬಲ್ಲಿದರು ಬ್ರಹ್ಮವಿದರಾಗುತ್ತಾರೆ, ಅಂತಹ ವಿದ್ವಾಂಸರು ಬೇರೆ ಯಾರೂ ಇಲ್ಲ. ಸೇತುಬಂಧದಲ್ಲಿ ಇದನ್ನು ವಿಸ್ತಾರವಾಗಿ ಹೇಳಲಾಗಿದೆ. [1]

नवयोनिर्नवचक्राणि दीधिरे नवैवयोगा नवयोगिनीश्च ।
नवानां चक्रे अधिनाथाः स्योना नवमुद्रानवभद्रा महीनाम् ॥ २ ॥
ನವಯೋನೀರ್ನವಚಕ್ರಾಣಿ ದೀಧಿರೇ ನವೈವಯೋಗಾ ನವಯೋಗಿನೀಶ್ಚ ।
ನವಾನಾಂ ಚಕ್ರೇ ಅಧಿನಾಥಾಃ ಸ್ಯೋನಾ ನವಮುದ್ರಾನವಭದ್ರಾ ಮಹೀನಾಮ್ ॥ 2 ॥

ಬಿಂದುಚಕ್ರವಿರುವ ತ್ರಿಕೋಣ ವಸುಕೋಣ (ಅಷ್ಟಕೋಣ) ಚಕ್ರದ್ವಯಗಳು ಸಮಷ್ಟಿರೂಪದಲ್ಲಿ ನವಯೋನ್ಯಾತ್ಮಕವಾದ ಚಕ್ರವನ್ನು ಉಪದೇಶಿಸುತ್ತದೆ. ಮೂರು ಪುರಗಳ ನವಯೋನ್ಯಾತ್ಮಕ ಚಕ್ರಗಳಲ್ಲಿ ಒಂದಾದ ಬಿಂದುಚಕ್ರವು ತ್ರಯಾತ್ಮಕವಾಗಿರುವುದರಿಂದ ಮೂರು ರೂಪಗಳನ್ನು ಹೊಂದಿದೆ. 'ದೀಧೀಙ್ ದೀಪ್ತಿದೇವನಯೋಃ' ಎಂಬ ಪಾ. ಧಾತುಸೂತ್ರದಂತೆ ಇದು ಛಾಂದಸ ಧಾತುಪ್ರಯೋಗವು. *ದೀಪನಂ* ಪ್ರಕಾಶಿತವಾಗಿರು, ಫಲ ಉತ್ಪಾದಕವಾಗಿರು ಎಂಬುದು ವಿವಕ್ಷಿತ ಅರ್ಥವು. ಶಾಂತಾ ರೂಪದಿಂದ ಇಚ್ಛಾ ಜ್ಞಾನ ಕ್ರಿಯಾಶಕ್ತ್ಯಾತ್ಮಕವಾಗಿಯೂ, ಅಂಬಿಕಾರೂಪದಿಂದ ಬ್ರಹ್ಮ ವಿಷ್ಣು ರುದ್ರರ ಸ್ತ್ರೀರೂಪವಾದ ವಾಮಾ ಜ್ಯೇಷ್ಠಾ ರೌದ್ರೀ ಶಕ್ತ್ಯಾತ್ಮಕವಾಗಿಯೂ, ಪರಾ ರೂಪದಿಂದ ಪಶ್ಯಂತೀ ಮಧ್ಯಮಾ ವೈಖರೀ ವಾಗ್ದೇವತಾತ್ಮಕವಾಗಿಯೂ ತಿಳಿದುಬರುವುದು. ಈ ರೂಪಗಳು ತ್ರಿಪುರಾದಲ್ಲಿರುವ ನವಯೋನಿಚಕ್ರಕ್ಕೆ ಅನ್ವಯವಾಗುವುವು; ನವದೇವತೆಗಳು ನವಯೋನಿಚಕ್ರಾತ್ಮಕವಾಗಿರುವರು ಎಂಬ ಭಾವ. ತ್ರಿಪುರದಲ್ಲಿ ಅಧಿಷ್ಠಿತವಾಗಿರುವ ಆ ಪರದೇವತೆಯೇ ನವಯೋನಿಚಕ್ರದಲ್ಲಿರುವಳು ಎಂದು ಅನ್ವಯವಾಗುವುದು. ಅವಳೇ ನವಯೋನಿಚಕ್ರಾತ್ಮಕಳಾಗಿ ಪರಿಣಮಿಸಿರುವಳು ಎಂಬ ಧ್ವನಿ. ತ್ರೈಲೋಕ್ಯಮೋಹನ, ಸರ್ವಾಶಾಪರಿಪೂರಕ, ಸರ್ವಸಂಕ್ಷೋಭಣ, ಸರ್ವಸೌಭಾಗ್ಯದಾಯಕ, ಸರ್ವಾರ್ಥಸಾಧಕ, ಸರ್ವರಕ್ಷಾಕರ, ಸರ್ವರೋಗಹರ, ಸರ್ವಸಿದ್ಧಿಪ್ರದ, ಸರ್ವಾನಂದಮಯ ಎಂಬ ನವಚಕ್ರಗಳು ಜಾತ–ಜನಿಷ್ಯ ಸಂಸ್ಕಾರದಂತೆ ನವಯೋನಿಗಳಲ್ಲಿ ಸೇರಿಕೊಂಡಿವೆ.

ಎರಡು ಶಕ್ತಿತ್ರಿಕೋಣಗಳು ಮತ್ತು ಒಂದು ವಹ್ನಿತ್ರಿಕೋಣವು ಸೇರಿ ನವಯೋನಿಚಕ್ರದ ನಿಷ್ಪತ್ತಿಯಾಗುವುದು. ಪ್ರತಿಯೊಂದು ತ್ರಿಕೋಣದಲ್ಲಿ ಮೂರು ರೇಖೆಗಳಿರುವುದರಿಂದ ಒಂಬತ್ತು ರೇಖೆಗಳ ಯೋಗವಾಗಿ ಒಂಬತ್ತು ಕೋಣಗಳಾಗುವುವು. ನವಚಕ್ರಗಳಲ್ಲಿ ಪ್ರಕಟ, ಗುಪ್ತ, ಗುಪ್ತತರ, ಸಂಪ್ರದಾಯ, ಕುಲಕೌಲ, ನಿಗರ್ಭ, ರಹಸ್ಯ, ಅತಿರಹಸ್ಯ ಮತ್ತು ಪರಾಪರರಹಸ್ಯ ಎಂಬ ನವಯೋಗಿನಿಯರು ಕೋಣಾತ್ಮಕವಾಗಿ ಸ್ಥಿತರಾಗಿದ್ದಾರೆ. 'ದೇಶಕಾಲಾನವಚ್ಛಿನ್ನಂ ತದೂರ್ಧ್ವಂ ಪರಮಂ ಮಹಃ ।' ಎಂಬ ವಚನದಂತೆ ಅವರ ಮೇಲೆ ದೇಶಕಾಲಗಳಿಂದ

ಬಂಧಿತವಾಗದ ಬಿಂದುಚಕ್ರ ಮೊದಲಾದ ಪ್ರಪಂಚದಲ್ಲಿ ಪರಬ್ರಹ್ಮತತ್ತ್ವದ ಕೆಳಗೆ ಮಹತ್ತತ್ತ್ವವು ಕಂಡುಬರುತ್ತದೆ. ಇದುವೇ ಶ್ರೀಚಕ್ರದ ಮೇರುಪ್ರಸ್ತಾರವಾಗುತ್ತದೆ. ಶ್ರೀಚಕ್ರದ ಭೂಪುರದಿಂದ ಮೊದಲಾಗಿ ಬಿಂದುವಿನಲ್ಲಿ ಅಂತ್ಯವಾಗುವ ಮೇಲೆ ಮೇಲೆ ಇರುವಂತಿರುವ ಒಂಭತ್ತು ಭೂಮಿಕೆಗಳು ಮತ್ತು ಅವುಗಳ ಅಧಿಪತಿಗಳು ತ್ರಿಪುರಾ, ತ್ರಿಪುರೇಶ್ವರೀ, ತ್ರಿಪುರಸುಂದರೀ, ತ್ರಿಪುರವಾಸಿನೀ, ತ್ರಿಪುರಾಶ್ರೀ, ತ್ರಿಪುರಮಾಲಿನೀ, ತ್ರಿಪುರಾಸಿದ್ಧಾ, ತ್ರಿಪುರಾಂಬಾ ಮತ್ತು ಮಹಾತ್ರಿಪುರಸುಂದರೀ ಚಕ್ರೇಶ್ವರಿಯಾಗಿದ್ದಾರೆ. ಅವರು ನವಯೋನಿಗಳಲ್ಲಿ ಸೂಕ್ಷ್ಮರೂಪದಲ್ಲಿರುವರು ಮತ್ತು ನವಚಕ್ರಗಳ ಅಧಿನಾಥರಾಗಿರುವರು. ***ಸ್ಯೋನಾ*** ಚಕ್ರೇಶ್ವರಿಯರ ವಿಶೇಷಣವಾಗಿದ್ದು, ಸುಖಹೇತುವಾಗಿರುವ ಎಂಬ ಅರ್ಥದಲ್ಲಿದೆ. ಸರ್ವಸಂಕ್ಷೋಭಿಣೀ, ಸರ್ವವಿದ್ರಾವಣೀ, ಸರ್ವಾಕರ್ಷಿಣೀ, ಸರ್ವವಶಂಕರೀ, ಸರ್ವೋನ್ಮಾದಿನೀ, ಸರ್ವಮಹಾಂಕುಶಾ, ಸರ್ವಖೇಚರೀ, ಸರ್ವಬೀಜ ಮತ್ತು ಸರ್ವಯೋನಿ ಎಂಬ ಒಂಭತ್ತು ಮುದ್ರಾಶಕ್ತಿಗಳು ನವಚಕ್ರಗಳಲ್ಲಿ ಕ್ರಮವಾಗಿ ಸ್ಥಿತವಾಗಿವೆ. 'ಧರ್ಮಾಧರ್ಮೌ ತಥಾತ್ಮಾನೋ ಮಾತೃಮೇಯೇ ತಥಾ ಪ್ರಮಾ' ಎಂದು ನವಭದ್ರಗಳ ಕುರಿತು ತಂತ್ರಗಳಲ್ಲಿ ವಿವರಿಸಿದ್ದಾರೆ; ಪುಣ್ಯ, ಪಾಪ, ಆತ್ಮಾ, ಅಂತರಾತ್ಮಾ, ಪರಮಾತ್ಮಾ, ಜ್ಞಾನಾತ್ಮಾ, ಪ್ರಮಾತೃ, ಪ್ರಮೇಯ ಮತ್ತು ಪ್ರಮಾ ಎಂಬ ನವಕ. ಆತ್ಮಚತುಷ್ಟಯ ಸ್ವರೂಪ ವಿವರಣೆಯು ಆತ್ಮೋಪನಿಷತ್ತಿನಲ್ಲಿ ಕಂಡುಬರುತ್ತದೆ. ***ಭದ್ರಾ*** ಪದವನ್ನು ಮಂತ್ರಾ ಎಂದೂ ಗ್ರಹಿಸಬಹುದು; 'ಚಕ್ರಂ ನವಾತ್ಮಕಮಿದಂ ನವಧಾ ಭಿನ್ನಮಂತ್ರಕಮ್' ಎಂಬಂತೆ ನವಾತ್ಮಕ ಚಕ್ರಗಳಿಗೆ ಒಂಭತ್ತು ಭಿನ್ನವಾದ ಮಂತ್ರಗಳಿವೆ.

ಬಿಂದು ತ್ರಿಕೋಣ ವಸುಕೋಣಾತ್ಮಕ ಚಕ್ರತ್ರಯಸಮಷ್ಟಿಗೆ ಸಂಹಾರಚಕ್ರ ಎನ್ನುತ್ತಾರೆ; ಎಲ್ಲಾ ಚಕ್ರಗಳು ಸೂಕ್ಷ್ಮರೂಪದಿಂದ ಈ ಚಕ್ರಗಳಲ್ಲಿ ಸಂಕೋಚಿಸಲ್ಪಟ್ಟಿವೆ. ಆಪತ್ಕಾಲದ ಸಂಕ್ಷಿಪ್ತಪೂಜಾಪ್ರಕಾರದಲ್ಲಿ ವಸುಕೋಣದಿಂದ ಬಿಂದುವಿನವರೆಗಿನ ಶ್ರುತಿಮೂಲವಾಗಿರುವ ಮಾತೃಪೂಜಾವಿಧಿಗಳು ತಂತ್ರಗಳಲ್ಲಿ ಉಪಲಬ್ಧವಿದೆ. ವಿಸ್ತಾರತೆಯ ಭಯದಿಂದ ಇಲ್ಲಿ ಹೇಳಲಾಗಿಲ್ಲ. [2]

> एका सा आसीत् प्रथमासा नवासीत् आसोनविंशत् आसोनत्रिंशत् ।
> चत्वारिंशदथतिस्रस्समिधा उशतीरिव मातरोमाविशन्तु ॥ ३ ॥
> ಏಕಾ ಸಾ ಆಸೀತ್ ಪ್ರಥಮಾಸಾ ನವಾಸೀತ್ ಆಸೋನವಿಂಶತ್ ಆಸೋನತ್ರಿಂಶತ್ ।
> ಚತ್ವಾರಿಂಶದಥತಿಸ್ರಸ್ಸಮಿಧಾ ಉಶತೀರಿವ ಮಾತರೋಮಾವಿಶಂತು ॥ 3 ॥

ದಶಾರದ್ವಯ ಮತ್ತು ಮನ್ವಶ್ರ ಚಕ್ರಗಳ ಸ್ಥಿತಿಚಕ್ರವನ್ನು ವಿವರಿಸಲಾಗಿದೆ. ***ಏಕಾ ಸಾ ಆಸೀತ್ ಪ್ರಥಮಾಸಾ*** ಆರಂಭದಲ್ಲಿ ಒಂದಾಗಿರುವುದು, ಬಿಂದು. ***ನವಾಸೀತ್*** ಒಂಬತ್ತಾಗುವುದು, ನವಯೋನಿಚಕ್ರ. ***ಆಸ ಊನವಿಂಶತ್*** ಬಳಿಕ ಹತ್ತೊಂಬತ್ತಾಗುವುದು. ನವಯೋನಿಗಳಲ್ಲಿ ಸೂಕ್ಷ್ಮಭೂತಗಳು ಐದು ಮತ್ತು ಸ್ಥೂಲ ಭೂತಗಳು ಐದು ಒಟ್ಟು ಹತ್ತು ತತ್ತ್ವಗಳಾಗುವುದು. ***ಆಸ ಊನತ್ರಿಂಶತ್*** ಆಮೇಲೆ ಇಪ್ಪತ್ತೊಂಬತ್ತಾಗುವುದು. ಸ್ಥೂಲ ಸೂಕ್ಷ್ಮ ಭೇದದಿಂದ ಶಬ್ದಾದಿ ತನ್ಮಾತ್ರೆಗಳು ಹತ್ತು. ***ಚತ್ವಾರಿಂಶದಥತಿಸ್ರಃ*** ಬಳಿಕ ನಲುವತ್ತಮೂರಾಗುವುದು. ಕರ್ಮೇಂದ್ರಿಯಗಳು ಐದು, ಜ್ಞಾನೇಂದ್ರಿಯಗಳು ಐದು ಮತ್ತು ನಾಲ್ಕು ಅಂತಃಕರಣಗಳು ಒಟ್ಟು ಹದಿನಾಲ್ಕು ತತ್ತ್ವಗಳು. ಈ ಎಲ್ಲ ದೇವತೆಗಳು ಸ್ತ್ರೀರೂಪದ್ದಾಗಿರುವುದರಿಂದ ಯೋನಿರೂಪದಲ್ಲಿ ಹೇಳಿದೆ. 'ಭೂತತನ್ಮಾತ್ರದಶಕಂ ಪ್ರಕಾಶಾಲಂಬನತ್ವತಃ । ದ್ವಿದಶಾರಸ್ಫುರದ್ರೂಪಮ್ .. .. ..' ಎಂದು ತಂತ್ರಗಳಲ್ಲಿ

ವಿವರಿಸಿದೆ. ಅಂತೆಯೇ ಭೂತತತ್ತ್ವಗಳು ತನ್ಮಾತ್ರೆಗಳು ದಶಾರದ್ವಯದ ರೂಪವಾಗಿವೆ ಮತ್ತು ಕರ್ಮೇಂದ್ರಿಯ, ಜ್ಞಾನೇಂದ್ರಿಯ ಮತ್ತು ಅಂತಃಕರಣಗಳು ಚತುರ್ದಶಾರದ ರೂಪವಾಗಿವೆ.

ಇನ್ನೊಂದು ರೀತಿಯಲ್ಲಿ, ಪ್ರಥಮವಾಗಿ ಸರ್ವಜಗತ್ಕಾರಣಭೂತವಾಗಿರುವ ಏಕೈಕ ತತ್ತ್ವವು ಬಿಂದುಚಕ್ರರೂಪವಾಗಿದೆ. ***ನವಾಸೀತ್*** ನವಯೋನಿಚಕ್ರ; ***ಆಸೋನವಿಂಶತ್*** ಒಂದು ಕಡಿಮೆ ಇಪ್ಪತ್ತು, ನವಯೋನಿಚಕ್ರಕ್ಕೆ ಅಂತರ್ದಶಾರವನ್ನು ಸೇರಿಸಿದರೆ ಸಿಗುವುದು; ***ಆಸೋನತ್ರಿಂಶತ್*** ಒಂದುಕಡಿಮೆ ಮೂವತ್ತು, ಅದಕ್ಕೆ ಬಹಿರ್ದಶಾರವನ್ನು ಸೇರಿಸಿದರೆ ಸಿಗುವುದು; ***ಚತ್ವಾರಿಂಶದಥತಿಸ್ರಃ*** ನಲುವತ್ತಮೂರು, ಅದಕ್ಕೆ ಚತುರ್ದಶಾರವನ್ನು ಸೇರಿಸಿದರೆ ಸಿಗುವುದು; ಅಂದರೆ ಒಟ್ಟು ನಲುವತ್ತಮೂರು ಯೋನಿಗಳ, ತ್ರಿಕೋಣಗಳ ರೂಪದ ದೇವತೆ ಎಂದು ತಿಳಿಯಬೇಕು. ಬಿಂದುಚಕ್ರದಲ್ಲಿ ಅಂತರ್ಗತವಾಗಿರುವ ಆಕಾರವಿರುವುದರಿಂದ ನಲುವತ್ತಮೂರು ತ್ರಿಕೋಣಗಳ ಆಕೃತಿಯ ಮಧ್ಯದಲ್ಲಿರುವ ಎಂದು ಪರಿಗಣಿಸಬೇಕು. ***ಸಮಿಧಾ*** ಸಮಿದ್ಧಾ, ದೇದೀಪ್ಯಮಾನ. ***ಮಾತರೋ ಮಾ ವಿಶಂತು*** ಮಾಂ ಪ್ರವಿಶಂತು, ಮಾತೆಯು ಪ್ರವೇಶಿಸುವುದಿಲ್ಲ. ***ಉಶತೀರಿವ*** ಕಾಮ್ಯತೆಯಿಂದ. ಶರೀರದಲ್ಲಿ ಶ್ರೀಚಕ್ರರೂಪವನ್ನು ನ್ಯಾಸಮಾಡುವಾಗ, ಕಾಮ್ಯತೆಯಿಂದ ಪ್ರಾರ್ಥಿಸಿದರೆ ದೇವಿಯು ಪ್ರವೇಶಿಸುವುದಿಲ್ಲ. ಆದುದರಿಂದ ನಿಷ್ಕಾಮತೆಯಿಂದ ಪ್ರಾರ್ಥಿಸಬೇಕು ಎಂಬ ಭಾವ. 'ಯೋಗಿನ್ಯೋ ಯಾಸ್ತು ತಾಸ್ಸರ್ವಾ ಗೇಹಂ ಕುರ್ವಂತು ಮೇ ವಪುಃ ' ಎಂದು ಶಕ್ತಿನ್ಯಾಸಮಂತ್ರಲಿಂಗಸಂವಾದದಲ್ಲಿ ಹೇಳಿದೆ. [3]

ऊर्ध्वज्वलज्ज्वलनज्योतिरग्रेतमो वै तिरश्चीनमजरं तद्रजोऽभूत् ।
आनन्दनं मोदनं ज्योतिरिन्दोः एता उवै मण्डलामण्डयन्ति ॥ ४ ॥
ಊರ್ಧ್ವಜ್ವಲಜ್ಜ್ವಲನಜ್ಯೋತಿರಗ್ರೇತಮೋ ವೈ ತಿರಶ್ಚೀನಮಜರಂ ತದ್ರಜೋಽಭೂತ್ ।
ಆನಂದನಂ ಮೋದನಂ ಜ್ಯೋತಿರಿಂದೋಃ ಏತಾ ಉವೈ ಮಂಡಲಾಮಂಡಯಂತಿ ॥ 4 ॥

ಸೃಷ್ಟಿಚಕ್ರದಲ್ಲಿ ವೃತ್ತತ್ರಯಗಳಿಂದ ಕೂಡಿದ ಪದ್ಮದ್ವಯಗಳನ್ನು ವಿವರಿಸಲಾಗಿದೆ. ಚತುರ್ದಶಾರದ ಕೆಳಕೆಳಗೆ ಅಷ್ಟದಳ ಮತ್ತು ಷೋಡಶದಳಗಳ ಎರಡು ಪದ್ಮಗಳಿವೆ. ಅವುಗಳ ಕರ್ಣಿಕೆಯಲ್ಲಿರುವ ವೃತ್ತಗಳು ಎರಡು ಮತ್ತು ಒಂದು ಅವುಗಳ ಹೊರಗಿನಿಂದ, ಒಟ್ಟು ಮೂರು. ಅಥವಾ ಅವುಗಳ ಹೊರಭಾಗದಲ್ಲಿ ಮೂರು ವೃತ್ತಗಳಿವೆ ಎಂದು ಕೆಲವರು ಹೇಳುತ್ತಾರೆ. 'ಜ್ಯೇಷ್ಠಾರೂಪಂ ಚತುಷ್ಕೋಣಂ ವಾಮಾರೂಪಂ ಭ್ರಮಿತ್ರಯಂ' ಎಂಬುದರಲ್ಲಿ ಭ್ರಮಿತ್ರಯ ಪದವು ವೃತ್ತತ್ರಯದ ಅಂತರಾಲದಲ್ಲಿರುವ ಪದ್ಮದ್ವಯಗಳನ್ನು ಸೂಚಿಸುವುದರಿಂದ ಹಿಂದಿನ ಆಚಾರ್ಯರು ಈ ರೀತಿ ವ್ಯಾಖ್ಯೆ ಮಾಡಿದ್ದಾರೆ. '.. .. .. ವೃತ್ತತ್ರಿತಯಸಂಯುತಂ । ಸರೋರುಹದ್ವಯಂ ಶಾಕ್ತೈರಗ್ನೀಷೋಮಾತ್ಮಕಂ ಪ್ರಿಯೇ ॥' (ವೃತ್ತತ್ರಯಗಳಿಂದ ಕೂಡಿದ ಎರಡು ಪದ್ಮಗಳು ಅಗ್ನಿ ಸೋಮಾತ್ಮಕವಾದ ಶಕ್ತಿಗಳಾಗಿವೆ) ಎಂಬ ವಚನದಿಂದ ಮೂರು ವೃತ್ತಗಳು ಅಗ್ನಿ–ಸೋಮ–ಸೂರ್ಯ ಗುಣತ್ರಯರೂಪವಾಗಿವೆ ಎಂದು ತಿಳಿಯುತ್ತದೆ. ಹಾಗಾಗಿ ಪ್ರಕೃತ ಋಕ್‌ನ ಹೇಳಿಕೆಯು ಅವುಗಳ ಅಂತರಾಳದಲ್ಲಿರುವ ಪದ್ಮದ್ವಯಗಳನ್ನು ವರ್ಣಿಸಿವೆ ಎಂದು ತಿಳಿದುಬರುತ್ತದೆ. ***ಅಗ್ರೇ*** ಸ್ಥಿತಿಚಕ್ರದ ಬಳಿಕದ ಚಕ್ರದ ಅಗ್ರದಲ್ಲಿ. ***ಜ್ವಲನಜ್ಯೋತಿಃ ತಮೋ*** ನಿಶ್ಚಿತವಾದ ತಮೋಗುಣಾತ್ಮಕವಾದ ಜ್ವಲನೆಯುಳ್ಳ ಜ್ಯೋತಿಃ ಮಂಡಲದಂತಿರುವ. ***ಊರ್ಧ್ವಜ್ವಲ*** ವಿಶೇಷವಾಗಿ ಅಗ್ನಿಜ್ವಾಲಾರೂಪದ ಎಂಬ ದೃಢೀಕರಣ. ಊರ್ಧ್ವಭಾಗದಲ್ಲಿ ಉರಿಯುತ್ತಿರುವ ಬೆಂಕಿಯ ಜ್ವಾಲೆಗಳಂತೆ ತೇಜೋಮಯವಾಗಿ ತಮೋರೂಪದ. ಹಾಗಾಗಿಯೇ ತೇಜೋಮಯಕ್ಕೆ ತಮೋಗುಣದ ಸಾಂಗತ್ಯದ ಶಂಕೆಯ ಪರಿಹಾರಕ್ಕಾಗಿ ***ವೈ*** ಎಂಬ ಅವ್ಯಯವು. ***ತಿರಶ್ಚೀನಂ ತತ್ ರಜೋಭೂತಂ***

ವಕ್ರವಾಗಿ ಪಸರಿಸಿರುವ ಜ್ಯೋತಿಮಂಡಲದ ರಕ್ತವರ್ಣದಿಂದ ರಜೋಗುಣವನ್ನು ಹೊಂದಿರುವ. ಆದರಿಂದಾಗಿ ಸೂರ್ಯರೂಪವು. ಅಗ್ನಿ, ಸೂರ್ಯರು ಊರ್ಧ್ವಮುಖವಾಗಿ ವಕ್ರತೆಯಿಂದ ಪ್ರಸರವಾಗುವುದು ಪ್ರತ್ಯಕ್ಷವಾಗಿ ಕಾಣುವುದರಿಂದ. ಹಾಗೆಂದು ಅಭಿಯುಕ್ತರು 'ಗತಂ ತಿರಶ್ಚೀನಮನೂರುಸಾರಥೇ ಪ್ರಸಿದ್ಧಮೂರ್ಧ್ವಜ್ವಲನಂ ಹವಿರ್ಭುಜಃ ॥' (ಮಾಘ 1–2) ಎಂದು ಹೇಳಿರುವರು.

ಅಜರಂ ವಿಶೇಷಣವು ನಾಶವಾಗದ ಅಗ್ನಿಯ ವಿಲಕ್ಷಣತೆಯನ್ನು ತಿಳಿಸುವುದು. ***ಮೋದನಂ*** ವಿಷಯಸುಖವನ್ನು ನೀಡುವ ***ಜ್ಯೋತಿಃ ಇಂದೋಃ*** ಚಂದ್ರಮಂಡಲದಂತೆ. ***ಆನಂದ*** ಪದವು ಸತ್ತ್ವಗುಣಾತ್ಮಕವಾಗಿದೆ; ಸತ್ತ್ವಗುಣಾಧಿಕತೆಯಿಂದ ಬ್ರಹ್ಮಾನಂದವನ್ನು ನೀಡುವ. ***ಉ ವೈ*** ಈ ಮೂರೂ ಮಂಡಲಗಳ ವೃತ್ತಗಳು, ***ಏತಾ*** ಮಾತೃಸ್ವರೂಪಿಣಿಯು. ***ಮಂಡಯಂತಿ*** ಶೋಭಿಸುವವಳು. ಕೇವಲ ಮನ್ವಶ್ರದೊಳಗಿರುವುದನ್ನು ಮಾತ್ರವೇ ಹೇಳದೆ, ವೃತ್ತತ್ರಯಗಳ ಅಂತರಾಲದಲ್ಲಿರುವ ಕಮಲಯುಗಲ ಸಹಿತವಾದ ಶ್ರೀಚಕ್ರವನ್ನು ಸೂಚಿಸಲಾಗಿದೆ. ಮನ್ವಶ್ರದಿಂದ ಬಿಂದುವರೆಗಿನ ಪೂಜೆಯು ಆಪತ್ಕಾಲೀನ ಕಲ್ಪವು ಎಂಬ ಭಾವವು. [4]

> तिस्रश्च रेखास्सदनानि भूमेः त्रिविष्टपास्त्रिगुणास्त्रिप्रकाशाः ।
> एतत्पुरं पूरकं पूरकाणामत्र प्रथेते मदनो मदन्या ॥ ५ ॥
> ತಿಸ್ರಶ್ಚ ರೇಖಾಸ್ಸದನಾನಿ ಭೂಮೇಃ ತ್ರಿವಿಷ್ಟಪಾಸ್ತ್ರಿಗುಣಾಸ್ತ್ರಿಪ್ರಕಾಶಾಃ ।
> ಏತತ್ಪುರಂ ಪೂರಕಂ ಪೂರಕಾಣಾಮತ್ರ ಪ್ರಥೇತೇ ಮದನೋ ಮದನ್ಯಾ ॥ 5 ॥

ಒಂಬತ್ತನೆಯ ಚಕ್ರವಾದ ಭೂಗೃಹವನ್ನು ವಿವರಿಸಲಾಗಿದೆ. ಕೆಲವು ತಂತ್ರಗಳಲ್ಲಿ ಕರ್ಣಿಕೆಯಲ್ಲಿರುವ ಎರಡು ವೃತ್ತಗಳಿಗೆ ಅತಿರಿಕ್ತವಾಗಿ ಪದ್ಮದ್ವಯಗಳ ಹೊರಗಿನಿಂದ ಮೂರು ವೃತ್ತಗಳು ವಿಹಿತವಾಗಿವೆ ಎಂದಿರುವುದು ಕಂಡುಬರುತ್ತದೆ. ಆ ಪಕ್ಷದಲ್ಲಿ ***ತಿಸ್ರಶ್ಚ ರೇಖಾಃ*** ಮೂರು ವೃತ್ತಗಳು ಎಂದು ಆಗಬಹುದು. ಕರ್ಣಿಕೆಯಲ್ಲಿರುವ ವೃತ್ತದ್ವಯಗಳ ಅವಶೇಷವಾಗಿ ಮೂರನೆಯಮಂಡಲವನ್ನು ಹೇಳುವುದು ಎಂದು ತಿಳಿಯಬಾರದು. ತಂತ್ರರಾಜದಲ್ಲಿ ಮನ್ವಶ್ರದ ಹೊರಗಿನಿಂದ ಅದಕ್ಕೆ ಮಿತಿಹೇರುವ ವೃತ್ತವನ್ನು, ಅಷ್ಟದಳಪದ್ಮದ ಕರ್ಣಿಕಾವೃತ್ತಕ್ಕೆ ಅತಿರಿಕ್ತವಾಗಿ ಹೇಳಿರುವುದು ಶ್ರುತಿಮೂಲವಾಗಿದೆ. ***ಭೂಮೇಃ ಸದನಾನಿ*** ಸಾಮಾನಾಧಿಕರಣ್ಯದಿಂದ ಭೂಗೃಹವು ಮೂರು ರೇಖೆಗಳಿಂದ ಕೂಡಿದೆ. ***ತ್ರಿವಿಷ್ಟಪಾ*** ಭುವನತ್ರಯ ರೂಪವಾಗಿದೆ; ಭೂಪುರದಲ್ಲಿ ದೇವತೆಗಳ ವಾಸವಿರುವುದರಿಂದ ಅದು ಸ್ವರ್ಗರೂಪವಾಗಿದೆ. ***ತ್ರಿಗುಣಾಃ*** ಮೂರುಗುಣಗಳಿಂದ ಕೂಡಿದ (ಸತ್ತ್ವ ರಜಃ ತಮಃ). ***ತ್ರಿಪ್ರಕಾಶಾಃ*** ಸೂರ್ಯ ಚಂದ್ರ ಅಗ್ನಿ ರೂಪದ ವೃತ್ತತ್ರಯಗಳ ಪ್ರಕಾಶರೂಪವಾಗಿರುವ. ***ಏತತ್ ಪುರಂ*** ನಾಲ್ಕೂವರೆ ಋಕ್‌ಗಳಲ್ಲಿ ವರ್ಣಿತವಾಗಿರುವ ಈ ಪುರವು, ಶ್ರೀಪುರವು ಪರಿವಾರದೇವತೆಗಳೊಡನೆ ಇರುವ ಪರದೇವತೆಯ ವಾಸಸ್ಥಾನವಾಗಿದೆ. ***ಪೂರಕಾಣಾಂ*** ಭಕ್ತ ಮನೋರಥವನ್ನು ಈಡೇರಿಸಲು ಪರಿಪೂರಕವಾಗಿರುವ. ***ಪೂರಕಂ*** ಶಿವ ವಿಷ್ಣು ಮುಂತಾದವರು ಪೂರಕವಾಗಿರುವ. ಮನೋರಥವನ್ನು ಪೂರೈಸುವ ಈ ಶ್ರೀಚಕ್ರದಲ್ಲಿ ***ಮದನಃ*** ಶಿವಕಾಮೇಶ್ವರ, ***ಮದನ್ಯಾ*** ಶಿವಕಾಮಸುಂದರೀಯರು. ***ಪ್ರಥ*** ಮಯೂಖಾತ್ಮಕವಾಗಿ, ಕಿರಣಾತ್ಮಕವಾಗಿ ಅಣಿಮಾ ಮೊದಲಾದ ಅನಾದಿ ರೂಪದಿಂದ ವಿಸ್ತಾರವನ್ನು ಹೊಂದಿ ವಿಲಸಿತವಾಗಿರುವರು. [5]

> मदन्तिका मानिनी मङ्गला च सुभगा च सा सुन्दरी शुद्धिमत्ता ।
> लज्जमतिस्तुष्टिरिष्टा च पुष्टा लक्ष्मीरुमा ललिता लालपन्ती ॥ ६ ॥

ಮದಂತಿಕಾ ಮಾನಿನೀ ಮಂಗಲಾ ಚ ಸುಭಗಾ ಚ ಸಾ ಸುಂದರೀ ಶುದ್ಧಿಮತ್ತಾ ।
ಲಜ್ಜಾಮತಿಸ್ತುಷ್ಟಿರಿಷ್ಟಾ ಚ ಪುಷ್ಟಾ ಲಕ್ಷ್ಮೀರುಮಾ ಲಲಿತಾ ಲಾಲಪಂತೀ ॥ 6 ॥

ಪುರಾಣಗಳು ಮತ್ತು ತಂತ್ರಗಳಲ್ಲಿ ಉಪಲಬ್ಧವಿರುವ ವಿವಿಧ ಕ್ಷೇತ್ರಗಳಲ್ಲಿ ನಾಮಭೇದದಿಂದ ಕಂಡುಬರುವ ದೇವೀರೂಪಗಳನ್ನು ಇಲ್ಲಿ ತಿಳಿಸಿದೆ. ಪದ್ಮಪುರಾಣದಲ್ಲಿ ದೇವೀತೀರ್ಥಗಳನ್ನು ಪರಿಗಣಿಸುವಾಗ ಪ್ರಯಾಗದಲ್ಲಿ ಲಲಿತಾದೇವೀ ಮುಂತಾದ ಹಲವು ರೂಪಗಳನ್ನು ಹೇಳಲಾಗಿದೆ.

ಪ್ರಯಾಗೇ ಲಲಿತಾ ದೇವೀ .. .. .. ।
ಲಂಕಾಯಾಂ ಮಂಗಲಾ ನಾಮ ತ್ರಿಕೂಟೇ ಭದ್ರಸುಂದರೀ ॥
ಕರವೀರೇಮಹಾಲಕ್ಷ್ಮೀರುಮಾದೇವೀ ವಿನಾಯಕೇ ।
ದೇವದಾರುವನೇ ಪುಷ್ಟಿರ್ಮೇಧಾಕಾಶ್ಮೀರಮಂಡಲೇ ॥
.. .. .. ತುಷ್ಟಿರ್ವಸ್ತ್ರೇಶ್ವರೇ ತಥಾ ॥

ಎಂದು ಇತರ ಅನೇಕ ರೂಪಗಳನ್ನು ಅಲ್ಲಿ ಹೇಳಿದೆ. ***ಮದಂತಿಕಾ*** ಮುಂತಾದ ಹದಿನಾಲ್ಕು ಹೆಸರುಗಳಲ್ಲಿ ವಾರಾಣಸೀಯಲ್ಲಿರುವ ವಿಶಾಲಾಕ್ಷೀ ಮುಂತಾದ ರೂಪಗಳು ಉಪಲಕ್ಷಣವಾಗಿ ಸೇರಿವೆ. ಅವುಗಳಲ್ಲಿ ಕೆಲವು ರೂಪಗಳು ಲಾಲಿಸುವಂತಹ, ಮುದ್ದಿಸುವಂತಹ ರೂಪಗಳಾಗಿವೆ (ಲಾಲಪಂತೀ). ಅಥವಾ ಪಂಚದಶಾಕ್ಷರಗಳಿಗೆ ಹದಿನೈದು ದೇವತೆಗಳು ಎಂದೂ ಅರ್ಥೈಸಬಹುದು. ಶುದ್ಧಿಮತ್ತಾದ ಬದಲಿಗೆ ಸಿದ್ಧಿಮತ್ತಾ ಎಂಬ ಅಥರ್ವಣದ ಪಾಠವಿದೆ. [6]

इमां विज्ञाय सुधया मदन्ति परिस्रुता तर्पयन्तः स्वपीठम् ।
नाकस्य पृष्ठे महतो वसन्ति परं धाम त्रैपुरं चाविशन्ति ॥ ७ ॥
ಇಮಾಂ ವಿಜ್ಞಾಯ ಸುಧಯಾ ಮದಂತಿ ಪರಿಸ್ರುತಾ ತರ್ಪಯಂತಃ ಸ್ವಪೀಠಮ್ ।
ನಾಕಸ್ಯ ಪೃಷ್ಠೇ ಮಹತೋ ವಸಂತಿ ಪರಂ ಧಾಮ ತ್ರೈಪುರಂ ಚಾವಿಶಂತಿ ॥ 7 ॥

ಹೀಗೆ ವರ್ಣಿಸಿರುವ ದೇವತಾರೂಪವನ್ನು ಉಪಾಸಿಸುವ ವಿಧಾನವನ್ನು ವಿವರಿಸಿದೆ. ***ಇಮಾಂ ವಿಜ್ಞಾಯಾ*** ಹೀಗಿರುವ ಪರದೇವತೆಯನ್ನು ಅರಿತು ಗುರೂಪದೇಶ ದೀಕ್ಷೆ ಮುಂತಾದ ಕ್ರಮಗಳನ್ನು ವಿಧಿಪೂರ್ವಕವಾಗಿ ತಿಳಿದು ಉಪಾಸಿಸಬೇಕು. ***ಸ್ವಪೀಠಮ್*** ಶ್ರೀಚಕ್ರವನ್ನು ಮತ್ತು ಅದರಲ್ಲಿರುವ ಆವರಣ ದೇವತೆಗಳನ್ನು ಸ್ವಶರೀರದಿಂದ ಅಭಿನ್ನವೆಂದು ತಿಳಿದು. ***ಸುಧಯಾ ಪರಿಸ್ರುತಾ*** ಅಮೃತಸಿಂಚನೆಮಾಡಿದ ದ್ರವ್ಯಗಳಿಂದ. ***ತರ್ಪಯಂತಃ*** ತರ್ಪಣ ಮುಂತಾದ ಉಪಚಾರಗಳಿಂದ ಈ ದೇವತೆಯನ್ನು ಆವರಣದೇವತೆಗಳೊಂದಿಗೆ ಪೂಜಿಸುವುದು. ಇದನ್ನು ಬಹಿರ್ಯಾಗವೆನ್ನುತ್ತಾರೆ. ***ಮದಂತಿ*** ಬಾಹ್ಯ ವಿಷಯವಸ್ತುಗಳಿಂದ ಮನಸನ್ನು ಹಿಂದೆಗೆದುಕೊಂಡು, ಸ್ವಾತ್ಮವಿಷಯಕ ನಿರ್ವಿಕಲ್ಪಕ ವೃತ್ತಿಭಾವನೆಯುಳ್ಳವನಾಗಿ. ***ಮಹಾನಾಕಪೃಷ್ಠವಾಸ*** ಹಾಗೆ ಮಾಡುವವನು ತ್ರಿವಿಧ ಪುರುಷಾರ್ಥಗಳ ಫಲಸ್ವರೂಪವಾದ ಸ್ವರ್ಗದಲ್ಲಿ ವಾಸಿಸುತ್ತಾನೆ; ***ತ್ರೈಪುರಂ ಪರಂ ಧಾಮ*** ತ್ರೈಪುರವೆಂಬ ಪರಂಧಾಮವನ್ನು ಪ್ರವೇಶಿಸುತ್ತಾನೆ, ಮುಕ್ತಿಯನ್ನು ಪಡೆಯುತ್ತಾನೆ, ಎಲ್ಲಾ ಕಾಮನೆಗಳಿಂದ ಮೋಕ್ಷವನ್ನು ಪಡೆಯುತ್ತಾನೆ ಎಂಬ ಭಾವ. ಅಮೃತೀಕರಣವು ಸಂಸ್ಕರಿಸುವಿಕೆಯ ಉಪಲಕ್ಷಣವಾಗಿದೆ. ಅಲ್ಲಿ ದ್ರವ್ಯದ ಅಭಿಮಾನೀದೇವತೆಯನ್ನು ಅಮೃತದೇವತೆಯೊಂದಿಗೆ ಸೇರಿಸಿ ಸಂಸ್ಕಾರಮಂತ್ರಗಳಿಂದ ಶುದ್ಧೀಕರಿಸಿ ಪೂಜಿಸಲಾಗುವುದು. ಇದನ್ನು

‘ಮಂತ್ರಸಂಸ್ಕಾರಸಂಶುದ್ಧಂ ದೇವತಾಮೃತಮುಚ್ಯತೇ’ ಎಂದು ರುದ್ರಯಾಮಲತಂತ್ರದಲ್ಲಿ ಹೇಳಿದೆ. *ಮಹಾನಾಕಪೃಷ್ಠವಾಸ* ಕಾಮ್ಯ ಉಪಾಸನೆಯಲ್ಲಿ ಮೂರುವಿಧದ ಪುರುಷಾರ್ಥಗಳೇ ಫಲವಾಗಿರುವುವು. *ತ್ರಿಪುರಾಯ ಪರಂ ಧಾಮ* ಅಕಾಮ್ಯ ಉಪಾಸನೆಯ ಫಲವು ಮುಕ್ತಿಯ ಸ್ವರೂಪವಾಗಿರುವುದು, ಅದನ್ನೇ ಮೋಕ್ಷ ಎನ್ನುವರು.

ಏವಂ ಸರ್ವಗತಾ ಶಕ್ತಿಃ ಸಾ ಬ್ರಹ್ಮೇತಿ ವಿವಿಚ್ಯತೇ ।
ಸಗುಣಾ ನಿರ್ಗುಣಾ ಚೇತಿ ದ್ವಿವಿಧೋಕ್ತಾ ಮನೀಷಿಭಿಃ ।
ಸಗುಣಾ ರಾಗಿಭಿಃ ಪೂಜ್ಯಾ ನಿರ್ಗುಣಾ ತು ವಿರಾಗಿಭಿಃ ।
ಧರ್ಮಾರ್ಥಕಾಮಮೋಕ್ಷಾಣಾಂ ಸ್ವಾಮಿನೀ ಸಾ ನಿರಾಕುಲಾ ।
ದದಾತಿ ವಾಂಛಿತಾನರ್ಥಾನರ್ಚಿತಾ ವಿಧಿಪೂರ್ವಕಮ್ ॥ ದೇವೀಭಾಗವತ ॥

ಶ್ರೀವಿದ್ಯಾ ದೀಕ್ಷಿತನು ನಿರ್ವಿಕಲ್ಪಕವೃತ್ತಿಯಿಂದ ಸ್ವಪೀಠದಲ್ಲಿ (ಸ್ವಶರೀರ) ಶ್ರೀಚಕ್ರವನ್ನು ಭಾವಿಸಿಕೊಂಡು ದ್ರವ್ಯಗಳಿಂದ ಕಲ್ಪಸೂತ್ರಗಳಲ್ಲಿ ತಿಳಿಸಿದ ವಿಶೇಷವಾದ ವಿಧಿಗಳಿಂದ ಪತ್ನೀಸಮೇತನಾಗಿ ಅರ್ಚಿಸಬೇಕು. ಇದನ್ನು ಅಂತರ್ಯಾಗವೆಂದು ಹೇಳುತ್ತಾರೆ. ‘ವಿಜ್ಞಾಯ ತರ್ಪಯಂತ’ ಎಂದು ಅಧಿಕಾರವಿಶೇಷತೆಯಿಂದ ಹೇಳಿರುವ ತರ್ಪಣವು ಫಲಭಾವನೆಯಿಲ್ಲದೆ ಸಂಬೋಧಿಸಲ್ಪಟ್ಟಿದೆ, ‘ಹಿರಣ್ಯದಾ ಅಮೃತತ್ವಂ ಭಜಂತೇ’ ಎಂಬಂತೆ. [7]

कामो योनिः कमलावज्रपाणिर्गुहा हसा मातरिश्वाऽभ्रमिन्द्रः ।
पुनर्गुहा सकला माययाच पुरूच्येषा विश्वमाताऽऽदिविद्या ॥ ८ ॥
ಕಾಮೋ ಯೋನಿಃ ಕಮಲಾವಜ್ರಪಾಣಿರ್ಗುಹಾ ಹಸಾ ಮಾತರಿಶ್ವಾಽಭ್ರಮಿಂದ್ರಃ ।
ಪುನರ್ಗುಹಾ ಸಕಲಾ ಮಾಯಯಾಚ ಪುರೂಚ್ಯೇಷಾ ವಿಶ್ವಮಾತಾಽಽದಿವಿದ್ಯಾ ॥ 8 ॥

ಪರದೇವತೆಯ ಸೂಕ್ಷ್ಮರೂಪದ ಉಪಾಸನೆಯ ವಿಧಿಯನ್ನು ವಿವರಿಸಿದೆ. ಇಲ್ಲಿ ಪಂಚದಶಾಕ್ಷರಗಳ ಮಂತ್ರವನ್ನು ಉದ್ಧರಿಸಲಾಗಿದೆ. ಸ್ತ್ರೀದೇವತೆಯ ಚಿದ್ರೂಪತ್ವದಿಂದ ಅದನ್ನು ವಿದ್ಯಾ ಎಂಬ ಪದದಿಂದ ಕರೆಯುತ್ತಾರೆ. ಅದರಲ್ಲಿ ಪ್ರತೀ ಅಕ್ಷರವನ್ನು ಕೆಲವು ರಹಸ್ಯ ನಿರ್ದೇಶನದ ಬೀಜಮಂತ್ರಗಳಿಂದ ರೂಪಿಸಲಾಗಿದೆ, ಅಂತೆಯೇ ಅದರ ಅಧಿಕಾರ ಕರ್ಮಗಳ ರಹಸ್ಯತ್ವವೂ ಧ್ವನಿತವಾಗುತ್ತದೆ. ಇದನ್ನು ತ್ರಿಪುರತಾಪಿನೀ ಉಪನಿಷತ್ತಿನಲ್ಲಿ ಸ್ಪಷ್ಟವಾಗಿ ಹೇಳಿದೆ ಮತ್ತು ‘ಸರ್ವಚೈತನ್ಯರೂಪಾಂ ತಾಮಾದ್ಯಾಂ ವಿದ್ಯಾಂಚ ಧೀಮಹಿ । ಬುದ್ಧಿಂ ಯಾ ನಃ ಪ್ರಚೋದಯಾತ್ ॥’ ಎಂದು ಭಾಗವತದ ಪ್ರಥಮ ಶ್ಲೋಕದಲ್ಲಿಯೂ ಅಧಿಕವಾಗಿ ಸ್ಪಷ್ಟೀಕರಿಸಿದೆ.

ಈ ಮಂತ್ರವು ಅತೀರಹಸ್ಯವಾಗಿರುವುದರಿಂದ ನಾಥಚರಣಗಳಿಂದಲೇ ಅರಿತುಕೊಳ್ಳಬೇಕಾಗಿರುವುದು. ***ಮಾತರಿಶ್ವಾ*** ಕಾಮನ ಚತುರ್ಮುಖ ವಾಚಕ ಅಕ್ಷರ. ***ಯೋನಿಃ*** ಏಕಾದಶ ಸ್ವರ; ***ಕಮಲಾ*** ಚತುರ್ಥ ಸ್ವರ. ***ಇಂದ್ರ, ವಜ್ರಪಾಣಿ*** ಮೂರನೆಯ ಅಂತಸ್ಥ ಅಕ್ಷರ; ***ಅಭ್ರಂ*** ಹಕಾರ; ***ಗುಹಾ, ಮಾಯೆ*** ಭುವನೇಶ್ವರೀ ಬೀಜ; ***ಆದಿವಿದ್ಯಾ ಪುರೂಚೀ*** ಪುರಾತನವಾದ ವಿದ್ಯೆಯು. ***ವಿಶ್ವಮಾತಾ*** ಜಗಜ್ಜನನಿ, ವಿದ್ಯಾಕ್ಷರಗಳಿಂದ ಜಗತ್ತಿನ ಉತ್ಪತ್ತಿ ಕಾರಣಳು. ಇದನ್ನು ಯೋಗಿನೀಹೃದಯದ ಸಂಪ್ರದಾಯಾರ್ಥ ಪ್ರಕರಣದಲ್ಲಿ ಸವಿಸ್ತಾರವಾಗಿ ವರ್ಣಿಸಿದೆ. ದತ್ತಾತ್ರೇಯ, ಅಗಸ್ತ್ಯ ಮುಂತಾದವರ ಪರವಾದ ಮಂತ್ರಭೇದಗಳು ಅನೇಕವಿವೆ; ಅವುಗಳನ್ನು ಯಥಾಶಕ್ತಿ ವರಿವಸ್ಯಾರಹಸ್ಯ ಎಂಬ ಗ್ರಂಥದಲ್ಲಿ ಸಂಗ್ರಹಿಸಲಾಗಿದೆ, ಅದನ್ನು ಅಲ್ಲಿಯೇ ತಿಳಿದುಕೊಳ್ಳುವುದು. ಇಲ್ಲಿ ತಿಳಿಸಿರುವುದು ಕಾಮರಾಜನಿಂದ ಉಪಾಸಿತವಾದ ವಿದ್ಯೆಯು (ಕಾದಿ). [8]

षष्ठंसप्तममथ वह्निसारथिमस्या मूलत्रिकमादेशयन्तः ।
कथ्यं कविं कल्पकं काममीशं तुष्टुवांसोऽमृतत्वं भजन्ते ॥ ९ ॥
ಷಷ್ಠಂಸಪ್ತಮಮಥ ವಹ್ನಿಸಾರಥಿಮಸ್ಯಾ ಮೂಲತ್ರಿಕಮಾದೇಶಯಂತಃ ।
ಕಥ್ಯಂ ಕವಿಂ ಕಲ್ಪಕಂ ಕಾಮಮೀಶಂ ತುಷ್ಟುವಾಂಸೋಽಮೃತತ್ವಂ ಭಜಂತೇ ॥ 9 ॥

ಕಾಮರಾಜನಿಂದ ಉಪಾಸಿತ ವಿದ್ಯೆಯನ್ನು ಉಪದೇಶಿಸಿದ ಬಳಿಕ ಲೋಪಾಮುದ್ರೆಯು ಉಪಾಸಿಸಿದ ವಿದ್ಯೆಯನ್ನು (ಹಾದಿ) ಉದ್ಧರಿಸಿದೆ. ಈ ವಿದ್ಯೆಯಲ್ಲಿ ಕಾಮರಾಜ ವಿದ್ಯೆಯ ***ಮೂಲತ್ರಿಕಂ*** ಪ್ರಾಥಮಿಕ ಮೂರು ಅಕ್ಷರಗಳನ್ನು ಆರರಿಂದ ಆರಂಭವಾಗುವ ಮೂರು ವರ್ಣಗಳಿಂದ ಆದೇಶಿಸುವುದು, ಬದಲಾಯಿಸುವುದು; ಉಳಿದ ಎಲ್ಲ ಅಕ್ಷರಗಳು ಅವೇ ಇರುತ್ತವೆ. ***ಈಶಂ*** ಶುದ್ಧಸತ್ತ್ವಗುಣ ಆಧಿಕ್ಯವಿರುವ ಪರಶಿವ. ***ತುಷ್ಟುವಾಂಸಃ*** ಸ್ತುತಿಸು, ಜಪಿಸುವುದರಿಂದ ತುಷ್ಟೀಕರಿಸು. ***ಅಮೃತತ್ತ್ವಂ ಭಜಂತೇ*** ವಿದ್ಯೆಯ ಜಪದಿಂದ ಮೋಕ್ಷವು ಲಭಿಸುವುದು. ***ಈಶಂ ಕಾಮಂ*** 'ಸೋ ಕಾಮಯತ ಬಹುಸ್ಯಾಂ ಪ್ರಜಾಯೇತ' ಎಂಬ ಶ್ರುತಿಯಂತೆ ಪ್ರಜೆಗಳ ಬಹುತ್ವವನ್ನು ಹೊಂದುವ ಇಚ್ಛೆ. ***ಕಲ್ಪಕಂ*** ಜನ್ಮಾದಿ ಉಪಾಯಗಳ ಜಗತ್ತಿನ ಕಲ್ಪನೆಯ ಅಧಿಷ್ಠಾನವು. ***ಕವಿಂ*** ವೇದಗಳ ದ್ರಷ್ಟಾರರು. ***ಕಥ್ಯಂ*** ವೇದಗಳಲ್ಲಿ ಹೇಳಿರುವ, ಶಾಸ್ತ್ರಮೂಲತ್ವದಿಂದ ವರ್ಣಿಸಿರುವ, ಪರಂಬ್ರಹ್ಮನಿಗೆ ವಿಶೇಷವಾಗಿ ಸಮರ್ಪಿತವಾಗಿರುವ.

ಅಜರಾಪುರಾಣೀ ಮುಂತಾದವುಗಳಲ್ಲಿ ಬ್ರಹ್ಮವನ್ನು ನಪುಂಸಕಲಿಂಗದಿಂದಲೂ, ಇಲ್ಲಿ ಪುಲ್ಲಿಂಗದಿಂದಲೂ, ಕಾಮಕಲಾಧ್ಯಾನದಲ್ಲಿ ಸ್ತ್ರೀಲಿಂಗದಿಂದಲೂ ಸಂಬೋಧಿಸಲ್ಪಡುವ ಪರದೇವತೆಯನ್ನು ಮೂರು ವಿಧವಾಗಿ ಧ್ಯಾನಿಸಬಹುದು ಎಂದು ಕುಲಾರ್ಣವತಂತ್ರದಲ್ಲಿ ತಿಳಿಸಿದೆ.

ಪುಂರೂಪಂ ವಾ ಸ್ಮರೇದ್ದೇವೀಂ ಸ್ತ್ರೀರೂಪಾಂ ವಾ ವಿಚಿಂತಯೇತ್ ।
ಅಥವಾ ನಿಷ್ಕಲಂ ಧ್ಯಾಯೇತ್ಸಚ್ಚಿದಾನಂದಲಕ್ಷಣಮ್ ॥ ಕುಲಾರ್ಣವತಂತ್ರ ॥

ಅಂದರೆ ಪರತತ್ತ್ವದ ಉಪಾಸನೆಯಲ್ಲಿ ನಿಷ್ಕಲವಾಗಿ, ಜಪದಲ್ಲಿ ಪುಂರೂಪದಿಂದ, ಬಹಿರ್ಯಾಗದಲ್ಲಿ ಸ್ತ್ರೀರೂಪದ ಧ್ಯಾನವು ವಿಹಿತವಾಗಿದೆಯಾದರೂ, ಸ್ತ್ರೀ–ಪುಂ ರೂಪಕ್ಕೆ ಸಮವಾದ ಪ್ರಾಧಾನ್ಯತೆಯಿರುವುದರಿಂದ ಸಂಪ್ರದಾಯವು ಐಚ್ಛಿಕವಾಗಿದೆಯೆಂದು ತಿಳಿಯುವುದು. ಮನು ಚಂದ್ರಾದಿಗಳಿಂದ ಉಪಾಸಿಸಲ್ಪಟ್ಟ ವಿದ್ಯೆಗಳನ್ನು ತ್ರಿಪುರಾತಾಪಿನೀ ಉಪನಿಷತ್ತಿನಲ್ಲಿ ತಿಳಿಸಿದ್ದರೂ, ಪ್ರಕೃತ ಎರಡು ವಿದ್ಯೆಗಳನ್ನು ಮಾತ್ರ ಇಲ್ಲಿ ಉದ್ಧರಿಸಲಾಗಿದೆ; 'ವಿದ್ಯಾದ್ವಯಮಿದಂ ಭದ್ರೇ ದೇವಾನಾಮಪಿ ದುರ್ಲಭಮ್ ।' ಎಂಬಂತೆ. ಆದರೆ ಜ್ಞಾನಾರ್ಣವತಂತ್ರದಲ್ಲಿ ಹನ್ನೆರಡು ವಿದ್ಯೆಗಳನ್ನು ತಿಳಿಸಿದ್ದಾರೆ.

ಮನುಂ ಚಂದ್ರಂ ಕುಬೇರಂ ಚ ಲೋಪಾಮುದ್ರಾಂ ಚ ಮನ್ಮಥಮ್ ।
ಅಗಸ್ತ್ಯಂ ನಂದಿಕೇಶಂ ಚ ಸೂರ್ಯಂ ವಿಷ್ಣುಂ ಚ ಷಣ್ಮುಖಮ್ ।
ಶಿವಂ ದುರ್ವಾಸಸಂ ಚೈವ ಕ್ರಮೇಣಾಂತೇ ಸಮರ್ಚಯೇತ್ ॥ ಜ್ಞಾನಾರ್ಣವತಂತ್ರ ॥

ಅವುಗಳಲ್ಲಿ ಪ್ರಥಮವಾಗಿ ಉದ್ಧರಿಸಲಾದ ಕಾದಿವಿದ್ಯೆಯು ಅಧಿಕವಾಗಿ ಪ್ರಚಲಿತದಲ್ಲಿದೆ. 'ಶ್ರೀವಿದ್ಯೈವ ತು ಮಂತ್ರಾಣಾಂ ತಂತ್ರ ಕಾದಿರ್ಯಥಾಪರಾ' ಎಂಬ ಬ್ರಹ್ಮಾಂಡಪುರಾಣದ ಹೇಳಿಕೆಯಿಂದ, ವಸ್ತುತಃ ಎಲ್ಲಾ ವಿದ್ಯೆಗಳ

ಮಧ್ಯೆ ಅಭೇದವಿದ್ದರೂ, ಪ್ರಶಂಸೆಯಲ್ಲಿ ಮಾತ್ರ ತಾರತಮ್ಯವಿದೆಯೆಂದು ತಿಳಿದುಬರುತ್ತದೆ; ಇದನ್ನು ನಾನು ಸೇತುಬಂಧದಲ್ಲಿ ಸಮರ್ಥಿಸಿದ್ದೇನೆ. ಶ್ರೀಮದಾಚಾರ್ಯಭಗವತ್ಪಾದರು ವಿಪರೀತ ರೀತಿಯಿಂದ ಈ ವಿದ್ಯೆಗಳನ್ನು ತಮ್ಮ ಸೌಂದರ್ಯಲಹರೀಯಲ್ಲಿ ಉದ್ಧರಿಸಿದ್ದಾರೆ (ಮೊದಲು ಹಾದಿವಿದ್ಯೆ ಬಳಿಕ ಕಾದಿವಿದ್ಯೆಯನ್ನು). ಅದರಲ್ಲಿ ಶಿವಶಕ್ತಿಕಾಮ ಪದಗಳನ್ನು ಶ್ರುತಿಗಳಿಗನುಗುಣವಾಗಿ ವಿಸ್ತರಿಸದೆ, ಕೆಲವರು ವ್ಯತ್ಯಯವಾಗಿ ಕ್ಲಿಷ್ಟತೆಯಿಂದ ನಿರರ್ಥಕವಾದ ವಾದಗಳಿಂದ ಅರ್ಥೈಸಿದ್ದಾರೆ.

ಹನ್ನೆರಡನೆಯ ಋಕ್‌ನಲ್ಲಿ ಸ್ಥೂಲೋಪಾಸನೆಯನ್ನು ಬಹಿರ್ಯಾಗರೂಪವಾಗಿ ವಿಧಿಸಲಾಗಿದೆ ಮತ್ತು ಹದಿನೈದನೆಯ ಋಕ್‌ನಲ್ಲಿ ನಿರ್ಗುಣೋಪಾಸನೆಯನ್ನು ತಿಳಿಸಿದೆ. ವಸ್ತುತಃ ಮೂರು ಉಪಾಸಿತ ರೂಪಗಳೂ ಸಮಪ್ರಧಾನವಾಗಿದ್ದು, ಅಧಿಕಾರಭೇದದಿಂದ ವಿಧಿತ್ರಯಗಳು ಮತ್ತು ಫಲತ್ರಯಗಳು ಭಿನ್ನವಾಗಿದೆ.

> ಅಂತರ್ಯಾಗಬಹಿರ್ಯಾಗೌ ಗೃಹಸ್ಥಸ್ಸರ್ವದಾಽಽಚರೇತ್ ।
> ಚಕ್ರರಾಜಾರ್ಚನಂ ವಿದ್ಯಾಜಪೋ ನಾಮ್ನಾಂಚ ಕೀರ್ತನಂ ।
> ಭಕ್ತಸ್ಯ ಕೃತ್ಯಮೇತಾವದನ್ಯದಭ್ಯುದಯಂ ವಿದುಃ ॥

ಮುಂತಾದ ವಚನಗಳಂತೆ ಅಧಿಕಾರ ಭೇದದಿಂದ ಕೇವಲ ಅಂತರ್ಯಾಗ ಮತ್ತು ಜಪಗಳು ಫಲಜನಕವಾಗಿವೆ. [9]

> त्रिविष्टपं त्रिमुखं विश्वमातुर्नवरेखाऽस्वरमध्यं तदीले ।
> बृहत्तिथीर्दशपञ्चादिनित्या सा षोडशीपुरमध्यं बिभर्ति ॥ १० ॥
> ತ್ರಿವಿಷ್ಟಪಂ ತ್ರಿಮುಖಂ ವಿಶ್ವಮಾತುರ್ನವರೇಖಾಽಸ್ವರಮಧ್ಯಂ ತದೀಲೇ ।
> ಬೃಹತ್ತಿಥೀರ್ದಶಪಂಚಾದಿನಿತ್ಯಾ ಸಾ ಷೋಡಶೀಪುರಮಧ್ಯಂ ಬಿಭರ್ತಿ ॥ 10 ॥

ಇಲ್ಲಿ ಮೂಲದೇವತೆಯ ಅಂತಸ್ಥವಾಗಿರುವ ಸಗುಣತೆಯನ್ನು ಚಿಂತಿಸಿ ಸ್ಥೂಲೋಪಾಸನೆಯ ವಿಧಿಯಲ್ಲಿ ಬಹಿಶ್ಚಕ್ರ ಸ್ಥಾಪನೆಯ ಸ್ಥೂಲರೂಪವಿಶೇಷವನ್ನು ನಿರ್ದೇಶಿಸಿದೆ. ರೇಖಾ ಪದದ ಬಳಿಕ ಷೋಡಶೀಯ ವಿಸರ್ಗಸ್ವರ ರೂಪವನ್ನು ಶ್ಲೇಷವಾಗಿ ಹೇಳಿದೆ. ***ನವರೇಖಾ ಅಃ ಸ್ವರಮಧ್ಯಂ*** ನವರೇಖೆಗಳು ನವಯೋನಿಯನ್ನು ಸೂಚಿಸುತ್ತವೆ, ಅಃ ಎಂಬ ಸ್ವರಸ್ಥಾನವು ಮಧ್ಯದಲ್ಲಿದೆ. ನವಸಂಖ್ಯೆಯ ರೇಖೆಗಳಾದರೆ ಸಂಹಾರಚಕ್ರವು ಲಕ್ಷಿತವಾಗುತ್ತದೆ, ಅಃ ಎಂಬ ಅಕ್ಷರವೇ ಸ್ವರವಾಗಿ ಮಧ್ಯದಲ್ಲಿರುವ. ***ತ್ರಿಮುಖಂ*** ತ್ರಿಕೋಣವು, ಮಧ್ಯದಲ್ಲಿರುವ ತ್ರಿಕೋಣ. ***ವಿಶ್ವಮಾತುಃ*** ತ್ರಿಪುರಸುಂದರೀಯು. ***ತ್ರಿವಿಷ್ಟಪಂ*** ನಿವಾಸಸ್ಥಾನ, ಪೂಜಾಸ್ಥಾನ; ದೇವತೆಗಳು ಸ್ವರ್ಗದಲ್ಲಿ ವಾಸಿಸುವುದರಿಂದ ಅದರ ವಾಚಕಪದವು ಸ್ಥಾನನಿರ್ದೇಶವನ್ನು ಸೂಚಿಸುತ್ತದೆ. ***ತದೀಲೇ*** ಸ್ತುತಿವಾಕ್ಯದ ಸ್ವರದ ಮಧ್ಯದಲ್ಲಿ ಅಂತ್ಯವಾಗುವ ಡಕಾರಕ್ಕೆ ಲಕಾರ ಬಂದಿದೆ; 'ದ್ವಯೋಶ್ಚಾಸ್ಯ ಸ್ವರಯೋರ್ಮಧ್ಯಮೇತ್ಯ ಸಂಪದ್ಯತೇ ಸ ಡಕಾರೋ ಲಕಾರಃ' ಎಂಬ ಪ್ರತಿಶಾಖ್ಯವಿಧಿಯಂತೆ. ಅಃ ಸ್ವರವು ಮಧ್ಯದಲ್ಲಿದೆ ಎಂದು ಹೇಳುವಾಗ ಉಳಿದ ಹದಿನೈದು ಸ್ವರಗಳು ರೇಖಾತ್ರಯದಲ್ಲಿ (ತ್ರಿಕೋಣದಲ್ಲಿ) 'ಸಮಂ ಸ್ಯಾದ್' ಎಂಬ ನ್ಯಾಯದಂತೆ ಐದು ಐದಾಗಿ ವಿಭಜಿತವಾಗಿ ಇವೆ ಎಂದು ಧ್ವನಿತವಾಗುತ್ತದೆ. ***ಬೃಹತ್*** ಈ ಬೃಹತ್ತಾದ ತ್ರಿಕೋಣದಲ್ಲಿ ***ಪಂಚದಶ ತಿಥಿಃ ನಿತ್ಯಾ*** ಹದಿನೈದು ತಿಥಿಗಳು, ಹದಿನೈದು ತಿಥಿದೇವತೆಗಳಾದ ನಿತ್ಯೆಯರು (ಕಾಮೇಶ್ವರೀಯಿಂದ ಚಿತ್ರಾದವರೆಗೆ), ಐದು ಐದರ ಗುಂಪಾಗಿ ***ಬಿಭರ್ತಿ*** ಸ್ಥಿತವಾಗಿದ್ದಾರೆ. ದಕ್ಷಿಣ-ಊರ್ಧ್ವ-ಉತ್ತರ ರೇಖೆಗಳಲ್ಲಿ ಐದು ಐದು ತಿಥಿ-ನಿತ್ಯೆಯರು ಪೂಜನೀಯರಾಗಿದ್ದಾರೆ ಎಂಬ ಭಾವ.

ವಿಭಾವ್ಯಂ ಚ ಮಹತ್ರ್ಯಸ್ರಮಗ್ರದಕ್ಷೋತ್ತರಕ್ರಮಾತ್ ।
ರೇಖಾಸು ವಿಲಿಖೇತ್ಪಶ್ಚಾತ್ ಪಂಚ ಪಂಚಕ್ರಮೇಣ ಹ ॥
ಅಕಾರಾದ್ಯಾನುಕಾರಾಂತಾನ್ ದಕ್ಷಿಣಾಯಾಂ ವಿಚಿಂತಯೇತ್ ।
ತತಶ್ಚ ಪೂರ್ವರೇಖಾಯಾಂ ದೀರ್ಘಕರ್ಣಾದಿಪಂಚಕಮ್ ॥
ವಿಲಿಖ್ಯೋತ್ತರರೇಖಾಯಾಂ ಶಕ್ತ್ಯಾದಿವಿಲಿಖೇತ್ತತಃ ।
ಅನುಸ್ವಾರಾಂತಂ ಮಧ್ಯೇ ಚ ವಿಸರ್ಗೇ ಷೋಡಶೀಂ ಯಜೇತ್ ॥ ಜ್ಞಾನಾರ್ಣವತಂತ್ರ ॥

ತಿಥಿಗಳಾಗಿರುವ ಚಂದ್ರನ ಕಲೆಗಳ ವೃದ್ಧಿಕ್ಷಯಗಳಿಗೆ, 'ದರ್ಶಾದ್ಯಾಃ ಪೂರ್ಣಿಮಾಂತಶ್ಚ ಕಲಾಃ ಪಂಚದಶೈವತು' ಎಂದು ತಂತ್ರಗಳಲ್ಲಿ ನಿರ್ದಿಷ್ಟವಾಗಿದೆ. 'ದರ್ಶಾ ದೃಷ್ಟಾ ದರ್ಶತಾ ..' (ತೈ.ಬ್ರಾ. 3–10–1) ಮುಂತಾಗಿ ತೈತ್ತರೀಯದಲ್ಲಿರುವುದು. ***ಷೋಡಶೀ*** ಕಲೆಗಳ ಕಾರಣಭೂತವಾಗಿರುವ ವೃದ್ಧಿಕ್ಷಯಶೂನ್ಯವಾದ ಸಾದಾಖ್ಯಾ ಕಲೆಯು ಷೋಡಶೀಯಾಗಿ, ಅವಳೇ ಹದಿನೈದು ನಿತ್ಯೆಯರ ಕಾರಣತ್ವದಿಂದ ನಿತ್ಯೆ ಎಂದು ಕರೆಯಲ್ಪಟ್ಟಿದ್ದಾಳೆ. ***ಸಾ*** ಆದಿನಿತ್ಯಾ ಸ್ವರೂಪಳಾದ ತ್ರಿಪುರಸುಂದರೀಯು ಪುರದ, ಶ್ರೀಚಕ್ರದ ಮಧ್ಯದಲ್ಲಿರುವ ವಿಸರ್ಗ ಸ್ವರಸ್ಥಾನದಲ್ಲಿದ್ದಾಳೆ. ಪ್ರಕಾಶ ವಿಮರ್ಶಾ ರೂಪಾಕಾರದ ಹಕಾರ ವ್ಯಂಜಕತ್ವತೆಯಿಂದ ಷೋಡಶಸ್ವರವಾದ ವಿಸರ್ಗವನ್ನು ಅವಳ ಸ್ಥಾನವೆಂದು ತಿಳಿಯಲಾಗಿದೆ. [10]

द्वामण्डला द्वास्तना बिम्बमेकं मुखं चाधस्त्रीणि गुहासदनानि ।
कामीं कलां काम्यरूपां विदित्वा नरो जायते कामरूपश्च काम्यः ॥ ११ ॥
ದ್ವಾಮಂಡಲಾ ದ್ವಾಸ್ತನಾ ಬಿಂಬಮೇಕಂ ಮುಖಂ ಚಾಧಸ್ತ್ರೀಣಿ ಗುಹಾಸದನಾನಿ ।
ಕಾಮೀಂ ಕಲಾಂ ಕಾಮ್ಯರೂಪಾಂ ವಿದಿತ್ವಾ ನರೋ ಜಾಯತೇ ಕಾಮರೂಪಶ್ಚ ಕಾಮ್ಯಃ ॥11॥

ಕಾಮ್ಯತೆಯಿಂದ ಮಾಡುವ ಕಾಮಕಲಾಧ್ಯಾನರೂಪದ ಬಹಿರ್ಯಾಗವನ್ನು ಆಶ್ರಯಿಸುವವರಿಗೆ ವಿವರಣೆ. ಎರಡು ಮಂಡಲಗಳು, ಎರಡು ಸ್ತನಗಳು, ಒಂದು ಬಿಂಬ, ಒಂದು ಮುಖ, ಕೆಳಗಿನಿಂದ ಮೂರು ಸದನಗಳು – ಭೂಗೃಹಗಳು; ***ಗುಹಾ*** ಹಕಾರಾರ್ಧರೂಪ. ಇದು ಬಿಂಬ ಪದದ ಸ್ತ್ರೀತ್ವವು ಮಂಡಲದಲ್ಲಿರುವುದು ಎಂದಾದಾಗ ಅರ್ಥ. ಅಥವಾ ಕೋಶದಲ್ಲಿರುವಂತೆ ***ಬಿಂಬ*** ಪದದ ಮಂಡಲವಾಚಕತ್ವದಿಂದ ನಾಲ್ಕನೆಯ ಋಕ್ಕಿನಲ್ಲಿ ಹೇಳಿದ ಮೂರು ಮಂಡಲಗಳು ಸೂಚಿತವಾಗುತ್ತದೆ. ವಹ್ನಿ ಸೂರ್ಯ ಮಂಡಲರೂಪದ ಸ್ತನಗಳ ಕೆಳಗೆ ಭೂಪುರ ಹಕಾರಾರ್ಧವನ್ನು ಹೇಳಿರುವುದು ಅನೇಕ ತಂತ್ರಗಳಲ್ಲಿ ಅಲ್ಲಲ್ಲಿ ನಿರ್ದಿಷ್ಟವಾಗಿ ತಿಳಿಸಿರುವ ಕಾಮಕಲಾರೂಪವನ್ನು. ಅದರಂತೆ ಭಗವತ್ಪಾದರು 'ಮುಖಂ ಬಿಂದುಂ ಕೃತ್ವಾ ಕುಚಯುಗಮಧಸ್ತಸ್ಯ ತದಧೋ ಹರಾರ್ಧಂ ಧ್ಯಾಯೇತ್' ಎಂದು ಕಾಮಕಲಾ ಧ್ಯಾನವನ್ನು ವಿಶೇಷವಾಗಿ ತಿಳಿಸಿದ್ದಾರೆ.

ಬಿಂಬ ಪದವು ಬಿಂದುಪರವಾಗಿದ್ದರೆ, ಬಿಂದುವಿನಿಂದ ಮನ್ವಶ್ರದಲ್ಲಿ ಅಂತ್ಯವಾಗುವ ಚಕ್ರಗಳ ಗುಂಪನ್ನು ಸೂಚಿಸುತ್ತದೆ. 'ಮಂಡಲತ್ರಯರೂಪಂತು ಚಕ್ರಂ ಶಕ್ತ್ಯನಲಾತ್ಮಕಮ್' ಎಂಬ ಸುಂದರೀ ಶ್ಲೋಕದಿಂದ ಮಂಡಲಪದವನ್ನು ದಶಾರಾದಿ ಚಕ್ರಗಳ ಪರವಾಗಿ ವ್ಯಾಖ್ಯಾನಿಸಬಹುದಾದರಿಂದ, ಬಿಂದುಮಂಡಲದಿಂದ ಆರು ಚಕ್ರಗಳ ಏಕತ್ವವನ್ನು ಹೇಳುತ್ತದೆ. ದ್ವಾಮಂಡಲವು ಅಷ್ಟದಳ ಷೋಡಶದಳ ಚಕ್ರದ್ವಯಗಳ ಪರವಾಗಿದೆ. ಹೀಗೆ ಮಾಡುವುದರಿಂದ ಶ್ರೀಚಕ್ರದ ಎಲ್ಲಾ ಅವಯವಗಳು ಲಕ್ಷಿತವಾಗುವುವು. ವಸ್ತುತಃ ಶರೀರದಲ್ಲಿ ಮೂರು ಮಂಡಲಗಳು ಶೀರ್ಷದಿಂದ ಗದ್ದದವರೆಗೆ, ಕಂಠದಿಂದ ಸ್ತನದವರೆಗೆ ಮತ್ತು ಹೃದಯದಿಂದ ಗುದದವರೆಗೆ

(ಸೀವನಿ – ಬೆನ್ನುಮೂಳೆಯ ಅಂತ್ಯದಲ್ಲಿ ಬರುವ ಸೂಜಿ ರೂಪದ ಮೂಳೆಗಳು), ಕೇಶ ಪಾಣಿ ಪಾದಗಳು ಅವುಗಳ ಶಾಖೆಗಳು.

ಕಾಮೀಂ ಸರ್ವಚಕ್ರಾತ್ಮನಾಗಿರುವ ಕಾಮೇಶ್ವರಾತ್ಮಕ ಮನ್ಮಥ ಸಂಬಂಧದ. ***ಕಲಾಂ*** ಕಲೆ, ಚಿತ್ಕಲೆಯು. ***ಕಾಮ್ಯರೂಪಾಂ*** ಕಮನೀಯ, ಸುಂದರವಾದ ಸ್ವರೂಪವುಳ್ಳ. ***ವಿದಿತ್ವಾ*** ಧ್ಯಾನಿಸುವ. ***ನರಃ*** ಉಪಾಸಕನು, ಸಾಧಕನು. ***ಕಾಮರೂಪೋ*** ಮನ್ಮಥನಂತೆ ಸುಂದರನಾಗಿ, ಸ್ತ್ರೀಯರಿಗೆ ಶೀಘ್ರವಾಗಿ ಕ್ಷೋಭೆಯನ್ನುಂಟುಮಾಡುವಂತಿರುವವನು. ***ಕಾಮ್ಯಃ*** ಈ ಕಾಮನೆಯು. ತ್ರಿಭುವನಗಳಲ್ಲಿ ಎಲ್ಲರೂ ಬಯಸುವಂತಹ ಸ್ವರೂಪ ಅತೀ ಅಲ್ಪವಾಗಿದೆ ಎಂಬ ಭಾವ. ಭಗವತ್ಪಾದರು ಹೇಳಿದ್ದಾರೆ:

> ಧ್ಯಾಯೇದ್ಯೋ ಹರಮಹಿಷಿ ತೇ ಮನ್ಮಥಕಲಾಮ್ ।
> ಸ ಸದ್ಯ ಸಂಕ್ಷೋಭಂನಯತಿವನಿತಾ ಇತ್ಯತಿಲಘು ।
> ತ್ರಿಲೋಕೀಮಪ್ಯಾಶು ಭ್ರಮಯತಿ ರವೀಂದುಸ್ತನಯುಗಾಮ್ ॥ ಸೌಂದರ್ಯಲಹರೀ ॥

ಕಾಮರೂಪತ್ವದ ಕಾಮನೆಯನ್ನು ಹೊಂದಿರುವ ಕಾಮಿಯ ಕಾಮಕಲಾಧ್ಯಾನವು ಗುಣಫಲ ಸಂಬಂಧವಿರುವ ವಿಧಿಯಾಗಿದೆ. ಬಹಿರ್ಯಾಗದಿಂದ, ಬಾಹ್ಯ ಅನುಷ್ಠಾನಗಳಿಂದ ಕೇವಲ ಬಾಹ್ಯವಾದ ಫಲಗಳು ದೊರೆಯುವುವು ಎಂಬುದು ಭಗವತ್ಪಾದರ ಆಶಯವಾಗಿದೆ.

> ಬಿಂದುಂ ಸಂಕಲ್ಪ್ಯ ವಕ್ತ್ರಂತು ತದಧಃಸ್ಥಂ ಕುಚದ್ವಯಮ್ ।
> ತದಧಸ್ಸಪರಾರ್ಧಂತು ಚಿಂತಯೇತ್ತದಧೋಮುಖಮ್ ॥ ನಿತ್ಯಷೋಡಶಿಕಾರ್ಣವ ॥

ಕ್ರತುಪ್ರಕರಣದಲ್ಲಿರುವ ವಿಧಿಗಳಿಂದ ಧ್ಯಾನಾದಿ ಕಾರ್ಯಗಳನ್ನು ಮಾಡುವಾಗ ಅನ್ನಾದಿಗಳ ಕಾಮನೆಗಳು ಬಾಹ್ಯಪ್ರಯೋಗಗಳ ಪಕ್ಷದಲ್ಲಿ ಬರುವುದು; 'ಬಹಿರಂತಸ್ತಮುಭಯಮವೇಷ್ಟಿವತ್ಸರ್ವಮಿತಿ' ಎಂಬಂತೆ ಆಗ ಭಗವತ್ ಸ್ಮರಣೆಯನ್ನು ಮಾಡುವುದು ವಿಹಿತವೆಂದು ಶಾಂಡಿಲ್ಯಭಕ್ತಿಸೂತ್ರದಲ್ಲಿ ಹೇಳಿದೆ. [11]

> परिस्रुतं झषमाद्यं पलं च भक्तानि योनीः सुपरिष्कृतानि ।
> निवेदयन् देवतायै महत्यै स्वात्मीकृत्य सुकृती सिद्धिमेति ॥ १२ ॥
> ಪರಿಸ್ರುತಂ ಝಷಮಾದ್ಯಂ ಪಲಂ ಚ ಭಕ್ತಾನಿ ಯೋನೀಃ ಸುಪರಿಷ್ಕೃತಾನಿ ।
> ನಿವೇದಯನ್ ದೇವತಾಯೈ ಮಹತ್ಯೈ ಸ್ವಾತ್ಮೀಕೃತ್ಯ ಸುಕೃತೀ ಸಿದ್ಧಿಮೇತಿ ॥ 12 ॥

ಬಹಿರ್ಯಾಗದ ದ್ರವ್ಯಗಳ ಮತ್ತು ಅವುಗಳ ಸಂಗ್ರಹದ ವಿಧಾನದ ವಿವರಣೆ. ***ಝಷಂ*** ಮತ್ಸ್ಯ, ಮೀನು; ದ್ವಿದಳಧಾನ್ಯಗಳು. ***ಪಲಂ*** ಮಾಂಸ, ಏಕದಳಧಾನ್ಯಗಳು. ***ಪರಿಸ್ರುತಮ್*** ಪ್ರೋಕ್ಷಣೆ, ಸುತ್ತುಗಟ್ಟುವಿಕೆ; ದ್ರವರೂಪದಿಂದ ಮದ್ಯವು ಸೂಚಿತವಾಗುವುದು. ***ಭಕ್ತಾನಿ*** ಬಟಾಣಿ, ಕಡಲೆ, ಹೆಸರು ಇತ್ಯಾದಿ ಮುದ್ರಾರೂಪದ ನಾನಾವಿಧದ ಅನ್ನಗಳು ಅಥವಾ ಯೋಗಿಗಳು, ಯೋಗಮುದ್ರಾ ಸಾಧಕರು. ***ಯೋನೀಃ*** ಬಹುವಚನದಿಂದ ಬ್ರಾಹ್ಮಣ ಕ್ಷತ್ರಿಯಾದಿ ಹಲವು ಪಂಗಡಭೇದಗಳು; ಮೈಥುನವೂ ಆಗಬಹುದು. ಕಲಾಷ್ಟಕಾ ಎಂಬ ಪದದಿಂದ ಅವುಗಳನ್ನು ತಂತ್ರಗಳಲ್ಲಿ ವಿಸ್ತರಿಸಿದೆ. ಚಕಾರವು ಈ ಐದನ್ನು ಸಮುಚ್ಚಯಗೊಳಿಸುತ್ತದೆ. ***ಆದ್ಯಂ*** ಪದದಿಂದ ಮಕಾರಕ್ರಮದಲ್ಲಿ ಪಂಚ 'ಮ'ಕಾರಗಳು ವಿವಕ್ಷಿತವಾಗುತ್ತದೆ. ಪಂಚ ಮಕಾರಗಳಾದ ಮತ್ಸ್ಯ, ಮದ್ಯ, ಮಾಂಸ, ಮುದ್ರಾ ಮತ್ತು

ಮೈಥುನಗಳು ಬಹಿರ್ಯಾಗದ ದ್ರವ್ಯಗಳೆಂದು ಇಲ್ಲಿ ಧ್ವನಿತವಾಗುತ್ತದೆ. ಅಥವಾ ಶುದ್ಧೀಕರಿಸಿದ ಏಕದಳ ಮತ್ತು ದ್ವಿದಳ ಧಾನ್ಯಗಳು, ವಿವಿಧ ಪಂಗಡಗಳ ಭಕ್ತರು ಪರದೇವತೆಯ ನೈವೇದ್ಯಕ್ಕೆ ಆವಶ್ಯಕವೆಂದು ಹೇಳಬಹುದು. 'ಆಜ್ಯ' ಎಂಬ ಪಾಠಾಂತರದಲ್ಲಿ ಘೃತವು ಸೂಚಿತವಾಗಿ, ಕಾಕಾಕ್ಷಿಗೋಲಕ ನ್ಯಾಯದಂತೆ ಅದರಲ್ಲಿ ಪಕ್ವಗೊಳಿಸಿದ ಎಂಬ ಅರ್ಥವಾಗುವುದು; ಅಜ ಸಂಬಂಧದ ಎಂಬ ವ್ಯಾಖ್ಯೆಯು ಯುಕ್ತವಲ್ಲ.

ಸ್ವಾತ್ಮಭಾವನೆಯಿಂದ ಬಹಿರ್ಯಾಗವನ್ನು ಆಚರಿಸಿದರೆ, ಸಂಗ್ರಹಿತ ವಸ್ತುಗಳಲ್ಲಿ ಲೋಪವುಂಟಾದರೂ ಬಾಧಕವಿಲ್ಲ. ***ಸುಪರಿಷ್ಕೃತಾನಿ*** ದೃಷ್ಟಾದೃಷ್ಟ ಸಂಸ್ಕಾರಗಳಿಂದ ಸಂಸ್ಕರಿಸಲ್ಪಟ್ಟ, ಪಾಕ ಮುಂತಾದ ರೂಪಗಳಲ್ಲಿ ಲೌಕಿಕವಾಗಿ ಮತ್ತು ಶಾಪವೋಚನಾದಿ ರೂಪದಲ್ಲಿ ವೈದಿಕವಾಗಿ ಎಂದು ಬಹಳಷ್ಟು ತಂತ್ರಗಳಲ್ಲಿ ಪ್ರಸಿದ್ಧವಾಗಿದೆ. 'ಬಹ್ವಲ್ಪಂ ವಾ ಸ್ವಗೃಹ್ಯೋಕ್ತಂ' ಎಂಬ ನ್ಯಾಯದಂತೆ ಕಲ್ಪಸೂತ್ರದಲ್ಲಿ ಹೇಳಿರುವ ಪ್ರಮಾಣದಲ್ಲಿ. ***ಮಹತ್ಯೈ ದೇವತಾಯೈ*** ಮಹಾದೇವಿಗೆ. ***ನಿವೇದಯನ್*** ಅರ್ಪಿಸುವುದು. ***ಸುಕೃತೀ*** ಬಹಿರ್ಯಾಗಕರ್ತನು. ***ಸ್ವಾತ್ಮೀಕೃತ್ಯ*** ಸ್ವಾತ್ಮಬಾವನೆಯಿಂದ ತನ್ನನ್ನು ತಾನು ಅರ್ಪಿಸಿಕೊಳ್ಳುವುದರಿಂದ. ***ಸಿದ್ಧಿಮೇತಿ*** ಯಾಗ ಫಲವು ಲಭಿಸುವುದು. ಪರಸ್ಪರ ಸಮುಚಿತವಾದ ಪಂಚ ಮಕಾರಗಳಿರುವ ಮಾಹಾದೇವೀಯ ಭಾವನಾಯಾಗದಿಂದ ಇಷ್ಟಸಿದ್ಧಿಯಾಗುವ ವಿಧಿಯು ಅಂತರ್ಯಾಗವಿಧಿಯೇ ಆಗಿರುವುದು. [12]

> सृण्येवा सितयाविश्वचर्षणिः पाशेन प्रतिबध्नात्यभीकान् ।
> इषुभिः पञ्चभिर्धनुषा च विद्यत्यादिशक्तिररुणा विश्वजन्या ॥ १३ ॥
> ಸೃಣ್ಯೇವಾ ಸಿತಯಾವಿಶ್ವಚರ್ಷಣಿಃ ಪಾಶೇನ ಪ್ರತಿಬಧ್ನಾತ್ಯಭೀಕಾನ್ ।
> ಇಷುಭಿಃ ಪಂಚಭಿರ್ಧನುಷಾ ಚ ವಿದ್ಯತ್ಯಾದಿಶಕ್ತಿರರುಣಾ ವಿಶ್ವಜನ್ಯಾ ॥ 13 ॥

ಕ್ರತುವಿನ ಅಂಗವಾಗಿ ಪರದೇವತೆಯ ಸಗುಣಧ್ಯಾನವನ್ನು ಹೇಳಲಾಗಿದೆ. ***ಸೃಣ್ಯಾ*** ಅಂಕುಶದಿಂದ. ***ಸಿತಯಾ*** ಶ್ವೇತವರ್ಣದ ತೀಕ್ಷ್ಣಧಾರೆಯುಳ್ಳ. ***ವಿಶ್ವಜನ್ಯಾ*** ವಿಶ್ವದ ಜನಕಳು, ಜಗಜ್ಜನನೀ. ***ಅರುಣಾ*** ಲೌಹಿತ್ಯವರ್ಣೆ ***ಆದಿಶಕ್ತಿ*** ಮಹಾತ್ರಿಪುರಸುಂದರೀ. ***ವಿಶ್ವಚರ್ಷಣಿಃ*** ಪ್ರಾಣಿಮಾತ್ರರ ಶುಭಾಶುಭ ಕರ್ಮವನ್ನು ದೃಷ್ಟಿಸುವವಳು, ಫಲವನ್ನು ನಿಯಂತ್ರಿಸುವವಳು. ***ಅಭೀಕಾನ್*** ಕಾಮುಕರನ್ನು, ಆಸೆಬುರುಕರನ್ನು, ಲೌಲ್ಯಮಾರ್ಗದಲ್ಲಿ ಪ್ರವರ್ತಿತರಾದ ಭ್ರಷ್ಟರನ್ನು ***ಪಾಶೇನ*** ಪಾಶದಿಂದ ***ಪ್ರತಿಬಧ್ನಾತಿ*** ಪ್ರತಿಬಂಧಿಸುವವಳು. ***ಧನುಷಾ ಪಂಚಭಿಃ ಇಷುಭಿಃ ವಿದ್ಯತಿ*** ಧನುಸ್ಸು ಮತ್ತು ಐದು ಬಾಣಗಳು. ಬಾಣಗಳು ವಧಿಸುತ್ತವೆ, ಅಧಃಪತನಕ್ಕೊಳಪಡಿಸುತ್ತವೆ. ಅವೈಧ ಕರ್ಮಗಳಲ್ಲಿ ಪ್ರವರ್ತವಾಗುವವರನ್ನು ಉದ್ಧರಿಸುವುದು, ಉತ್ತಮರನ್ನಾಗಿಸುವುದು ಎಂಬ ಭಾವ.

> ವಿಧಿಬುಧ್ಯೈವ ಸೇವೇತ ತೃಷ್ಣಯಾ ಚೇತ್ಸಪಾತಕೀ ।
> ಯೈರೇವ ಪತನಂ ದ್ರವ್ಯೈರ್ಮುಕ್ತಿಸ್ತೈರೇವ ಚೋದಿತಾ ।
> ಅಭೀಕಸ್ಯಾನಭೀಕಸ್ಯೇತ್ಯೇವಮೇತೇ ವ್ಯವಸ್ಥಿತಾಃ ॥ ಇತಿ ॥

ಸೃಣೀಯ ಕಾರ್ಯವು ಎರಡುವಿಧವಾಗಿದೆ; ನಿಯಂತ್ರಿಸುವುದು ಮತ್ತು ವಧಿಸುವುದು ಎಂದು ಯಾಸ್ಕನು ಹೇಳಿದ್ದಾನೆ. ***ಇವ*** ಶಬ್ದವು ಸರ್ವತ್ರ ಅನ್ವಯವಾಗುವುದು. ಸಗುಣರೂಪದಿಂದ ಭಕ್ತರನ್ನು ಅನುಗ್ರಹಿಸಲು ಕಲ್ಪಿಸಿರುವ ಆಯುಧಗಳು, ನಿರ್ಗುಣರೂಪದಲ್ಲಿ ಪಾರಮಾರ್ಥಿಕತೆಯನ್ನು ಸೂಚಿಸುವುದು. [13]

भगश्शक्तिर्भगवान्काम ईश उभादाताराविहसौभगानाम् ।
समप्रधानौसमसत्वौ समोतयोस्समशक्तिरजरा विश्वयोनिः ॥ १४ ॥

ಭಗಶ್ಶಕ್ತಿರ್ಭಗವಾನ್ಕಾಮ ಈಶ ಉಭಾದಾತಾರಾವಿಹಸೌಭಗಾನಾಮ್ ।
ಸಮಪ್ರಧಾನೌಸಮಸತ್ವೌ ಸಮೋತಯೋಸ್ಸಮಶಕ್ತಿರಜರಾ ವಿಶ್ವಯೋನಿಃ ॥ 14 ॥

ಸಗುಣ ಕಲ್ಪಿತರೂಪವು ಸ್ತ್ರೀ ಪುರುಷತತ್ತ್ವಗಳಿಗೆ ಸಮಪ್ರಾಧಾನ್ಯತೆಯನ್ನು ನೀಡುತ್ತದೆ. 'ಐಶ್ವರ್ಯಸ್ಯ ಸಮಗ್ರಸ್ಯ ಧರ್ಮಸ್ಯ ಯಶಸಃ ಶ್ರಿಯಃ ಜ್ಞಾನವಿಜ್ಞಾನಯೋಶ್ಚೈವ ಷಣ್ಣಾಂ ಭಗ ಇತೀರಣಾ' ಎಂಬ ಸ್ಮೃತಿವಚನದಂತೆ ಈಶ್ವರತ್ವವುಳ್ಳ ಶರೀರ ಘಟಕಗಳು ಮತ್ತು ಧರ್ಮಕರ್ಮಗಳು ಎಲ್ಲವೂ ಭಗ ಪದದಿಂದ ನಿರ್ದಿಷ್ಟವಾಗಿವೆ. ಅಂತಹ ಧರ್ಮಸಮೂಹಗಳು ಶಕ್ತಿಯೆಂದೂ ಹೇಳಲ್ಪಡುತ್ತವೆ. ಇಲ್ಲಿ ಉಪಾಸಿಸಲು ವರ್ಣಿಸಿರುವ ಸ್ತ್ರೀರೂಪವು ದೇವತೆಯ ಸ್ವರೂಪವಾಗಿದೆ. 'ಪ್ರಕಾಶಾತ್ಮನೋ ಬ್ರಹ್ಮಣಃ ಸ್ವಭಾವಾತ್ಮಕವಿಮರ್ಶಂ ಪ್ರಕಮ್ಯ, ಏಷ ಏವ ವಿಮರ್ಶಶ್ಚಿತಿಶ್ಚೈತನ್ಯಮಾತ್ಮಾ ಸ್ವರಸೋದಿತಾ ಪರಾವಾಕ್ ಸ್ವಾತಂತ್ರ್ಯಂ ಪರಮಾತ್ಮೋನ್ಮುಖ್ಯಮೈಶ್ವರ್ಯಂ ಸತತ್ವಂ ಸತ್ತಾ ಸ್ಫುರತ್ತಾ ಸಾರೋ ಮಾತೃಕಾ ಮಾಲಿನೀ ಹೃದಯಮೂರ್ಮಿಃ ಸ್ವಸವಿತ್ಸ್ಪಂದಃ ॥' ಎಂಬ ನಾಗಾನಂದ ಸೂತ್ರದಂತೆ ಈ ಶಬ್ದದಲ್ಲಿ ರಾಗದ ಆರೋಹಣವು ಹೇಳಲ್ಪಟ್ಟಿದೆ. ಅಂತಹ ಧರ್ಮವಿಶೇಷಣದ ವಿವರಣೆಯನ್ನು ಅಲ್ಲಿಯೇ ಅರಿತುಕೊಳ್ಳುವುದು.

ಭಗವಾನ್ ಹಾಗೆ ಧರ್ಮವಿಶಿಷ್ಟವಾಗಿರುವ ***ಕಾಮ ಈಶಃ*** ಕಾಮೇಶ್ವರ; ಇಲ್ಲಿ ಉಪಾಸಿತವಾಗಿರುವ ದೇವತೆಯ ಪುಂಸಾತ್ಮಕ ರೂಪವು. ***ಇಹ*** ಅವನ ಉಪಾಸನೆಯಲ್ಲಿ ***ಸೌಭಗಾನಾಂ*** ಸಾಧಕರು ಧರ್ಮ ಅರ್ಥ ಕಾಮ ರೂಪದ ವಿವಿಧ ಫಲಗಳನ್ನು ***ದಾತಾರೌ ಉಭೌ*** ನೀಡುವ ಇಬ್ಬರನ್ನೂ ಒಂದಾಗಿಭಾವಿಸಿ ಸಗುಣಧ್ಯಾನ ಮಾಡುವುದರಿಂದ ತ್ರಿವರ್ಗಗಳ ಸಿದ್ಧಿಯಾಗುವುದು. ***ಸಮಪ್ರಧಾನೌ*** ಏಕವಿಧವಾದ ಪ್ರಾಧಾನ್ಯತೆಯಿರುವ ***ಸಮಸತ್ವೌ*** ಸತ್ತ್ವ ಶಬ್ದದ ಗುಣಪರತ್ವದಿಂದ ಪರಸ್ಪರ ಗುಣ–ಗುಣೀ ಭಾವವುಳ್ಳವರಾದ. ಕಾಮೇಶ್ವರಿಯು ಕಾಮೇಶ್ವರನ ಅಂಕದಲ್ಲಿರುವಂತೆ ಮಾಡುವ ಧ್ಯಾನದಲ್ಲಿ ಶಿವನ ಆಧಾರತ್ವದಿಂದ ಶಿವನು ಗುಣವಾಗಿ ಶಕ್ತಿ ಪ್ರಧಾನವಾಗಿದೆ; ಶಿವನ ಅರ್ಧಾಂಗ ಅಂಬಿಕಾಯುಕ್ತವಾದ (ಅರ್ಧನಾರೀಶ್ವರ) ಧ್ಯಾನದಲ್ಲಿ ಕರ ಶೀರ್ಷ ಇತ್ಯಾದಿ ಅವಯವಗಳ ವಿಶೇಷರೂಪದಿಂದ ಶಕ್ತಿಯು ಗುಣವಾಗಿ ಶಿವ ಪ್ರಧಾನವಾಗಿದೆ ಎಂಬ ಭಾವ. ಫಲದಾನ ಸಾಮರ್ಥ್ಯದಿಂದ ಅನ್ಯೋನ್ಯ ಗುಣಪ್ರಧಾನ ಭಾವಸಾಮ್ಯತೆಯಿದ್ದರೂ, ಜಗತ್ಕರ್ತೃತ್ವವು ಶಕ್ತಿನಿಷ್ಠವಾಗಿದೆ; ಅದರ ಸ್ತ್ರೀರೂಪ ಧ್ಯಾನದಿಂದ ಶೀಘ್ರ ಫಲಸಿದ್ಧಿಯಾಗುವುದೆಂದು ತಿಳಿಯಲಾಗಿದೆ. ***ಸಮೋತಯೋಃ*** ಪೂರ್ಣತೆಯಲ್ಲಿ ಪರಸ್ಪರ ಅಭೇದವಿರುವ ಅರ್ಧನಾರೀಶ್ವರ ರೂಪದಲ್ಲಿ ಶಿವ ಶಕ್ತಿಯರ ಮಧ್ಯೆ ***ಸಮಶಕ್ತಿಃ*** ಸರ್ವಶಕ್ತಿಯು ಮಿಲಿತವಾಗಿದೆ. ನಿಖಿಲ ಧರ್ಮಸಮೂಹಾತ್ಮಿಕ ದೇವಿಯೇ ***ವಿಶ್ವಯೋನಿಃ*** ಜಗತ್ಕರ್ತ್ರೀ. ಹಾಗೆ ಶಕ್ತಿಸೂತ್ರದಲ್ಲಿ 'ಚಿತಿಃ ಸ್ವತಂತ್ರಾ ವಿಶ್ವಸಿದ್ಧಿಹೇತು' ಎಂದು ಹೇಳಿದೆ. 'ಉರುಷ್ಯಾ ಣೋ ಅಘಾಯತಃ ಸಮಸ್ಮಾದ್' ಎಂಬುದರಿಂದ ಸಮ ಶಬ್ದವು ಎಲ್ಲದಕ್ಕೂ ಪರ್ಯಾಯವಾಗಿ ಪ್ರಸಿದ್ಧವಾಗಿದೆ. ***ಅಜರಾ*** ಕ್ಷಯರಹಿತಳು; ವಿಶ್ವಯೋನಿತ್ವದ ವಿಶೇಷತೆಯಾಗಿದೆ. ಜಗತ್ಕರ್ತೃತ್ವವು ಪ್ರತ್ಯಕ್ಷಾದಿ ಪ್ರಮಾಣಗಳಿಂದ ಸಿದ್ಧವಾಗುವುದರಿಂದ ಶಂಕೆ, ಕಲಂಕ ರಹಿತವಾಗಿದೆ. ಭಾಗವತದಲ್ಲಿ

ಶಕ್ತಿಃ ಕರೋತಿ ಬ್ರಹ್ಮಾಂಡಂ ಸಾವೈ ಪಾಲಯತೇಖಿಲಮ್ ।
ಇಚ್ಛಯಾ ಸಂಹರತ್ಯೇಷಾ ಜಗದೇತಚ್ಚರಾಚರಮ್ ॥
ನ ವಿಷ್ಣುರ್ನಹರೋ ನೇಂದ್ರೋ ನ ಬ್ರಹ್ಮಾ ನ ಚ ಪಾವಕಃ ।

ನಾರ್ಕೋ ನ ವರುಣಶ್ಶಕ್ತಾಃ ಸ್ವೇ ಸ್ವೇ ಕಾರ್ಯೇ ಕಥಂಚನ ॥
ತಥಾ ಯುಕ್ತಾ ಹಿ ಕುರ್ವಂತಿ ಸ್ವಾನಿ ಕಾರ್ಯಾಣಿ ತೇ ಸುರಾಃ ।
ಕಾರಣಂ ಸೈವ ಕಾರ್ಯೇಷು ಪ್ರತ್ಯಕ್ಷೇಣಾವಗಮ್ಯತೇ ॥ ಇತಿ ॥

ಎಂದು ಹೇಳಿದೆ. ಬೇರೊಂದುಕಡೆ:

ಶಿವೋಪಿ ಶವತಾಂ ಯಾತಿ ಕುಂಡಲಿನ್ಯಾ ವಿವರ್ಜಿತಃ ।
ಶಕ್ತಿಹೀನೋಪಿ ಯಃ ಕಶ್ಚಿದಸಮರ್ಥಃ ಸ್ಮೃತೋ ಬುಧೈಃ ॥

ಹೆಚ್ಚಿನ ವಿಷಯಗಳನ್ನು ಸೇತುಬಂಧದಲ್ಲಿ ತಿಳಿಸಿದೆ. ಹಾಗೆ ತಿಳಿಯುವಾಗ ಶಿವನ ಫಲದಾತೃತ್ವವು ಶಕ್ತಿಯ ಅಧೀನತ್ವದಿಂದಾಗಿ ವಿಳಂಬವಾಗುವುದು; ಶಕ್ತಿಯ ನಿರಪೇಕ್ಷತೆಯಿಂದ ಅವಿಳಂಬಿತವಾಗಿರುವ ಶೀಘ್ರಸಿದ್ಧಿಯ ಲಭ್ಯತೆಯಿಂದಾಗಿ ಸ್ತ್ರೀರೂಪದ ದೇವತೆಯ ಧ್ಯಾನವು ಯುಕ್ತವಾಗಿದೆ ಎಂಬ ಭಾವ. [14]

परिस्रुता हविषापावितेन प्रसङ्कोचे गलितेवैमनस्तः ।
सर्वः सर्वस्य जगतो विधाता भर्ता हर्ता विश्वरूपत्वमेति ॥ १५ ॥
ಪರಿಸ್ರುತಾ ಹವಿಷಾಪಾವಿತೇನ ಪ್ರಸಂಕೋಚೇ ಗಲಿತೇವೈಮನಸ್ತಃ ।
ಸರ್ವಃ ಸರ್ವಸ್ಯ ಜಗತೋ ವಿಧಾತಾ ಭರ್ತಾ ಹರ್ತಾ ವಿಶ್ವರೂಪತ್ವಮೇತಿ ॥ 15 ॥

ಸಗುಣಧ್ಯಾನಮುಕ್ತವಾಗಿ ನಿರ್ಗುಣಧ್ಯಾನವನ್ನು ತಿಳಿಸಿ ಅದರ ಜನ್ಯಫಲವನ್ನು, ಜನನ ಪ್ರಣಾಳಿಕೆಯನ್ನು ಉಪದೇಶಿಸುತ್ತದೆ. ಕರ್ಮಮಾರ್ಗ ಜ್ಞಾನಮಾರ್ಗ ಭಕ್ತಿಮಾರ್ಗಗಳನ್ನು ಆಯಾ ಪ್ರವರ್ತಕರು ನಾನಾವಿಧವಾಗಿ ಪ್ರಣಾಳಿಕೆಗಳಿಂದ ಹೊಗಳುತ್ತಾರೆ. ತಮ್ಮ ತಮ್ಮ ಮಾರ್ಗಗಳು ಸಾಧಿಸಲು ಕಷ್ಟಕರವಾದರೂ ಚಿರಕಾಲ ಫಲಪ್ರದವಾಗಿವೆಯೆಂದೂ ಅವರು ಸ್ಪಷ್ಟಪಡಿಸುತ್ತಾರೆ. ಅದರಲ್ಲಿ ಸಮಯಾಚಾರದಿಂದ ಮಾಡಿದ ಪ್ರೌಢ ಸಪರ್ಯೆಗಳು ಧರ್ಮಕಾರ್ಯಗಳಾಗಿ, ಬಳಿಕ ಹೆಚ್ಚಿನ ಸಂತೋಷದಲ್ಲಿ ಮಾಡಿದ ಕಾಮ್ಯಕರ್ಮಗಳು, ಅಂತಿಮವಾಗಿ ಬ್ರಹ್ಮಸ್ವರೂಪವನ್ನು ಪಡೆದುಕೊಳ್ಳುತ್ತವೆ. ಹಾಗೆಂದು ಕಲ್ಪಸೂತ್ರವು 'ಆರಂಭತರುಣಯೌವನಪ್ರೌಢತದಂತೋನ್ಮನ್ಯ ನವಸ್ಥ್ಯೋಕ್ತಾಸೇಷು ಪ್ರೌಢಾಂತಂ ಸಮಯಾಚಾರಃ ತತಃ ಪರಂ ಯಥಾಕಾಮೀತಿ' ಎಂದು ಹೇಳುತ್ತದೆ. ಏಳುರೀತಿಯ ಸಂತೋಷಗಳ ಲಕ್ಷಣಗಳನ್ನು ಕುಲಾರ್ಣವತಂತ್ರದಲ್ಲಿ ವಿವರಿಸಿದ್ದಾರೆ. ಪ್ರತಿದಿನವೂ ಲಭಿಸುವ ಬ್ರಹ್ಮಸ್ವರೂಪದ ಸುಷುಪ್ತಿದಶೆಯನ್ನು ಅದರಲ್ಲೊಂದಾಗಿ ತಿಳಿಯಲಾಗಿದೆ. ಅಲ್ಲಿ ಮನಸು ವಿಲೀನವಾದರೂ, ಅವಿದ್ಯೆಯ ಪರಿಣಾಮವಾದ ವಿಶೇಷರೂಪದ ನಿದ್ರೆಯು ಅದರಲ್ಲಿರುವುದರಿಂದ ಅದು ಒಂದು ಪುರುಷಾರ್ಥವಾಗಿದೆ. ನಿದ್ರಾರಾಹಿತ್ಯದ ದಶೆಯೂ ಒಂದು ಪುರುಷಾರ್ಥವಾಗಿದೆ. ಅದರಂತೆ ನಿರ್ವಿಕಲ್ಪಸಮಾಧಿಯಿಂದ ದೊರೆಯುವ ಅನುಭವಗಳನ್ನು ಯೋಗಿಗಳು ಉನ್ಮನೀಯ ಬಳಿಕದ ಅವಸ್ಥೆಯ ಸಂತೋಷಗಳೆಂದು ಹೇಳುತ್ತಾರೆ.

ಆನಂದಂ ಬ್ರಹ್ಮಣೋ ರೂಪಂ ತಚ್ಚ ದೇಹೇ ವ್ಯವಸ್ಥಿತಮ್ ।
ತಸ್ಯಾಭಿವ್ಯಂಜಕಂ ದ್ರವ್ಯಂ ಯೋಗಿಭಿಸ್ತೇನ ಪೀಯತೇ ॥ ಇತಿ ॥

'ತಸ್ಯಾಭಿವ್ಯಂಜಕಾಃ ಪಂಚ ಮಕಾರಾ ಇತ್ಯುಕ್ತಮ್' ಎಂದು ಕಲ್ಪಸೂತ್ರದಲ್ಲಿ ಹೇಳಿದೆ. ಆದರೆ ಆ ದ್ರವ್ಯಗಳು ಯಜ್ಞಾಂಗವಾಗಿರದೆ ಅಪವಿತ್ರವಾಗಿರುವುವು ಮತ್ತು ಪುರುಷಾರ್ಥ ನಿಷೇಧಪ್ರವೃತ್ತಿಯಿಂದ ಪಾಪಗಳು

ಪ್ರತಿಬಂಧಿಸಲ್ಪಡುವುದಿಲ್ಲ. ಮಂತ್ರಗಳಿಂದ ಪವಿತ್ರಗೊಳಿಸಿದ ಹವಿಸ್ಸಿನಿಂದ ಸಮಾಧಿಸ್ಥಿತಿಯು ಲಭಿಸುವುದು. ಸಮಯಾಚಾರ ಸ್ಮೃತಿಯಲ್ಲಿ ಹೇಳಿದ್ದಾರೆ:

ಅಸಂಸ್ಕೃತಂ ಪಶೋಃ ಪಾನಂ ಕಲಹೋದ್ವೇಗಪಾಪಕೃತ್ ।
ಮಂತ್ರಪೂಜಾವಿಹೀನಂ ಯತ್ಪಶುಪಾನಂ ತದೇವ ಹಿ ॥
ಪಶುಪಾನವಿಧೌ ಪೀತ್ವಾ ವೀರೋಽಪಿ ನರಕಂ ವ್ರಜೇತ್ ।
ಸಂಸ್ಕೃತಂ ಬೋಧಜನಕಂ ಪ್ರಾಯಶ್ಚಿತ್ತಂ ಚ ಶುದ್ಧಿಕೃತ್ ॥
ಮಂತ್ರಾಣಾಂ ಸ್ಫುರಣಂತೇನ ಮಹಾಪಾತಕನಾಶನಮ್ ।
ಆಯುಃ ಶ್ರೀಃ ಕಾಂತಿಸೌಭಾಗ್ಯಂ ಜ್ಞಾನಂ ಸಂಸ್ಕೃತಪಾನತಃ ॥
ಅಷ್ಟೈಶ್ವರ್ಯಂ ಖೇಚರತ್ವಂ ಪತನಂ ವಿಧಿವರ್ಜಿತಮ್ ।
ಸೌತ್ರಾಮಣ್ಯಾಂ ಕುಲಾಚಾರೇ ಮದಿರಾಂ ಬ್ರಾಹ್ಮಣಃ ಪಿಬೇತ್ ।
ಅನ್ಯತ್ರ ಬ್ರಾಹ್ಮಣಃ ಪೀತ್ವಾ ಪ್ರಾಯಶ್ಚಿತ್ತಂ ಸಮಾಚರೇತ್ ॥ ಇತಿ ॥

ಆದರೆ

ಪರಂ ಪ್ರಾಣಾಃ ಪ್ರಗಚ್ಛಂತು ಬ್ರಾಹ್ಮಣೋ ನಾರ್ಪಯೇತ್ಸುರಾಮ್ ।
ಬ್ರಾಹ್ಮಣೋ ಮದಿರಾಂ ದತ್ತ್ವಾ ಬ್ರಾಹ್ಮಣ್ಯಾದೇವ ಹೀಯತೇ ॥

ಎಂಬ ತಂತ್ರರಾಜದ ವಚನಗಳು ನಿರ್ದಿಷ್ಟವಾಗಿ ನಿಷೇಧಾತ್ಮಕವಾಗಿವೆ. ಇವುಗಳು ಧರ್ಮಪಾಶವನ್ನು ನಿರಸನಗೊಳಿಸುವ ಉಪಾಯಗಳ ಸಂಪ್ರದಾಯವಾಗಿವೆ. ಅವುಗಳ ವ್ಯವಸ್ಥಾಪ್ರಕಾರವನ್ನು ನಾನು ಕೌಲೋಪನಿಷತ್ತಿನ ಭಾಷ್ಯದಲ್ಲಿ ಪ್ರದರ್ಶಿಸಿರುವೆನು. ಪವನನಿಯಮನ (ಪ್ರಾಣಾಯಾಮ) ಮುಂತಾದ ಉಪಾಯಗಳಿಂದ ಪುನಃ ಪುನಃ ಸಮಾಧಿಯನ್ನು ಪ್ರವೇಶಿಸುವ ನಿತ್ಯಾಭ್ಯಾಸದಿಂದ ಹಲವರು ಕೆಲಸಮಯದ ಬಳಿಕ ಅವುಗಳಿಲ್ಲದೇ ಸಾರ್ವಕಾಲಿಕ ಸಮಾಧಿಯನ್ನು ಉತ್ಪತ್ತಿಮಾಡಿಕೊಳ್ಳುತ್ತಾರೆ. ಸಮುದ್ರದಲ್ಲಿ ಗಾಳಿಯಿಂದ ಚಲಿಸುವ ನೌಕೆಯಲ್ಲಿ ಪ್ರಯಾಣಮಾಡುವಾಗ, ನೀರಿನ ಅಲ್ಲೋಲಕಲ್ಲೋಲದಿಂದ ನೌಕೆಯು ತೂಗಾಡಿದರೆ ಪ್ರಯಾಣಿಕರೂ ತೂಗಾಡುತ್ತಾರೆ; ನೌಕೆಯಿಂದ ಕೆಳಗಿಳಿದ ಬಳಿಕವೂ ತೂಗಾಟದ ಅನುಭವವಾಗುವುದು. ಅದರಂತೆ ಸಂಸ್ಕರಿಸಿದ ದ್ರವ್ಯಗಳಿಂದ ದೊರೆಯುವ ಸಮಾಧಿ ಅವಸ್ಥೆಯನ್ನು ಬಳಿಕ ಕೆಲವರು ದ್ರವ್ಯಗಳಿಲ್ಲದೆಯೂ ಸಿದ್ಧಿಸಿಕೊಳ್ಳುತ್ತಾರೆ.

ಪಾವಿತೇನ ಮಂತ್ರಸಂಸ್ಕಾರದಿಂದ ಶುದ್ಧೀಕರಿಸಿದ. ***ಹವಿಷಾ*** ದೇವೀ ಪೂಜೆಯ ದ್ರವ್ಯಗಳು. ***ಪರಿಸ್ರುತ*** ಕುಡಿಯುವಂತಹ. ***ಮನಸ್ತಃ*** ಅಂತಃಕರಣದಲ್ಲಿ ಜನಿಸಿದ. ***ಸಂಕೋಚೇ*** ಆತ್ಮನನ್ನು ಪ್ರತ್ಯೇಕಿಸಿ. ***ಪ್ರಗಲಿತೇ*** ಕರಳಿಸದೆ ವಿಲೀನವಾಗು, ಉನ್ಮನೀಯ ಉಲ್ಲಾಸದ ಬಳಿಕದ ಅವಸ್ಥೆಯಲ್ಲಿ. ***ವೈ*** ಎಲ್ಲವೂ ನಿಶ್ಚಯವಾಗಿಯೂ ***ಸರ್ವಃ*** ಸರ್ವಾತ್ಮಕವಾಗಿ. ಇದರಿಂದ ಪರದೇವತೆಯ ವಿಷಯಿಕ ನಿರ್ವಿಕಲ್ಪವೃತ್ತಿಯನ್ನುಂಟುಮಾಡುವ ಅಂತರ್ಯಾಗವನ್ನು ವಿಧಿಯನ್ನು ವಿವರಿಸಲಾಗಿದೆ. ಈ ಆಶಯವನ್ನು ತಂತ್ರಗಳಲ್ಲಿ ಬಹುವಿಧವಾಗಿ ಪ್ರತಿಪಾದಿಸಲಾಗಿದೆ.

ರಮಂತೇ ಕಾಮುಕಾ ಮತ್ತಾ ಮತ್ತಃ ಕುಪ್ಯಂತಿ ಕೋಪಿನಃ ।
ಗಾಯಂತಿ ಗಾಯಕಾ ಮತ್ತಾ ಮತ್ತಾ ಧ್ಯಾಯಂತಿ ಯೋಗಿನಃ ॥ ಇತಿ ॥

ಅಂದರೆ ಯೋಗಿಗಳು ಬಾಹ್ಯವಸ್ತುಗಳ ಸಹಾಯವಿಲ್ಲದೇ ಆನಂದಿಸುತ್ತಾರೆ ಎಂದು. ***ಸರ್ವಸ್ಯ ಜಗತೋ*** ಮೂರು ಲೋಕಗಳನ್ನು. ***ವಿಧಾತಾ*** ಸೃಷ್ಟಿಸುವ ಬ್ರಹ್ಮ, ***ಭರ್ತಾ*** ಪಾಲಿಸುವ ವಿಷ್ಣು, ***ಹರ್ತಾ*** ಲಯಿಸುವ ರುದ್ರರು ದಾಸಭಾವದಿಂದ ಸರ್ವಾತ್ಮಕತೆಯಿಂದ ಲಭಿಸುವ ***ವಿಶ್ವರೂಪತ್ವಂ ಇತಿ*** ವಿಶ್ವರೂಪತ್ವವನ್ನು ಸೇವಿಸುತ್ತಾರೆ. ಶರೀರ ಪತನವಾದಾಗ ಪ್ರಾರಬ್ದಕರ್ಮಗಳಿಂದಾಗಿ ಪುನರ್ಜನ್ಮವಿರಬಹುದು, ಅವುಗಳು ನಾಶವಾಗಿದ್ದರೆ ಅದೂ ಇಲ್ಲ; ಸಂಚಿತಕರ್ಮಗಳು ಮೊದಲೇ ನಾಶವಾಗಿರುವುವು; ಕೃತಕೃತ್ಯತೆಯು ಲಭಿಸುವುದು ಎಂಬ ಭಾವ. 'ಇತ್ಥಂ ವಿದಿತ್ವಾ ವಿಧಿವದನುಷ್ಠಿತವತಃ ಕುಲನಿಷ್ಠಸ್ಯ ಸರ್ವತಃ ಕೃತಕೃತ್ಯತಾ ಶರೀರತ್ಯಾಗೇ ಶ್ವಪಚಗೃಹಕಾಶ್ಯೋರ್ನಾಂತರಂ ಸ ಜೀವನ್ಮುಕ್ತ' ಎಂದು ಕಲ್ಪಸೂತ್ರದಲ್ಲಿ ಹೇಳಿದೆ. [15]

इयं महोपनिषत् त्रिपुराया यामक्षरं परमे गीर्भिरीट्टे ।
एषर्ग्यजुः परमेतच्च सामेवाऽयमथर्वेयमन्या च विद्योम् ॥ १६ ॥
ಇಯಂ ಮಹೋಪನಿಷತ್ ತ್ರಿಪುರಾಯಾ ಯಾಮಕ್ಷರಂ ಪರಮೇ ಗೀರ್ಭಿರೀಟ್ಟೇ ।
ಏಷರ್ಗ್ಯಜುಃ ಪರಮೇತಚ್ಚ ಸಾಮೇವಾಽಯಮಥರ್ವೇಯಮನ್ಯಾ ಚ ವಿದ್ಯೋಮ್ ॥ 16 ॥

॥ इत्युपनिषत् ॥
॥ ಇತ್ಯುಪನಿಷತ್ ॥

ಈ ತ್ರಿಪುರಸಿದ್ಧಾಂತದ ವಿವರಣೆಯನ್ನು ಉಪಸಂಹರಿಸಿ, ಅದರ ಅಧ್ಯಯನದ ಫಲನಿರೂಪಣೆಯನ್ನು ಮಾಡಲಾಗಿದೆ. 'ಯ ಇಮಾಂ ದಶಮಖಂಡೀಂ ಮಹೋಪನಿಷದಂ ಮಹಾತ್ರೈಪುರಸಿದ್ಧಾಂತಸರ್ವಸ್ವಭೂತಾಮಧೀತೇ ಸರ್ವೇಷು ಯಜ್ಞೇಷು ಯಷ್ಟಾ ಭವತಿ ಯಂ ಯಂ ಕ್ರತುಮಧೀತೇ ತೇನ ತೇನಾಸ್ಯ ಕ್ರತುನೇಷ್ಟಂ ಭವತೀತಿ ಹಿ ಶ್ರೂಯತ ಇತ್ಯುಪನಿಷತ್ ಇತಿ ಶಿವಮ್ ॥' ಎಂದು ಕಲ್ಪಸೂತ್ರಗಳ ಕರ್ತೃವಾದ ಭಗವಾನ್ ಶ್ರೀಪರಶುರಾಮರು ಹೇಳಿದ್ದಾರೆ. ಅವರು ಇದನ್ನು ಮಹೋಪನಿಷತ್ತು, ಮುಖ್ಯವಾದ ಉಪನಿಷತ್ತು ಎಂಬುದನ್ನು ಸಮರ್ಥಿಸಿದ್ದಾರೆ. ಕಲ್ಪಸೂತ್ರಗಳ ಅಧಿಕರಣದಲ್ಲಿ ಶಾಖಾಭೇದದಿಂದ ಈ ಉಪಸಂಹಾರ ವಿಶೇಷಣವನ್ನು ಸಮರ್ಥಿಸಿದ್ದಾರೆ ಮತ್ತು ಪ್ರತ್ಯೇಕವಾದ ಪ್ರಯೋಗಶಾಖೆಯ ಪ್ರಮಾಣಗಳಿಂದ ಈ ಸಮರ್ಥನೆಯು ಸಿದ್ಧವಾಗುತ್ತದೆ. ***ಇಯಂ*** ಈ ತ್ರಿಪುರಸಿದ್ಧಾಂತದ ***ಮಹೋಪನಿಷತ್*** ರಹಸ್ಯವನ್ನು ಪ್ರತಿಪಾದಿಸುವ ವಾಕ್ಯಗಳನ್ನು ಹೊಂದಿ ಪಠನೀಯವಾಗಿರುವ. ಆ ಕಾರಣದಿಂದ ***ಪರಮಂ ಅಕ್ಷರಂ*** ಬ್ರಹ್ಮನಿಂದ ರಚಿತವಾದ ಅಕ್ಷರಗಳುಳ್ಳ, ವಾಕ್ಯಗಳುಳ್ಳ. ***ಗೀರ್ಭಿಃ*** ಸ್ತುತಿಸುವ ಮಾತುಗಳಿಂದ. ***ಈಟ್ಟೇ*** ಸ್ತುತಿಸುತ್ತೇನೆ. *ಈಡ* ಸ್ತುತಿಸಲ್ಪಡುವ ಎಂಬ ರೂಪವು. ***ಯಾಂ*** ಬ್ರಹ್ಮ. ಈ ಉಪನಿಷತ್ತಿನ ಕರ್ತೃ ಬ್ರಹ್ಮನೆಂಬ ಭಾವ. ಅಥವಾ ಹೃಲ್ಲೇಖಾಕ್ಷರ ರೂಪಿಣೀಯಾದ ತ್ರಿಪುರಾಳನ್ನು ಸ್ತುತಿಸುವೆನು ಎಂದೂ ಆಗಬಹುದು. ***ಪರಮೇ*** ಪರಂ ಏ ಎಂದು ಭೇದಿಸಿದರೆ, ಏಕಾರರೂಪದ ಅಕ್ಷರವನ್ನು ಹೊಂದಿದ.

ಯದೇಕಾದಶಮಾಧಾರಂ ಬೀಜಂ ಕೋಣತ್ರಯೋದ್ಭವಮ್ ।
ಬ್ರಹ್ಮಾಂಡಾದಿಕಟಾಹಾಂತಂ ಜಗದದ್ಯಾಪಿ ದೃಶ್ಯತೇ ॥

ಎಂಬ ವಚನದಂತೆ. ಏಕಾರವನ್ನು ಕೂಡ ಅ+ಈ ಎಂದು ಭೇದಿಸಬಹುದು. 'ಅಕಾರೋ ವೈ ಸರ್ವಾ ವಾಕ್', 'ಯದೀಂ ಶೃಣೋತ್ಯಲಕಂ ಶೃಣೋತಿ' ಎಂದು ಶ್ರುತಿಯಿದೆ. ಕೊನೆಯ ಓಂಕಾರವು ಅಕ್ಷರ ವಿಶೇಷವಾಗಿ

ಅನ್ವಯವಾಗುವುದು. ಅಂತಹ *ಗೀರ್ಭಿಃ* ಅಕಾರ ಉಕಾರ ಮಕಾರಗಳ ಶ್ರೇಷ್ಠವಾದ ಅಖಂಡರೂಪವನ್ನು ಸ್ತುತಿಸು ಎಂಬ ಅರ್ಥ. 'ಸಮಸ್ತಂ ವ್ಯಸ್ತಂ ವಾ ಶರಣದಗೃಣಾತ್ಯೋಮಿತಿ ಪದಂ' ಎಂದು ಶಿವರಹಸ್ಯದಲ್ಲಿ ಹೇಳಿದೆ. ***ಏಷ*** 'ಸ್ವಾಧ್ಯಾಯೋಽಧ್ಯೇತವ್ಯ' ವಿಧಿವಿಹಿತ ವಿವಿಧ ಅಧ್ಯಯನಗಳಂತೆ ಇದರ ಅಧ್ಯಯನವನ್ನು ಹೇಳಲು **ಏಷೇತಿ.** ಋಕ್ ಮೊದಲಾದ ಶಬ್ದಗಳು ವೇದ ಪರವಾಗಿದ್ದು ಒಂದೊಂದು ಮಂತ್ರಗಳ ಪರವಾಗಿಲ್ಲ. ***ಋಗ್, ಯಜುಃ, ಸಾಮ, ಅಥರ್ವ*** ವೇದಗಳಂತೆ ನಮಸ್ಕರಿಸಬೇಕಾದ ಮಂತ್ರಗಳುಳ್ಳ. ***ಅನ್ಯಾ ವಿದ್ಯಾ*** ಅಷ್ಟಾದಶವಿದ್ಯೆಗಳಲ್ಲಿ ನಾಲ್ಕನ್ನು ತಿಳಿಸಿ ಅನ್ಯಾ ಪದದಿಂದ ಉಳಿದ ಹದಿನಾಲ್ಕನ್ನು ಗ್ರಹಿಸಬೇಕು; ಈ ಉಪನಿಷತ್ತು ಎಲ್ಲಾ ವಿದ್ಯೆಗಳ ಸ್ವರೂಪ. ***ಓಮ್*** ಇದು ಪ್ರಣವ ಸ್ವರೂಪವಾಗಿದೆ. ಅದರ ಪರರೂಪದಿಂದ ಅಧ್ಯಯನಯೋಗ್ಯವೆಂಬ ಭಾವ. ಈ ಉಪನಿಷತ್ತು ಆ ರೀತಿಯಾಗಿರುವುದರಿಂದ ಇದರ ಮಹಿಮೆಯು ವೇದಗಳ ಮಹಿಮೆಯಂತೆ; ಇದು ಬ್ರಹ್ಮದೊಡನೆ ಏಕರೂಪವಾಗಿರುವುದರಿಂದ ಇದರ ಪಠನವನ್ನು ಶ್ರುತಿಗಳು ಸಮರ್ಥಿಸುತ್ತವೆ. ***ಇತ್ಯುಪನಿಷತ್*** ಸಮಾಪ್ತಿಯನ್ನು ಸೂಚಿಸುವುದು. ಇದರಿಂದ ಅಧಿಕವಾದ ರಹಸ್ಯಗಳನ್ನು ತಿಳಿಸಲು ವಿಷಯಗಳ ಅಭಾವವಿದೆ ಎಂಬ ಭಾವ. [16]

ಇತಿ ಭಾಸ್ಕರರಾಯೇಣಾಗ್ನಿಚಿತಾ ತ್ರಿಪುರಾಮಹೋಪನಿಷದೋಽರ್ಥಾಃ ।
ಪ್ರಕಟಯಿತುಮಯೋಗ್ಯಾ ಅಪಿ ವಿದುಷಾಂ ತೋಷಾಯ ಕತಿಪಯೇ ಕಥಿತಾಃ ॥

ಇತಿ ಶ್ರೀಮದ್ಭಾಸ್ಕರರಾಯಕೃತಂ ತ್ರಿಪುರೋಪನಿಷದ್ ಭಾಷ್ಯಂ ಸಂಪೂರ್ಣಮ್ ॥

ಓಂ ವಾಙ್ಮೇ ಮನಸಿ ಪ್ರತಿಷ್ಠಿತಾ । ಮನೋ ಮೇ ವಾಚಿ ಪ್ರತಿಷ್ಠಿತಮ್ ॥
ಆವಿರಾವೀರ್ಮ ಏಧಿ ॥ ವೇದಸ್ಯ ಮ ಆಣೀಸ್ಥಃ ಶ್ರುತಂ ಮೇ ಮಾ ಪ್ರಹಾಸೀಃ ॥
ಅನೇನಾಧೀತೇನಾಹೋರಾತ್ರಾನ್ ಸಂದಧಾಮಿ । ಋತಂ ವದಿಷ್ಯಾಮಿ । ಸತ್ಯಂ ವದಿಷ್ಯಾಮಿ ॥
ತನ್ಮಾಮವತು । ತದ್ವಕ್ತಾರಮವತು । ಅವತುಮಾಂ ಅವತುವಕ್ತಾರಮ್ ॥
ಓಂ ಶಾಂತಿಃ ಶಾಂತಿಃ ಶಾಂತಿಃ ॥

॥ ॐ तत् सत् ॥ ॐ ತತ್ ಸತ್॥

त्रिपुरोपनिषत्
ತ್ರಿಪುರೋಪನಿಷತ್

ಅಪ್ಪಯ್ಯದೀಕ್ಷಿತಕೃತ ಮಹೋಪನಿಷದ್ ಭಾಷ್ಯಮ್ ।

ಶ್ರೀರಸ್ತು । ಶ್ರೀರಾಮಕೃಷ್ಣಾಭ್ಯಾಂ ನಮಃ ।

ತ್ರಿಪುರೋಪನಿಷದ್ ಭಾಷ್ಯಮ್ ।

ಬ್ರಾಹ್ಮಣಾನಾಂ ತು ಯಾ ಪಾರಾಯಣಮಾತ್ರೋಪಯೋಗಿನೀ ।
ತ್ರಿಪುರೋಪನಿಷತ್ಸೇಯಂ ಸಮ್ಯಗ್ವ್ಯಾಖ್ಯಾಸ್ಯತೇಽಧುನಾ ॥ 1 ॥

ಈ ತ್ರಿಪುರೋಪನಿಷತ್ತು ಸಕಾಮರಾದ ಕ್ಷತ್ರಿಯಕರ್ತೃಗಳಿಗೆ ಕೌಲ, ಶಾಕ್ತ ಮಾರ್ಗಾನುಸಾರಿಯಾದ ಬಾಹ್ಯ ಆರಾಧನೆಗೆ ಪ್ರಧಾನವಾಗಿದೆ ಎಂದು ವರ್ಣಿಸಿದ್ದು, ಬ್ರಾಹ್ಮಣಕರ್ತೃಗಳಿಗೆ ಪಾರಾಯಣಮಾತ್ರಕ್ಕೆ ಉಪಯುಕ್ತವಾಗಿದೆ. ವೇದೋಕ್ತ ಅಶ್ವಮೇಧಪ್ರಕರಣದಲ್ಲಿ ಬ್ರಾಹ್ಮಣರಿಗೆ ಪಾರಾಯಣಕ್ಕೆ ಮಾತ್ರ ಯೋಗ್ಯವಾಗಿದೆ ಎಂದಿರುವುದು. ಯಾಕೆ? ಸುರಾಪಾನ ಮುಂತಾದವುಗಳು ಇದರಲ್ಲಿ ವಿಹಿತವಾಗಿರುವುದರಿಂದ. 'ಬ್ರಾಹ್ಮಣೋ ನ ಸುರಾಂ ಪಿಬೇತ್ । ನ ಕಲಂಜಂ ಭಕ್ಷಯೇತ್' ಎಂದು ಸುರಾಪಾನಾದಿಗಳು ಸುತರಾಂ ಪ್ರತಿಬಂಧಿತವಾಗಿದೆ. ಕ್ಷತ್ರಿಯರಾದರೋ ಅದು ದೇವೀಪ್ರಸಾದ ಎಂಬ ಬುದ್ಧಿಯಿಂದ ಪಾನಮಾಡಿ ಯುದ್ಧ ಮೊದಲಾದ ಪ್ರವೃತ್ತಿಗಳಲ್ಲಿ ತೊಡಗುವುದರಿಂದ ಅವರಿಗೆ ಪ್ರತಿಷೇಧವಿಲ್ಲ. ಗುರುಜ್ಞಾನದ ವಾಸಿಷ್ಠೋಪಾಸನಾಕಾಂಡದಲ್ಲಿ ತಂತ್ರಾನುಸಾರಿಯಾದ ಬಾಹ್ಯಶಕ್ತಿಯ ಪೂಜೆಗೆ ಬ್ರಾಹ್ಮಣರು ಸರ್ವಥಾ ಅನರ್ಹರಾಗಿದ್ದು, ಅದು ಕ್ಷತ್ರಿಯರಿಗೆ ಮಾತ್ರ ಎಂದು ಹೇಳಿರುವಂತೆ, ಬಹುಶಃ ಈ ನಿಷೇಧವಿರಬಹುದು. ಕ್ಷತ್ರಿಯರು ಮಾತ್ರವಲ್ಲದೆ ಸುರಾಪಾನವು ಅನಿಂದ್ಯವಾಗಿರುವ ಇತರ ವರ್ಣದವರು ಯಾ ಸಂಕರವರ್ಣದವರಿಗೆ ಇದರ ಉಪಾಸನೆಯ ಅರ್ಹತೆಯಿದೆ ಎಂದು ತಿಳಿಯುವುದು. ಬ್ರಾಹ್ಮಣರ ವೇದಾಧಿಕಾರದಿಂದಾಗಿ ತಾಂತ್ರಿಕ ಉಪಾಸನೆಗೆ ಪ್ರತಿಷೇಧವಿದೆ. ಸೌತ್ರಾಮಣಿ, ವಾಜಪೇಯ, ಪೌಂಡರೀಕ ಮೊದಲಾದ ಯಾಗಗಳಲ್ಲಿ ಮಧು, ಮಾಂಸ, ಸ್ತ್ರೀವಿಷಯಭೋಗ ಮುಂತಾದವುಗಳ ವಿಧಿಗಳನ್ನು ಹೇಳಿರುವುದರಿಂದ, ಬ್ರಾಹ್ಮಣರಿಗೆ ಅವುಗಳಲ್ಲಿ ಅಧಿಕಾರವು ಇಲ್ಲವಾಗಿರಬಹುದು. 'ಯದಘ್ರಾಣಭಕ್ಷ' ಎಂಬ ಭಾಗವತದ ವಚನದಿಂದ ನಿಷಿದ್ಧ ವಸ್ತುಗಳ ಆಘ್ರಾಣವು ಅವುಗಳ ಭಕ್ಷಣೆಗೆ ಸಮನಾಗಿರುವುದು. ಅವುಗಳ ಅಭಾವದಿಂದ ಕರ್ಮಲೋಪವಾಗಿ, ಆಘ್ರಾಣಜನಿತ ಪಾಪವು ಅವರಿಗೆ ಉಂಟಾಗುವುದು ಎಂದು ಶಂಕಿಸಬಹುದು. ಶ್ರುತಿ, ಪುರಾಣಗಳಿಗೆ ವಿಹಿತವಾದ ಕರ್ಮಗಳಿಂದ ಪಾಪಗಳ ಪ್ರಸಕ್ತಿಯುಂಟಾಗುವುದಿಲ್ಲ. ನಿಷ್ಕಾಮರಿಗಾದರೋ ಇಂತಹ ಉಪಾಸನೆಯೂ ಮತ್ತು ಅದರ ಕರ್ಮಗಳೂ ಸರ್ವಥಾ ಅನುಷ್ಠಾನಯೋಗ್ಯವಲ್ಲ, 'ಆಸು ನಿವೃತ್ತಿರಿಷ್ಟಾ' ಎಂದು ಭಾಗವತದಲ್ಲಿ ಹಾಗೆ ಹೇಳಿರುವಂತೆ. ಮಹತ್ತಾದ ದೇವತೆಗಳಿಗೆ ಅವುಗಳ ಪ್ರೋಕ್ಷಣೆ ಮುಂತಾಗಿ ನೈವೇದ್ಯ ಮಾಡುವುದರಿಂದ ಸುಕೃತಿಗಳಿಗೆ ಸಿದ್ಧಿಲಾಭವಾಗುವುದು ಎಂದು ಹೇಳಿರುವುದರಿಂದ ಅವುಗಳ ಪಾನ ಮುಂತಾದವುಗಳನ್ನು ಮಾಡಬೇಕೆಂದು ಹೇಳಿರುವುದು ಅಲ್ಲ. ತನ್ನ ಉಪಾಸ್ಯ ದೇವತೆಗೆ ನಿವೇದಿಸಲು ಉಪಯೋಗಿಸಿರುವ ಎಲ್ಲಾ ಪದಾರ್ಥಗಳನ್ನು ಉಪಾಸಕರು ಪ್ರಸಾದಬುದ್ಧಿಯಿಂದ ಪರಿಗ್ರಹಿಸಬಹುದು ಎಂಬುದು ಲೋಕಪ್ರಸಿದ್ಧವಾಗಿದೆ. 'ಪರಿಸ್ರುತಾ ತರ್ಪಯಂತಃ ಸ್ವಪೀಠಮ್' ಎನ್ನುವಾಗ ಸ್ವಪೀಠಂ ಅಂದರೆ ಕಾಮಪೀಠವು ಮೂಲಾಧಾರಾತ್ಮಕವಾಗಿದೆ ಎಂಬುದು ಪ್ರಸಿದ್ಧವು. ಅದರ ತರ್ಪಣವನ್ನು ಪಾನಮಾಡುವುದು ಉತ್ತಮವಲ್ಲ.

ಸ್ವಾತ್ಮೀಕೃತ ಎಂಬ ಶಬ್ದವು ಉಪಾಸಕನಿಗೆ ತನ್ನ ಉಪಯೋಗಾರ್ಥವಾಗಿ ಎಂಬ ಅರ್ಥದಲ್ಲಿಯೂ ಇರುವುದಿಲ್ಲ. ಸ್ವಾತ್ಮಾರ್ಥಂ ಕರೋತಿ ಇತಿ ಕೃತ್ ತಸ್ಯೈ ದೇವತಾಯೈ ಎಂದು ಅದು ದೇವತಾವಿಶೇಷಣವಾಗಿರುವುದು. ಇನ್ನು ಭಗವಾನ್ ವಿಷ್ಣುಃ, ಕಾಮೇಶ ಪರಶಿವ ಅವರ ಅಜರಾ ಶಕ್ತಿಗಳು ಅಂದರೆ ವಿಶ್ವಮಾಯೆ ಎಂಬ ಅರ್ಥವು. ಅವಳೇ ವಿಶ್ವಮಾತೆ, ಆದಿವಿದ್ಯೆ ಎಂಬ ನಾಮಧೇಯಗಳ ಹೊಗಳಿಕೆಯಿಂದ ಸ್ತುತಿಸಲ್ಪಟ್ಟು *ಅಮೃತತ್ವಂ ಭಜಂತ* ಎಂಬುದರಿಂದ ಕೇವಲ ಕಾವ್ಯ ಪ್ರಯೋಜನಕ್ಕೆ ಮಾತ್ರವಲ್ಲದೆ ಮೋಕ್ಷಪ್ರಾಪ್ತಿಯ ಕಾರಣಳಾಗಿರುವಳು ಎಂಬ ಅರ್ಥವಾಗುವುದು. *ಪರಿಸ್ರುತಾ ಹವಿಷಾ ಪಾವಿತೇನ* ಎಂಬುದು ಮೊದಲು ಹೇಳಿದಂತೆ ಸಕಾಮ ಉಪಾಸಕರ ಉಪಾಸ್ಯದೇವತೆಯ ಉಪಾಸನಾವಿಧಿಯನ್ನು ತಿಳಿಸುವುದು ಮಾತ್ರವಾಗಿ ಮೋಕ್ಷಪ್ರಯೋಜನ ವಾಚಕವಾಗಿ ಅಲ್ಲ. ಅಥವಾ ಮೋಕ್ಷಪ್ರಯೋಜನ ವರ್ಜಿತರಿಗೆ ಉಪನಿಷತ್ತಿನ ಫಲವು ಹೇಗೆ ಲಭಿಸುವುದು ಎಂದು ತಿಳಿಸಲು ಸಗುಣ–ನಿರ್ಗುಣ ಎಂಬ ಉಭಯ ಬ್ರಹ್ಮವಿದ್ಯೆಗಳ ವಿಧವನ್ನು ತಿಳಿಸುವುದಾಗಿರುವುದು. *ಏಷರ್ಗ್ಯಜುಃ* ಮೊದಲಾಗಿ ಚತುರ್ವೇದಮಯೀ ಸಗುಣಬ್ರಹ್ಮವನ್ನು ತಿಳಿಸಿ, ಇತರ ವಿದ್ಯೆಗಳಿಂದ ನಿರ್ಗುಣಬ್ರಹ್ಮಮಯೀಯನ್ನು ಪ್ರಕಟಿಸಿದೆ. ಹಾಗಾಗಿ ಶುದ್ಧಾಚಾರವುಳ್ಳ ಸದ್ಬ್ರಾಹ್ಮಣರು ನಿರ್ಗುಣಬ್ರಹ್ಮಪರತೆಯನ್ನು ಇತರ ಶ್ರುತಿಗಳಲ್ಲಿ ಹೇಳಿರುವ ಪ್ರಕಾರದ ಧ್ಯಾನ, ಸಮಾಧಿ ಯೋಗ್ಯ ಉಪಾಯಗಳಿಂದ ಅನುಷ್ಠಾನಿಸುವುದರಿಂದ ಸಂಸಾರಬಂಧನದಿಂದ ಮುಕ್ತಿಯು ದೊರೆಯುವುದು; ಇಲ್ಲಿ ತಿಳಿಸಿರುವ ಪ್ರಕಾರದ ಪರಿಸ್ರುತಾ ಮೊದಲಾದ ನಿವೇದನೆಗಳಿಂದ ಅಲ್ಲ.

ಇತಿ ಸುಂದರೇಶ್ವರತಾತಪಾದಶಿಷ್ಯ ಅಪ್ಪಯ್ಯದೀಕ್ಷಿತಾಚಾರ್ಯವಿರಚಿತೋಪನಿಷದ್ಭಾಷ್ಯೇ ತ್ರಿಪುರೋಪನಿಷದ್ಭಾಷ್ಯಮ್ ।

॥ ॐ तत् सत् ॥ ॐ ತತ್ ಸತ್॥

श्रीकौलोपनिषत्

(भास्करराय भाष्य समेता)

ಶ್ರೀಕೌಲೋಪನಿಷತ್

(ಭಾಸ್ಕರರಾಯ ಭಾಷ್ಯ ಸಮೇತಾ)

ಶಾಂತಿಪಾಠಃ

ओं शन्नः कौलिकः शन्नो वारुणी शन्नश्शुद्धिः शन्नोऽग्निश्शन्नसर्वं समभवत् ॥
नमो ब्रह्मणे नमः पृथिव्यै नमोऽद्भ्यो नमोऽग्नये नमो वायवे नमो गुरुभ्यः ।
त्वमेव प्रत्यक्षं सैवासि । त्वामेव प्रत्यक्षं तां वदिष्यामि । ऋतं वदिष्यामि ।
सत्यं वदिष्यामि । तन्मामवतु । तद्वक्तारमवतु । अवतु मां अवतु वक्तारम् ॥
ओं शान्तिः शान्तिः शान्तिः ॥

ಓಂ ಶನ್ನಃ ಕೌಲಿಕಃ ಶನ್ನೋ ವಾರುಣೀ ಶನ್ನಶ್ಶುದ್ಧಿಃ ಶನ್ನೋಽಗ್ನಿಶ್ಶನ್ನಸ್ಸರ್ವಂ ಸಮಭವತ್ ॥ ನಮೋ ಬ್ರಹ್ಮಣೇ ನಮಃ ಪೃಥಿವ್ಯೈ ನಮೋಽದ್ಭ್ಯೋ ನಮೋಽಗ್ನಯೇ ನಮೋ ವಾಯವೇ ನಮೋ ಗುರುಭ್ಯಃ । ತ್ವಮೇವ ಪ್ರತ್ಯಕ್ಷಂ ಸೈವಾಸಿ । ತ್ವಾಮೇವ ಪ್ರತ್ಯಕ್ಷಂ ತಾಂ ವದಿಷ್ಯಾಮಿ । ಋತಂ ವದಿಷ್ಯಾಮಿ । ಸತ್ಯಂ ವದಿಷ್ಯಾಮಿ । ತನ್ಮಾಮವತು । ತದ್ವಕ್ತಾರಮವತು । ಅವತು ಮಾಂ ಅವತು ವಕ್ತಾರಮ್ । ಓಂ ಶಾಂತಿಃ ಶಾಂತಿಃ ಶಾಂತಿಃ ॥

॥ ಶ್ರೀಃ ॥

॥ಕೌಲೋಪನಿಷದ್ಭಾಷ್ಯಮ್ ॥

। ಶ್ರೀ ಗುರುಭ್ಯೋ ನಮಃ ।

ಶ್ರೀಗುರುಚರಣಾಬ್ಜಕಿರಣವಿಸರಣನಿರ್ಧೂತಹೃದ್ಗತಾವರಣಃ ಭಾಸ್ಕರರಾಯಃ
ಕೌಲೋಪನಿಷದಮಾಥರ್ವಣೀಂ ವಿಕಾಸಯತಿ ।

ರಹಸ್ಯಾರ್ಥದ ವಿವರಣೆಯಲ್ಲಿ ಕಂಡುಬರುವ ಆವಶ್ಯಕವಾದ ಭಾವಗಳಿಗೆ ಬಂದೆರಗುವ ವಿಘ್ನಗಳನ್ನು ದೂರೀಕರಿಸಲು ಮಾಡುವ ದೇವತಾಪ್ರಾರ್ಥನೆಯಿದು. ***ಕೌಲಿಕಃ*** ಕುಲಮಾರ್ಗ ಪ್ರವರ್ತಕ, ಪರಶಿವ. ***ಶಂ*** ವಿಘ್ನನಿರಾಕರಣೆಯಿಂದ ಸ್ವಾತ್ಮಾನಂದವನ್ನು ನೀಡುವ. ***ನಃ*** ಆತ್ಮ ಸಂಬಂಧಿ. ***ಸಮಭವತ್*** ಆಗಲಿ. ***ವಾರುಣೀ***

ಪ್ರಥಮ ಅಭಿಮಾನಿನೀ ಮಹತೀ ದೇವತೆ. ***ಶುದ್ಧಿಃ*** ದ್ವಿತೀಯ ಅಭಿಮಾನಿನೀ ದೇವತೆ. ***ಅಗ್ನಿಃ*** ತೇಜ. ***ಸರ್ವಂ*** ಎಲ್ಲರಿಗೂ ಸುಖಕರವಾಗಲಿ.

ಪರಮಶಿವನಿಂದ ಆರಂಭವಾಗಿ ಸ್ವಗುರುವಿನವರೆಗೆ ಎಲ್ಲರಿಗೂ ನಮಸ್ಕಾರಗಳು. *ಬ್ರಹ್ಮಣೇ* ಪರಬ್ರಹ್ಮ. ಬಳಿಕ ಪೃಥಿವ್ಯಾದಿ ಭೂತ ಚತುಷ್ಟಯದೇವತೆಗಳು. ಆಕಾಶತತ್ತ್ವವನ್ನು ಗುರುವಿನೊಡನೆ ಸಮೀಕರಿಸಿದೆ. *ತ್ವಮೇವ ಪ್ರತ್ಯಕ್ಷಂ* ಎಲ್ಲರ ಅನುಭವಕ್ಕೆ ಬರುವ ಬ್ರಹ್ಮತತ್ತ್ವವು ನೀನೇ. *ವದಿಷ್ಯಾಮಿ* ನಾನು ಹೇಳುತ್ತೇನೆ, ತ್ರಿಪುರಸುಂದರೀರೂಪದ ಕೌಲೋಪನಿಷತ್ತಿನ ಕುರಿತು ನೀನು ಬ್ರಹ್ಮನಿಂದ ಭಿನ್ನವಲ್ಲ ಎಂದು. *ಋತಂ, ಸತ್ಯಂ* ಎರಡು ಶಬ್ದಗಳೂ ಒಂದೇ ಅರ್ಥವನ್ನು ತಿಳಿಸಿದರೂ, ಋತಂ ಬ್ರಹ್ಮಪರವಾಗಿದೆ, ಸತ್ಯಂ ಲೌಕಿಕ ಅರ್ಥದಲ್ಲಿದೆ. ಅದು ಕಲಿಯುವ ನನ್ನನ್ನು ರಕ್ಷಿಸಲಿ, ಅದನ್ನು ಕಲಿಸುವ ಗುರುಗಳನ್ನು ರಕ್ಷಿಸಲಿ, ಅದನ್ನು ಹೇಳುವವರನ್ನು, ಪ್ರಚಾರಮಾಡುವವರನ್ನು ರಕ್ಷಿಸಲಿ. ವಿಘ್ನಗಳು ಶಾಂತವಾಗಲಿ.

> अथातो धर्मजिज्ञासा ।
> ज्ञानं बुद्धिश्च ज्ञानं मोक्षैककारणं मोक्षस्सर्वात्मतासिद्धिः ।
> पञ्च विषयाः प्रपञ्चः । तेषां ज्ञानिस्वरूपाः । योगो मोक्षः ॥
> ಅಥಾತೋ ಧರ್ಮಜಿಜ್ಞಾಸಾ ।
> ಜ್ಞಾನಂ ಬುದ್ಧಿಶ್ಚ । ಜ್ಞಾನಂ ಮೋಕ್ಷೈಕಕಾರಣಮ್ । ಮೋಕ್ಷಸ್ಸರ್ವಾತ್ಮತಾಸಿದ್ಧಿಃ ।
> ಪಂಚ ವಿಷಯಾಃ ಪ್ರಪಂಚಃ । ತೇಷಾಂ ಜ್ಞಾನಸ್ವರೂಪಾಃ । ಯೋಗೋ ಮೋಕ್ಷಃ ॥

ಅಥ ಇನ್ನುಮುಂದೆ, ಬ್ರಹ್ಮಜಿಜ್ಞಾಸೆಯ ನಂತರ. ***ಧರ್ಮಜಿಜ್ಞಾಸಾ*** ಧರ್ಮಜ್ಞಾನವನ್ನು ತಿಳಿಯಲು, ಧರ್ಮದ ವಿಮರ್ಶಾಶಕ್ತಿಯ ಜ್ಞಾನದ ವಿಚಾರವನ್ನು ಮಾಡುವ. ***ಜ್ಞಾನಂ ಬುದ್ಧಿಶ್ಚ*** ಬ್ರಹ್ಮದ ಕುರಿತಾದ ಪರೋಕ್ಷ ಅನುಭವಗಳ ಜ್ಞಾನ, ಪರೋಕ್ಷಜ್ಞಾನ, ಬುದ್ಧಿ. ನಮ್ಮ ಎಲ್ಲಾ ಅನುಭವಗಳಲ್ಲಿ ಬುದ್ಧಿತತ್ತ್ವವು ಕಾರ್ಯಪ್ರವೃತ್ತವಾಗಿರುತ್ತದೆ. ಎರಡು ವಿದ್ಯೆಗಳಲ್ಲಿ ವ್ಯವಹರಿಸುವಾಗ ಎರಡರಲ್ಲಿರುವ ಧರ್ಮರೂಪಗಳನ್ನು ಹೋಲಿಸುವ ಬುದ್ಧಿ. ಚಕಾರದಿಂದ ಚೈತನ್ಯಾದಿ ಧರ್ಮಗಳು ಹೇಳಲ್ಪಡುತ್ತವೆ; ಇದನ್ನು ನಾಗಾನಂದ ಮುಂತಾದವರು ಪರಿಗ್ರಹಿಸಿದ್ದಾರೆ. ಜ್ಞಾನವು ಮೋಕ್ಷಕಾರಣವು. ***ಮೋಕ್ಷಃ ಸರ್ವಾತ್ಮತಾಸಿದ್ಧಿಃ*** ಎಲ್ಲರಲ್ಲಿಯೂ ಸ್ವಾತ್ಮ ಅಭೇದದಿಂದ ಇರುವ ಸರ್ವಾತ್ಮಕತೆಯಿಂದ ಲಭಿಸುವ ಸಿದ್ಧಿಯ ವಿಷಯಜ್ಞಾನವು ಮೋಕ್ಷ. 'ಸರ್ವಂ ಖಲ್ವಿದಮೇವಾಹಂ ನಾನ್ಯದಸ್ತಿ ಸನಾತನಂ' ಎಂದು ದೇವೀಭಾಗವತದಲ್ಲಿ ಹೇಳಿದೆ. ***ಪಂಚ ವಿಷಯಾಃ ಪ್ರಪಂಚಃ*** ಅಂತಹ ಜ್ಞಾನದಿಂದ ಜನಿಸುವ ಅಖಂಡವೃತ್ತಿಯ ಪಂಚವಿಷಯಾತ್ಮಕ ಪ್ರಪಂಚ. ಶಬ್ದಾದಿ ವಿಷಯಪಂಚಕಗಳು ಪ್ರಪಂಚವೆಂದು ಕರೆಯಲ್ಪಡುತ್ತವೆ. ಅವುಗಳ ಸೂಕ್ಷ್ಮಭೂತ ಸ್ಥೂಲಭೂತಗಳು ಅಭೇದತೆಯಿಂದ ಮೂವತ್ತಾರು ತತ್ತ್ವಗಳಲ್ಲಿ ಅಂತರ್ಗತವಾಗಿ ಎಲ್ಲೆಡೆಯೂ ಪಂಚಭೂತಗಳೇ ಕಾಣಸಿಗುತ್ತವೆ; ಆರನೆಯದು ಕಂಡುಬರುವುದಿಲ್ಲ. 'ಸರ್ವತ್ರ ಪಂಚ ಭೂತಾನಿ ಷಷ್ಠಂ ಕಿಂಚನ್ನ ವಿದ್ಯತೇ' ಎಂದು ವಾಸಿಷ್ಠವು ಹೇಳುತ್ತದೆ. ***ತೇಷಾಂ ಜ್ಞಾನಸ್ವರೂಪಾಃ*** ಅವುಗಳ ಜ್ಞಾನಸ್ವರೂಪವು ಜಡವೂ, ಚೇತನವೂ ಆಗಿರುವುದು. ವಿಷಯವನ್ನು ಅರಿಯುವುದು ಪ್ರಾಣಿಯು, ಅದರ ಸ್ವರೂಪವು ಜೀವ. ***ಯೋಗೋ ಮೋಕ್ಷಃ*** ಯೋಗವು ವೃತ್ತಿನಿರೋಧಕತೆಯಿಂದ ಮೋಕ್ಷವನ್ನು ನೀಡುತ್ತದೆ.

अधर्मकारणाज्ञानमेव ज्ञानम् ॥

ಅಧರ್ಮಕಾರಣಾಜ್ಞಾನಮೇವ ಜ್ಞಾನಮ್ ॥

ಧರ್ಮರಹಿತತ್ವವು ಅಧರ್ಮ. ಪರಂಬ್ರಹ್ಮನ ಕುರಿತಾದ ಕಾರಣ ಅಜ್ಞಾನವು, ಅದರ ವಿಷಯಕವಾದ ಮೂಲ ಅಜ್ಞಾನವು ಜ್ಞಾನದಿಂದ ಭಿನ್ನವಾಗಿದ್ದು ವಿಷಯಸುಖಿಗಳಾದ ಜೀವರಿಗೆ ಅವಿದ್ಯೆಯಿಂದ ಮುಕ್ತಿದೊರಕಿಸುವ ಜ್ಞಾನವು ಯೋಗಶಕ್ತಿಯಿಂದ ಅಭಿನ್ನವಾಗಿದೆ. ಭೇದವು ಮಿಥ್ಯಾವಾದ ಎಂಬ ಭಾವ.

प्रपञ्च एवेश्वरः ॥ अनित्यं नित्यम् ॥

ಪ್ರಪಂಚ ಏವೇಶ್ವರಃ ॥ ಅನಿತ್ಯಂ ನಿತ್ಯಮ್ ॥

ಪ್ರಪಂಚ ಈಶ್ವರ ಭೇದವು ನಿಯಮ–ನಿಯಾಮಕಭಾವದಿಂದ ವ್ಯಾಪಕವಾಗಿ ವಿರುದ್ಧ ಉಪಲಬ್ಧಿಗಳನ್ನು ನೀಡುವುದರಿಂದ ಅದು ಮಿಥ್ಯೆಯಾಗಿದೆ. ಅನಿತ್ಯವಾಗಿ ಭಾಸವಾಗುವ ಘಟಾದಿಗಳು ನಿತ್ಯಶಕ್ತಿಯ ರೂಪಗಳು.

अज्ञानं ज्ञानम् ॥

ಅಜ್ಞಾನಂ ಜ್ಞಾನಮ್ ॥

ಅವಸ್ಥಾರೂಪದ ಅಜ್ಞಾನವು ಜ್ಞಾನರೂಪದ ಶಕ್ತಿಯಾಗಿದೆ.

अधर्म एव धर्मः ॥

ಅಧರ್ಮ ಏವ ಧರ್ಮಃ ॥

ಶಕ್ತಿರೂಪದ ಧರ್ಮವು ಪದಾರ್ಥ ಸಂಬಂಧಿಯಾಗಿಲ್ಲ ಆದರೆ ಧರ್ಮಾಧಾರವು ಧರ್ಮೀರೂಪದ ಬ್ರಹ್ಮವಾಗಿದೆ.

एष मोक्षः ॥

ಏಷ ಮೋಕ್ಷಃ ॥

ಈ ದಾರಿಯು ಮೋಕ್ಷದ್ದಾಗಿದೆ, ಬೇರೆ ಏನೂ ಅಲ್ಲ.

पञ्चबन्धा ज्ञानस्वरूपाः ॥

ಪಂಚಬಂಧಾ ಜ್ಞಾನಸ್ವರೂಪಾಃ ॥

ಅನಾತ್ಮವಸ್ತುಗಳಲ್ಲಿ ಆತ್ಮಬುದ್ಧಿ ಮತ್ತು ಆತ್ಮನಲ್ಲಿ ಅನಾತ್ಮಬುದ್ಧಿ ಮುಂತಾದ ಜ್ಞಾನಗಳು ಬಂಧನ ರೂಪವಾಗಿವೆ. 'ಜ್ಞಾನಂ ಬಂಧಃ' ಎಂದು ಶಿವಸೂತ್ರವು ಹೇಳುತ್ತದೆ. ಜೀವಾತ್ಮರಲ್ಲಿ ಪರಸ್ಪರ ಭೇದ, ಜೀವಾತ್ಮ ಪರಮಾತ್ಮ ಭೇದ ಮತ್ತು ಜೀವಾತ್ಮ ಚೈತನ್ಯದ ಭೇದ ಈ ಮೂರು ಜ್ಞಾನಗಳು ಸೇರಿ ಬಂಧನಗಳು ಐದಾಗುವುವು.

पिण्डाज्जननम् ॥

ಪಿಂಡಾಜ್ಜನನಮ್ ॥

ಈ ರೀತಿಯ ಬಂಧನದ ಭಾವನೆಯಿಂದ ಪಿಂಡಾಂಡಸಂಬಂಧದ ರೂಪವು ಜನಿಸುವುದು.

तत्रैव मोक्षः ॥

ತತ್ರೈವ ಮೋಕ್ಷಃ ॥

ಕೌಲಜ್ಞಾನಮಹಿಮೆಯ ಮೋಕ್ಷವು ಪಿಂಡಾಂಡದಲ್ಲಿಯೇ ಲಭಿಸುವುದು. ನೂರಾರು ನಾಡಿಗಳಲ್ಲಿ ಮೇಲೇರಿ, ದೇವಯಾನದ ಗತಿಯನ್ನು ಪಡೆದು ಬ್ರಹ್ಮನೊಡನೆ ಐಕ್ಯರೂಪದ ಮುಕ್ತಿಯು ವಿಳಂಬವಾಗುವುದು. ಪಿಂಡಾಂಡ ಸಂಬಂಧಿ ರೂಪಕ್ಕೆ ಕೌಲಮುಕ್ತಿಯೇ ಉತ್ತಮವಾದುದು, 'ತಸ್ಯ ತಾವದೇವ ಚಿರಂ', 'ನ ತಸ್ಯ ಪ್ರಾಣಾ ಉತ್ಕ್ರಮಂತಿ' ಮುಂತಾದ ಶ್ರುತಿಗಳಂತೆ.

एतत् ज्ञानम् ॥

ಏತತ್ ಜ್ಞಾನಮ್ ॥

ಇದು ಜ್ಞಾನವಾಗಿದೆ. ಪ್ರಥಮವಾದ ಜ್ಞಾನದ ನಿಷ್ಕರ್ಷೆಮಾಡುವ 'ಜ್ಞಾನವೇ ಸರ್ವಸ್ವ' ಎಂಬ ಶಾಸ್ತ್ರಸಿದ್ಧಾಂತವನ್ನು ಇಲ್ಲಿ ಹೇಳಿದೆ.

सर्वेन्द्रियाणां नयनं प्रधानम् ॥

ಸರ್ವೇಂದ್ರಿಯಾಣಾಂ ನಯನಂ ಪ್ರಧಾನಮ್ ॥

ನಯನವು ಬ್ರಹ್ಮದ ಪರವಾಗಿದೆ. ಆರು ಇಂದ್ರಿಯಗಳಿಂದ (ಮನಸು ಸೇರಿ) ಜನಿಸುವ ಪ್ರತ್ಯಾತ್ಮಕ ಜ್ಞಾನವು, 'ನಾನು ಇದು' ಎಂದು ತಿಳಿಯುವ ಪ್ರಕಾರದಿಂದ ನನ್ನಲ್ಲಿ ಭಾಸವಾಗುವ ಬ್ರಹ್ಮವು ಪ್ರಧಾನವಾದುದು. ಅಲ್ಲಿ ಭಾಸವಾಗುವ ಎಲ್ಲವನ್ನೂ ಶ್ರುತಿಗಳಲ್ಲಿ ಮತ್ತು ಇತರ ಗ್ರಂಥಗಳಲ್ಲಿ ಅನುಭವಕ್ಕೆ ಬರುವಂತಹದೆಂದು ಹೇಳಿದೆ. ಈ ರೀತಿಯ ವಿವೇಚನೆಯು ಎಲ್ಲಾ ವೃತ್ತಿಗಳಲ್ಲಿಯೂ ಯಥಾವತ್ತಾಗಿದೆ. ಒಂದು ಇಂದ್ರಿಯದಿಂದ ದೊರೆಯುವ ಜ್ಞಾನವು ವಿವೇಚನೆಯ ಬಳಿಕ ಪ್ರಾಧಾನ್ಯತೆಯನ್ನು ಪಡೆಯಬಹುದು. ಗ್ರಾಹ್ಯ ಗ್ರಾಹಕ ಸಂಬಂಧವು ಎಲ್ಲಾ ಜೀವಿಗಳಿಗೂ ಸಾಮಾನ್ಯವಾಗಿದೆ. ವಿಶೇಷವಾಗಿ ಸಂಬಂಧವನ್ನು ಸಾಮಾನ್ಯವಾಗಿಸಲು ಸಾವಧಾನತೆಯಿಂದಿರಬೇಕು. ಈ ವಚನದಲ್ಲಿ ಅವಿವೇಚನೆಯ ಅಭಾವವು ಜ್ಞಾನದ ಸರ್ವಸ್ವವೆಂದು ಹೇಳಿದೆ.

धर्मविरुद्धाः कार्याः ॥

ಧರ್ಮವಿರುದ್ಧಾಃ ಕಾರ್ಯಾಃ ॥

ಇಲ್ಲಿ ಉಪಾಸಕನ ಕರ್ತವ್ಯಪ್ರಕಾರಗಳನ್ನು ಹೇಳಿದೆ. ವಿವೇಚಕ ಜ್ಞಾನವನ್ನು ಆಧಾರವಾಗಿಸಿಕೊಂಡವರು ಚಿತ್ತಸ್ಥೈರ್ಯವನ್ನು ಗಳಿಸಿ ಕರ್ಮಕಾಲದಲ್ಲಿ ಅರಿವಿನಿಂದ ಧರ್ಮಶಾಸ್ತ್ರವಿರುದ್ಧ ಕಾರ್ಯಗಳನ್ನು ವಿರೋಧಿಸಬೇಕು.

धर्मविहितानकार्याः ॥

ಧರ್ಮವಿಹಿತಾನಕಾರ್ಯಾಃ ॥

ಧರ್ಮಶಾಸ್ತ್ರವಿಹಿತ ಕಾರ್ಯ ಜ್ಯೋತಿಷ್ಟೋಮಾ ಮುಂತಾದವುಗಳು. ಆಧಾರರಹಿತವಾದುವುಗಳನ್ನು ವಿರೋಧಿಸುವುದು ಯುಕ್ತ. ಕರಣ–ಅಕರಣಗಳ ಜ್ಞಾನವಿದ್ದುಕೊಂಡು ಆಚರಿಸಬೇಕಾದ ವಿಧಿನಿಷೇಧಗಳು. ನಲುವತ್ತು ಸಂಸ್ಕಾರಗಳ ಬಾಹ್ಯಾನುಷ್ಠಾನದ ಮೊದಲು ಆಂತರಿಕ ಅನುಷ್ಠಾನದಲ್ಲಿ ಆಂತರ್ಶುದ್ಧಿಯನ್ನು ಆಚರಿಸಿ ಬಳಿಕ ಬಹಿರಂಗಕ್ರಿಯೆಗಳು ಆವಶ್ಯಕವೆಂದು ಗೌತಮನು ಹೇಳುತ್ತಾನೆ.

सर्वं शाम्भवीरूपम् ॥

ಸರ್ವಂ ಶಾಂಭವೀರೂಪಮ್ ॥

ವಿಹಿತ ಮತ್ತು ನಿಷಿದ್ಧ ಆಚರಣೆಗಳು ಎಲ್ಲವೂ ತ್ರಿಪುರಸುಂದರಿಯ ಭಾವನೆಗಳ ವಿಶೇಷಣಗಳು. ಈ ಭಾವನೆಗಳ ವೈಷಮ್ಯದಿಂದ ಭ್ರಷ್ಟನಾದವನಿಗೆ ವಿಧಿನಿಷೇಧಗಳ ಬಂಧನವನ್ನು ಹೇಳಿದೆ ಎಂಬ ಭಾವ.

ಮತ್ಕರ್ಮ ಕುರ್ವತಾಂ ಪುಂಸಾಂ ಕರ್ಮಲೋಪೋ ಭವೇದ್ಯದಿ ।
ತತ್ಕರ್ಮ ತೇ ಪ್ರಕುರ್ವಂತಿ ತ್ರಿಂಶತ್ಕೋಟ್ಯೋ ಮಹರ್ಷಯಃ ॥

ಎಂದು ಭಾಗವತದಲ್ಲಿ ಹೇಳಿದೆ.

आम्नाया न विद्यन्ते ॥

ಆಮ್ನಾಯಾ ನ ವಿದ್ಯಂತೇ ॥

ಅರಿಯುವಿಕೆಯ ಪ್ರಕ್ರಿಯೆಯಲ್ಲಿ ಪರಂಪರೆಗಳು ಕಂಡುಬರುವುದಿಲ್ಲ. 'ಅವಿದ್ಯಾವದ್ವಿಷಯಾಣಿ ಶಾಸ್ತ್ರಾಣೀತಿ' ಎಂದು ಭಗವತ್ಪಾದರು ತಮ್ಮ ಅಧ್ಯಾಸಭಾಷ್ಯದಲ್ಲಿ ಹೇಳಿದ್ದಾರೆ.

गुरुरेकः ॥

ಗುರುರೇಕಃ ॥

ಒಬ್ಬನೇ ಗುರುವನ್ನು ಉಪಾಸಿಸಬೇಕು ಎಂಬ ಅರ್ಥವು ತಿಳಿದುಬರುತ್ತದೆ. ಗುರುಬಾಹುಳ್ಯದಿಂದ ಅವರ ಉಪದೇಶ ವೈಷಮ್ಯ ಕಾರಣವಾಗಿ ಸಂಶಯವಶನಾಗಬಹುದೆಂಬ ಭಾವ. 'ಏಕಗುರೂಪಾಸ್ತಿರಸಂಶಯಃ' ಎಂದು ಪರಶುರಾಮಕಲ್ಪಸೂತ್ರದಲ್ಲಿ ಹೇಳಿದೆ. 'ಲಬ್ಧ್ವಾ ಕುಲಗುರುಂ ಸಮ್ಯಕ್ ನ ಗುರ್ವಂತರಮಾಶ್ರಯೇತ್' ಎಂದು ಕುಲಾರ್ಣವತಂತ್ರದಲ್ಲಿ ನಿಷೇಧವನ್ನು ಹೇರಿದೆ. 'ಲಬ್ಧ್ವೇತ್ಯುಕ್ತ್ಯೈವ ಕೌಲಿಕೋ ಗುರವೋನಂತಾ' ಎಂಬ ಶಕ್ತಿರಹಸ್ಯ ವಚನವು ಅನೇಕರ ಮಾರ್ಗದರ್ಶನ ಲಭಿಸುವ ಅಭಿಪ್ರಾಯವನ್ನು ತಿಳಿಸುತ್ತದೆ.

सर्वैक्यताबुद्धिमन्ते ॥

ಸರ್ವೈಕ್ಯತಾಬುದ್ಧಿಮಂತೇ ॥

ಸ್ವಾರ್ಥದಲ್ಲಿ ಐಕ್ಯತೆಯನ್ನು ಹೇಳಿದೆ. ಈ ರೀತಿಯಲ್ಲಿ ವರ್ತಿಸಿದರೆ ಸಾಧಕರಿಗೆ ಅಂತ್ಯಕಾಲದಲ್ಲಿ ಅದ್ವೈತಬುದ್ಧಿಯು ಲಭಿಸುವುದು.

आमन्त्रसिद्धेः ॥

ಆಮಂತ್ರಸಿದ್ಧೇಃ ॥

ಅಧಿಕಾರ ವಿಷಯ. ಮಂತ್ರಸಿದ್ಧಿಯ ಪೂರ್ವದಲ್ಲಿ ನಿಯಮಗಳ ಅನುಷ್ಠಾನವು ಧರ್ಮವೆಂದು ಹೇಳಿದೆ. ಅವುಗಳ ಅನುಷ್ಠಾನದಲ್ಲಿ ಅನಾದರವು ಕಂಡುಬಂದರೆ ಸಿದ್ಧಿಹಾನಿಯಾಗಬಹುದೆಂಬ ಭಾವ.

मदादिस्त्याज्यः ॥

ಮದಾದಿಸ್ತ್ಯಾಜ್ಯಃ ॥

ಮಾದಕದ್ರವ್ಯ ಸೇವನೆಯಿಂದ ಜನಿಸುವ ವಿಕಾರ ವಿಶೇಷವು ಮದ. ಆದಿ ಪದದಿಂದ ಅರಿಷಡ್ವರ್ಗಗಳು (ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯ) ಎಲ್ಲವೂ ವಿಕಾರದೊಳಗೆ ಸೇರಿಕೊಂಡು, ಅವೆಲ್ಲವೂ ತ್ಯಾಜ್ಯ ಎಂದು ಹೇಳಲಾಗಿದೆ. ಮಂತ್ರಸಿದ್ಧಿಯ ಬಳಿಕ ಕಾಮಕ್ರೋಧಾದಿಗಳ ಪ್ರಸರಣವು ವರ್ಜ್ಯವಾಗಿದೆ. 'ತಥಾಚ ಯಾವನ್ನ ಚಲತೇ ದೃಷ್ಟಿಃ ಆಗಲಾಂತಂ ಪಿಬೇತ್ ದ್ರವ್ಯಂ' ಎಂಬ ವಚನದಿಂದ ಮಂತ್ರಸಾಧಕನು ಸಾಧಿಸಿದ ಮಂತ್ರವಿಶೇಷದಿಂದ ಮಾಡಬೇಕಾದ ವ್ಯವಸ್ಥಾಸಿದ್ಧಿಯನ್ನು ತಿಳಿಸಿದೆ.

प्राकट्यं न कुर्यात् ॥

ಪ್ರಾಕಟ್ಯಂ ನ ಕುರ್ಯಾತ್ ॥

ಮಂತ್ರದೀಕ್ಷಿತನಾದವನು ತನ್ನ ಧರ್ಮವಿಹಿತವಾದ ಉಪಾಸನೆಗಳನ್ನು ಮಾಡುತ್ತಿದ್ದು, ಇತರರೊಂದಿಗೆ ಆದರದಿಂದ ತಾನು ಮಂತ್ರೋಪಾಸಕನಂತೆ ತೋರಿಕೊಳ್ಳಬಾರದು ಮತ್ತು ಯಾರೊಡನೆಯೂ ತಾನು ಇಂತಹ ಮಂತ್ರವನ್ನು ಉಪಾಸಿಸುತ್ತಿದ್ದೇನೆ ಎಂದು ಬಹಿರಂಗವಾಗಿ ಹೇಳಿಕೊಳ್ಳಬಾರದು; ತನ್ನ ಉಪಾಸನೆಯನ್ನು ಗೋಪ್ಯವಾಗಿಡಬೇಕು. ಧರ್ಮಾಂತರದಲ್ಲಿ ರಹಸ್ಯವನ್ನು ಭಂಗಿಸಿದರೆ ನರಕ ಪ್ರಾಪ್ತಿಯಾಗುವುದೆಂದು ಮತ್ತು ಭಗವಾನ್ ಪರಶುರಾಮರು 'ಪ್ರಾಕಟ್ಯಾನ್ನಿರಯಃ' ಎಂದು ಹೇಳಿರುವರು.

न कुर्यात्पशुसम्भाषणम् ॥

ನ ಕುರ್ಯಾತ್ಪಶುಸಂಭಾಷಣಮ್ ॥

ಪಶು ವಿದ್ಯಾಹೀನನು. ಬಹಿರ್ಮುಖವಾಗಿರುವವರೆಲ್ಲರೂ ವಿದ್ಯಾಹೀನತೆಯಿಂದಾಗಿ ಪಶುಸಮಾನರು. 'ನ ಶಿಲ್ಪಾದಿಜ್ಞಾನಯುಕ್ತೇ ವಿದ್ವಚ್ಛಬ್ದಃ ಪ್ರಯುಜ್ಯತೇ' ಎಂಬ ವಚನದಂತೆ. ತನ್ನ ಉಪಾಸನೆಯ ವಿಷಯದಲ್ಲಿ ಅವಿದ್ಯೆಯಿಂದ ಕೂಡಿದವರೊಂದಿಗೆ ಸಂಭಾಷಣೆಯನ್ನು ಮಾಡಕೂಡದು. ಸಾಮಾನ್ಯ ವಾರ್ತಾಲಾಪಗಳಿಗೆ ನಿಷೇಧವಿಲ್ಲ.

अन्यायो न्यायः ॥

ಅನ್ಯಾಯೋ ನ್ಯಾಯಃ ॥

ಅನ್ಯಾಯ ಅಲ್ಪಾರ್ಥದಲ್ಲಿ ಅಲ್ಪಬಲದ ನ್ಯಾಯ, ಪೂರ್ವಪಕ್ಷದ ನ್ಯಾಯ ಎಂದು ತಿಳಿಯಬೇಕು. **ನ್ಯಾಯ** ಪೂರ್ಣಬಲದ ನ್ಯಾಯ, ಉತ್ತರಪಕ್ಷದ ನ್ಯಾಯ. ನ್ಯಾಯಸಿದ್ಧಾಂತಗಳಲ್ಲಿ ಅಪವಾದಗಳೆಂಬಂತೆ ಸಿದ್ಧಾಂತಗಳು ಋಷಿಭೇದದಿಂದ ಬಹುವಿಧವಾಗಿ, ಅದರ ಅಭಿಮಾನಿಗಳಿಗೆ ಮತ್ತು ಅದರ ಉತ್ಪತ್ತಿಗೆ ಪರಸ್ಪರ ವಿರುದ್ಧವಾಗಿರುವಂತಹ ದೇವತಾಧಿಕರಣವನ್ನು ಹೇಳಿರುವುದು ಕಂಡುಬರುವುದು. ವಾದಿಗಳ ದೌರ್ಬಲ್ಯವು ನ್ಯಾಯದ ದೌರ್ಬಲ್ಯವಾಗಬಾರದು ಎಂಬ ಭಾವ. 'ತರ್ಕಾಪ್ರತಿಷ್ಠಾನಾತ್' ಎಂದಿದ್ದಾರೆ ಭಗವಾನ್ ವ್ಯಾಸರು. ಚಿಂತನೆಯಿಲ್ಲದೆ ಒಂದು ಹೇಳಿಕೆಯನ್ನು ಸತ್ಯವೆಂದು ಭಾವಿಸುವವರು ತರ್ಕವನ್ನು ಸ್ವಲ್ಪವೂ ಅರಿತಿರುವುದಿಲ್ಲ. ಇಂತಹ ನ್ಯಾಯಗಳು ಚಿತ್ತಸಮಾಧಾನದ ಫಲವನ್ನು ಮಾತ್ರಹೊಂದಿ ಸಂಪ್ರದಾಯ ವಿರೋಧದ ಮೂಲಕ ಎರಡೂ ಪಂಥಗಳಿಗೆ ಉಚಿತತೆಯನ್ನು ನೀಡುತ್ತದೆ. ಒಂದು ವಿಷಯದಲ್ಲಿ ಶ್ರುತಿ, ಸ್ಮೃತಿ, ಸಂಪ್ರದಾಯಗಳು ಉತ್ತರೋತ್ತರ ದುರ್ಬಲವಾಗಿದ್ದರೆ ಅದರ ವೈಪರೀತ್ಯವನ್ನು ಊಹಿಸಬಹುದು.

न गणयेत्कमपि ॥

ನ ಗಣಯೇತ್ಕಮಪಿ ॥

ಬ್ರಹ್ಮವಾದಿಗಳು ಸ್ವಸಿದ್ಧಾಂತ ವಿರೋಧವಾದಿಗಳನ್ನು ಗಣಿಸುವುದಿಲ್ಲ, ಪ್ರಾಧಾನ್ಯತೆಯನ್ನು ನೀಡುವುದಿಲ್ಲ. ಅತೀವ ದೃಢವಿಶ್ವಾಸವಿರುವವರು ಎಂಬ ಅರ್ಥ. 'ಅತ ಏವ ವಿಶ್ವಾಸಭೂಯಿಷ್ಠಂ ಪ್ರಾಮಾಣ್ಯಮ್' ಎಂದು ಕಲ್ಪಸೂತ್ರದಲ್ಲಿ ಹೇಳಿದೆ.

आत्मरहस्यं न वदेत् ॥

ಆತ್ಮರಹಸ್ಯಂ ನ ವದೇತ್ ॥

ಮಿತ್ರರಲ್ಲಿ ಕೂಡಾ ರಹಸ್ಯವನ್ನು ಪ್ರಕಟಪಡಿಸುವುದರಲ್ಲಿ ತೊಂದರೆಯಿರುವುದರಿಂದ, ಹೇಳಬಾರದು. ಸಂಪ್ರದಾಯಬದ್ಧ ಉಪದೇಶವಿಲ್ಲದೇ ತಿಳಿಸಬಾರದು ಎಂಬ ಭಾವ.

शिष्याय वदेत् ॥

ಶಿಷ್ಯಾಯ ವದೇತ್ ॥

ಕಿವಿಯಿಂದ ಕಿವಿಗೆ ಉಪದೇಶದ ಮೂಲಕ ಭೂಮಿಯಲ್ಲಿ ಗಳಿಸಿದ ವಿದ್ಯೆಯನ್ನು ತಿಳಿಸಬೇಕು ಎಂದು ಸ್ಮೃತಿಗಳು ಹೇಳುತ್ತವೆ. ಇಂತಹ ಸಂಪ್ರದಾಯದ ಮೂಲಕ ಅರಿತ ವಿದ್ಯೆಗಳನ್ನು ಅದೇರೀತಿಯ ಸಂಪ್ರದಾಯ ಬದ್ಧವಾಗಿ ಶ್ರುತಿ ಸ್ಮೃತಿಗಳ ಅಪೇಕ್ಷೆಯಂತೆ ಸದಾಚಾರವುಳ್ಳವರಿಗೆ ನೀಡಬೇಕು.

अन्तःशाक्तः बहिश्शैवः लोको वैषणवः ॥

ಅಂತಃಶಾಕ್ತಃ । ಬಹಿಶ್ಶೈವಃ । ಲೋಕೋ ವೈಷ್ಣವಃ ॥

ತನ್ನ ಉಪಾಸನೆಗಳನ್ನು ಅಪ್ರಕಟಮಾಡುವುದರಿಂದ ಕರ್ತವ್ಯಗಳನ್ನು ಹೇಗೆ ಆಚರಿಸಬೇಕೆಂದು ತಿಳಿಸುತ್ತದೆ. 'ಕುಚಂದನೇನ ಶಾಕ್ತಾನಾಂ ಭ್ರೂಮಧ್ಯೇ ಬಿಂದುರಿಷ್ಯತೇ' ಎಂಬ ವಚನದಂತೆ ವಿಭೂತಿಧಾರಣೆ ಮುಂತಾದ ಶೈವ ಚಿಹ್ನೆಗಳ ಬದಲು ಶಾಕ್ತನು ಚಂದನವನ್ನು ಧಾರಣೆ ಮಾಡಿದಂತೆ ಆಚರಿಸಬೇಕು. ಲೋಕದಲ್ಲಿ ವ್ಯವಹರಿಸುವಾಗ ವಿಷ್ಣುವಿನ ಭಕ್ತನಂತೆ ಆಚರಿಸಿದರೂ, ಬಾಹ್ಯವೃತ್ತಿಯಿಂದ ಶಿವನ ಆರಾಧಕನಾಗಿದ್ದು, ಅಂತರ್ವೃತ್ತಿಯಿಂದ ಶಾಕ್ತನಾಗಿರುತ್ತಾನೆ (ಶಕ್ತಿಯ ಆರಾಧಕ). ವಿಷ್ಣು, ಶಿವ, ಶಕ್ತಿಯರಲ್ಲಿ ಅಭೇದವಿದೆ ಎಂಬುದು ರಹಸ್ಯಾರ್ಥ. 'ಮಾಮೇವ ಪೌರುಷಂ ರೂಪಂ ಗೋಪಿಕಾನಯನಾಮೃತಮ್' ಮುಂತಾದ ವಚನಗಳಂತೆ ವಿಷ್ಣುರೂಪದ ಪರಶಿವನು ತ್ರಿಪುರಸುಂದರೀಯ ರೂಪಾಂತರವಾಗಿರುವುದರಿಂದ ಸಭೆಗಳಲ್ಲಿ ವಿಷ್ಣುನಾಮಗಳ ಉಚ್ಚಾರದಿಂದ ವಿಷ್ಣುವಿನ ಉಪಾಸಕನಂತೆ ಪ್ರಕಟಿಸಿಕೊಳ್ಳುವುದು ಎಂಬುದು ಈ ಮೂರು ಸೂತ್ರಗಳ ಅರ್ಥವು. ಹಾಗಾಗಿ ವಿಷ್ಣು, ಶಿವ, ಶಕ್ತಿ ನಾಮಗಳು ಉತ್ತರೋತ್ತರವಾಗಿ ಅಧಿಕಫಲವನ್ನು ನೀಡುವಂತಹವಾಗಿ, ಉತ್ತರೋತ್ತರ ಅಧಿಕ ರಹಸ್ಯಮಯವಾಗಿವೆ ಎಂಬ ಅಭಿಪ್ರಾಯವನ್ನು ರಹಸ್ಯನಾಮಸಾಹಸ್ರವು ತಿಳಿಸುತ್ತದೆ.

अयमेवाचारः ॥
ಅಯಮೇವಾಚಾರಃ ॥

ಇದು ತಂತ್ರಗಳಲ್ಲಿ ವಿಹಿತವಾದ ಕೌಲರಿಗೆ ಹೇಳಲ್ಪಟ್ಟ ಆಚಾರವಾಗಿದೆ. ಎಲ್ಲರ ಮಧ್ಯದಲ್ಲಿರುವಾಗ ನಿಜರೂಪದ ಪ್ರಕಟಣೆಯ ಅವಕಾಶವಿಲ್ಲದಿದ್ದುದರಿಂದ ಹೀಗಿರಬೇಕು ಎಂದು ಹೇಳಿದೆ.

आत्मज्ञानान्मोक्षः ॥
ಆತ್ಮಜ್ಞಾನಾನ್ಮೋಕ್ಷಃ ॥

ಕೌಲಾಚಾರದ ಆಸಕ್ತರು ಮಾಡುವ ಅನುಸಂಧಾನಗಳಿಂದ ದೊರೆಯುವ ಆತ್ಮಜ್ಞಾನವೇ ಮುಕ್ತಿಗೆ ಕಾರಣವಾಗುವುದು.

लोकान्ननिन्द्यात् ॥
ಲೋಕಾನ್ನನಿಂದ್ಯಾತ್ ॥

ನಾನಾವಿಧದ ದರ್ಶನಗಳು ಹರಿದುಬಂದರೂ, ಎಲ್ಲವೂ ಅಧಿಕಾರಭೇದದಿಂದ ಪ್ರಮಾಣವಲ್ಲದಿದ್ದರೂ ನಿಂದನೀಯವಲ್ಲ. ಅವುಗಳನ್ನು ನಿಂದಿಸುವುದರಿಂದ ಅವುಗಳನ್ನು ಅನುಸರಿಸುವವರಲ್ಲಿ ಸಂಶಯೋತ್ಪತ್ತಿಯನ್ನು ಮಾಡಿ ಸ್ವಾವಲಂಬಿತ ದರ್ಶನದಲ್ಲಿ ಅವಿಶ್ವಾಸವನ್ನು ಮೂಡಿಸಿ ಉಭಯ ಭ್ರಷ್ಟತೆಯ ಆಪತ್ತನ್ನು ಉಂಟುಮಾಡಬಹುದು. 'ನ ಬುದ್ಧಿಭೇದಂ ಜನಯೇದಜ್ಞಾನಾಂ ಕರ್ಮಸಂಗಿನಾಂ' ಎಂದು ಭಗವಾನ್ ಕೃಷ್ಣನು ಹೇಳಿದ್ದಾನೆ. 'ಸರ್ವದರ್ಶನಾನಿಂದನಮ್' ಎಂದು ಭಾರ್ಗವರಾಮರೂ ಹೇಳಿದ್ದಾರೆ.

इत्यध्यात्मम् ॥
ಇತ್ಯಧ್ಯಾತ್ಮಮ್ ॥

ಸರ್ವದರ್ಶನಗಳನ್ನು ನಿಂದಿಸುವುದರಿಂದ ಹಾನಿಯೇನು ಎಂಬ ಆಶಂಕೆಯಿದ್ದರೆ, ತನ್ನ ಸರ್ವಾತ್ಮಭಾವದ ನ್ಯೂನತೆಯೆಂಬ ಆಪತ್ತು ಎಂದು ಹೇಳುತ್ತಾರೆ. ಆತ್ಮಜ್ಞಾನಿಗಳು ಹಾಗೆ ಮಾಡುವುದಿಲ್ಲ ಎಂಬ ಅರ್ಥ.

व्रतं न चरेत् ॥

ವ್ರತಂ ನ ಚರೇತ್ ॥

ಪುರುಷಾರ್ಥ ರೂಪದ ವ್ರತಗಳನ್ನು ಆಚರಿಸಕೂಡದು. ಪ್ರಾಪ್ತಿಯಾದವುಗಳಿಗಿಂತ ಅಧಿಕವಾದುದನ್ನು ಆಚರಿಸಕೂಡದು ಎಂಬ ಅರ್ಥ. ವರ್ಣಾಶ್ರಮಧರ್ಮ ರೂಪದ ಪುರುಷಾರ್ಥಗಳು, ನಿತ್ಯನೈಮಿತ್ತಕಗಳ ಅಂಗವಾಗಿರುವಂತಹವುಗಳು ಪ್ರಾಪ್ತಿಯಾದವುಗಳು. ದರ್ಶಪೂರ್ಣಮಾಸ ಮುಂತಾದ ಕ್ರತುಗಳು ಮತ್ತು ಇತರ ವ್ರತಗಳನ್ನು ಆಚರಿಸುವುದರಿಂದ ನಿತ್ಯನೈಮಿತ್ತಿಕಗಳಿಗೆ ತೊಂದರೆಯಾಗುವುದರಿಂದ ಅವುಗಳನ್ನು ತ್ಯಜಿಸಬೇಕು.

न तिष्ठेन्नियमेन ॥

ನ ತಿಷ್ಠೇನ್ನಿಯಮೇನ ॥

ನಿಯಮಗಳ ನಿರ್ಬಂಧಗಳು ಅತ್ಮಾನುಸಂಧಾನವನ್ನು ವಿರೋಧಿಸುತ್ತವೆ ಎಂಬ ಕಾರಣದಿಂದ ನಿಯಮಗಳಿಗೆ ಬದ್ಧರಾಗಕೂಡದು.

नियमान्न मोक्षः ॥

ನಿಯಮಾನ್ನ ಮೋಕ್ಷಃ ॥

ಆತ್ಮಾನುಸಂಧಾನದ ಅಭಾವದಲ್ಲಿ ಮುಕ್ತಿಯು ವಿಳಂಬವಾಗುವ ಆಪತ್ತು ಇರುವುದು.

कौलप्रतिष्ठां न कुर्यात् ॥

ಕೌಲಪ್ರತಿಷ್ಠಾಂ ನ ಕುರ್ಯಾತ್ ॥

ಒಬ್ಬ ನ್ಯಾಯ ವಿಷಯಕ ಉಪನ್ಯಾಸನಿಪುಣನಾದ ಕೌಲನು ನ್ಯಾಯವನ್ನು ಸ್ಥಾಪಿಸಲು ಕೌಲತತ್ತ್ವವನ್ನು ಸಾಧಿಸಿದರೆ ಅದಕ್ಕೆ ಕ್ಷಮೆಯುಂಟು. ಬೇರೆ ವಿಷಯಗಳಲ್ಲಿ ಸಾಧಿಸಲು ತೊಡಗಿದರೆ ಪ್ರಕಟವಾಗುವ, ಬಹಿರಂಗವಾಗುವ ಆಪತ್ತು ಇರುವುದರಿಂದ, ಶಾಸ್ತ್ರವಿಷಯಗಳಲ್ಲಿ ಗ್ರಂಥರಚನಾಕಾರರೂ ಸೇರಿ, ಕೌಲ ಸಿದ್ಧಾಂತದ ಪ್ರತಿಪಾದನೆಗೆ ನಿಷೇಧವನ್ನು ಹೇಳಿದೆ. ಕೆಲವು ಸಂಪ್ರದಾಯವಿದರು ಗುರುಮುಖದಿಂದ ತಿಳಿದುಕೊಂಡಿದ್ದೇವೆ ಎಂದು ಹೇಳಿ ತಪ್ಪಿಸಿಕೊಳ್ಳುತ್ತಾರೆ.

सर्वसमो भवेत् ॥

ಸರ್ವಸಮೋ ಭವೇತ್ ॥

ಶಾಸ್ತ್ರಗಳಲ್ಲಿ ಹೇಳಿದ ವಿಷಯಗಳ ನಿಷ್ಕರ್ಷೆಮಾಡಿದರೆ, ಜೀವಿಗಳೆಲ್ಲವೂ ಸಮವಾಗಿವೆ; ಎಲ್ಲದರಲ್ಲಿಯೂ ಇರುವ ಅತ್ಮವೊಂದೇ ಆಗಿದೆ ಎಂಬ ಅನನ್ಯ ಭಾವನೆಯಿಂದ ವರ್ತಿಸಬೇಕು.

स मुक्तो भवति ॥

ಸ ಮುಕ್ತೋ ಭವತಿ ॥

ಇಂತಹವರು ಶೀಘ್ರವಾಗಿ ಮುಕ್ತಿಯನ್ನು ಪಡೆಯುತ್ತಾರೆ; ಮತ್ತು ಇತರರು ನಿಧಾನವಾಗಿ, ಜನ್ಮಾಂತರಗಳಲ್ಲಿ ಗಳಿಸುತ್ತಾರೆ ಎಂಬ ಭಾವ.

पठेदेतानि सूत्राणि प्रातरुत्थाय देशिकः ।
आज्ञासिद्धिर्भवेत्तस्य इत्याज्ञा पारमेश्वरी ॥

ಪಠೇದೇತಾನಿ ಸೂತ್ರಾಣಿ ಪ್ರಾತರುತ್ಥಾಯ ದೇಶಿಕಃ ।
ಆಜ್ಞಾಸಿದ್ಧಿರ್ಭವೇತ್ತಸ್ಯ ಇತ್ಯಾಜ್ಞಾ ಪಾರಮೇಶ್ವರೀ ॥

ಅರ್ಥಾನುಸಂಧಾನಪೂರ್ವಕವಾಗಿ ಈ ಸೂತ್ರಗಳನ್ನು ಪಠಿಸುವ ದೇಶಿಕನಿಗೆ ಆಜ್ಞಾಸಿದ್ಧಿಯು ದೊರೆಯುವುದು; ಅಪ್ರತಿಹತ ಶಿವಭಾವದಲ್ಲಿರುವನು. ಹೀಗೆಂದು ಪರಮೇಶ್ವರಿಯ ಆಜ್ಞೆಯಿದೆ; ಇದರಲ್ಲಿ ಅವಿಶ್ವಾಸವನ್ನು ಮಾಡಬಾರದು ಎಂಬ ಭಾವ.

यश्चाचारविहीनोपि योवा पूजां न कुर्वते ।
यदि ज्येष्ठं न मन्येत नन्दते नन्दने वने ॥

ಯಶ್ಚಾಚಾರವಿಹೀನೋಪಿ ಯೋವಾ ಪೂಜಾಂ ನ ಕುರ್ವತೇ ।
ಯದಿ ಜ್ಯೇಷ್ಠಂ ನ ಮನ್ಯೇತ ನಂದತೇ ನಂದನೇ ವನೇ ॥

ಹೀಗೆ ಹಿಂದೆ ತಿಳಿಸಿದ ಆಚಾರಗಳನ್ನು ಅನುಸಂಧಾನಮಾಡುವಾಗ ಹೇಳಿದವಿಧದಲ್ಲಿ ಸಂಶಯವುಳ್ಳಮನಸಿನಿಂದ ಪೂಜೆಯನ್ನು ಮಾಡಬಾರದು. ತನ್ನ ಪಂಥವು ಸರ್ವೋತ್ತಮವೆಂದು ವಿಶ್ವಾಸವಿಡದಿದ್ದರೆ, ಅಂತಹಾ ಉಪಾಸಕರಿಗೆ ಸ್ವರ್ಗಲಾಭ ಮಾತ್ರವಿರುವುದು. ನಿಷ್ಠೆಯಿಂದ ಉಪಾಸನೆಮಾಡುವವರಿಗೆ ಮುಕ್ತಿಯ ಲಾಭವಿರುವುದು ಎಂದು ಅರ್ಥ. ಯಥಾವತ್ ಉಪಾಸಕರಿಗೆ ಯಥೋಕ್ತ ಫಲಸಿದ್ಧಿಯಾಗುವುದು ಎಂಬ ಭಾವ.

इति कौलमार्गपारावारपारीण श्रीमद्भास्कररायविरचितं कौलोपनिषद्भाष्यं सम्पूर्णम् ॥

ಇತಿ ಕೌಲಮಾರ್ಗಪಾರಾವಾರಪಾರೀಣ ಶ್ರೀಮದ್ಭಾಸ್ಕರರಾಯವಿರಚಿತಂ ಕೌಲೋಪನಿಷದ್ಭಾಷ್ಯಂ ಸಂಪೂರ್ಣಮ್ ॥

॥ इति श्रीरस्तु ॥ ಇತಿ ಶ್ರೀರಸ್ತು ॥

ಓಂ ಶನ್ನಃ ಕೌಲಿಕಃ ಶನ್ನೋ ವಾರುಣೀ ಶನ್ನಶ್ಶುದ್ಧಿಃ ಶನ್ನೋಽಗ್ನಿಶ್ಶನ್ನಸ್ಸರ್ವಂ ಸಮಭವತ್ ॥
ನಮೋ ಬ್ರಹ್ಮಣೇ ನಮಃ ಪೃಥಿವ್ಯೈ ನಮೋಽದ್ಭ್ಯೋ ನಮೋಽಗ್ನಯೇ ನಮೋ ವಾಯವೇ ನಮೋ ಗುರುಭ್ಯಃ । ತ್ವಮೇವ ಪ್ರತ್ಯಕ್ಷಂ ಸ್ಥೈವಾಸಿ । ತ್ವಾಮೇವ ಪ್ರತ್ಯಕ್ಷಂ ತಾಂ ವದಿಷ್ಯಾಮಿ । ಋತಂ ವದಿಷ್ಯಾಮಿ

। ಸತ್ಯಂ ವದಿಷ್ಯಾಮಿ । ತನ್ಮಾಮವತು । ತದ್ವಕ್ತಾರಮವತು । ಅವತು ಮಾಂ ಅವತು ವಕ್ತಾರಮ್ । ಓಂ ಶಾಂತಿಃ ಶಾಂತಿಃ ಶಾಂತಿಃ ॥

॥ ॐ तत् सत् ॥ ॐ ತತ್ ಸತ್॥

बह्वृचोपनिषत्
(श्रीललितामहात्रिपुरसुन्दर्युपनिषत्)
ಬಹ್ವೃಚೋಪನಿಷತ್
(ಶ್ರೀಲಲಿತಾಮಹಾತ್ರಿಪುರಸುಂದರ್ಯುಪನಿಷತ್)
(ಶ್ರೀಅಪ್ಪಯ್ಯದೀಕ್ಷಿತರ ಭಾಷ್ಯದೊಂದಿಗೆ)

ಬಹ್ವೃಚಾಖ್ಯಬ್ರಹ್ಮವಿದ್ಯಾಮಹಾಖಂಡಾರ್ಥವೈಭವಮ್ ।
ಅಖಂಡಾನಂದಸಾಮ್ರಾಜ್ಯಂ ರಾಮಚಂದ್ರಪದಂ ಭಜೇ ॥

ಶಾಂತಿಮಂತ್ರ

ओं वाङ्मे मनसि प्रतिष्ठिता । मनो मे वाचि प्रतिष्ठितम् ॥ आवीरावीर्म एधि ॥
वेदस्य म आणीस्थः श्रुतं मे मा प्रहासीः ॥
अनेनाधीतेनाहोरात्रान् सन्दधामि । ऋतं वदिष्यामि । सत्यं वदिष्यामि ॥
तन्मामवतु । तद्वक्तारमवतु । अवतुमां अवतुवक्तारम् ॥
ओं शान्तिः शान्तिः शान्तिः ॥

ಓಂ ವಾಙ್ಮೇ ಮನಸಿ ಪ್ರತಿಷ್ಠಿತಾ । ಮನೋ ಮೇ ವಾಚಿ ಪ್ರತಿಷ್ಠಿತಮ್ ॥ ಆವಿರಾವೀರ್ಮ ಏಧಿ ॥
ವೇದಸ್ಯ ಮ ಆಣೀಸ್ಥಃ ಶ್ರುತಂ ಮೇ ಮಾ ಪ್ರಹಾಸೀಃ ॥
ಅನೇನಾಧೀತೇನಾಹೋರಾತ್ರಾನ್ ಸಂದಧಾಮಿ । ಋತಂ ವದಿಷ್ಯಾಮಿ । ಸತ್ಯಂ ವದಿಷ್ಯಾಮಿ ॥
ತನ್ಮಾಮವತು । ತದ್ವಕ್ತಾರಮವತು । ಅವತುಮಾಂ ಅವತುವಕ್ತಾರಮ್ ॥
ಓಂ ಶಾಂತಿಃ ಶಾಂತಿಃ ಶಾಂತಿಃ ॥

ತತ್ತ್ವವಿದ್ಯೆಯನ್ನು ಪ್ರತಿಪಾದಿಸುವವರಿಗೆ **ವಾಕ್** ಅಂದರೆ ಮಾತು ಮನಸಿನಲ್ಲಿ ಇರುತ್ತದೆ; ಮನಸಿನ ಭಾವನೆಗಳು ಮಾತಿನರೂಪದಲ್ಲಿ ಹೊರಬರುತ್ತವೆ. ಆತ್ಮವಿದ್ಯೆಯ ಪ್ರತಿಪಾದಕರು ಹೇಳುವಂತೆ ಮನಸು ಮಾತಿನಲ್ಲಿದೆ; ನಮ್ಮ ಮಾತಿನ ಭಾವನೆಗಳು ನಮ್ಮ ಮನಸನ್ನು ಪ್ರತಿಬಿಂಬಿಸುತ್ತವೆ. ಹೀಗೆ ಮಾತು ಮತ್ತು ಮನಸು ಅವಿನಾಭಾವ ಸಂಬಂಧವನ್ನು ಹೊಂದಿವೆ.

ಆವಿ ಶಬ್ದವು ಸ್ವಪ್ರಕಾಶಿತ ಬ್ರಹ್ಮಚೈತನ್ಯವನ್ನು ನಿರ್ದೇಶಿಸುತ್ತದೆ; ***ಏಧಿ*** ವಿಶಾಲತೆಯನ್ನು ಹೊಂದು; ಅವಿದ್ಯಾವರಣವನ್ನು ತೊಡೆದುಹಾಕಿ ಪ್ರಕಟವಾಗುವುದು ಎಂಬ ಭಾವ.

ಆಣೀ ಮಿತಿ; ***ಪ್ರಹಾಸೀಃ*** ವಿಸ್ಮರವಾಗು, ಮರೆತುಹೋಗು. ಓ ಮನಸೇ ವೇದಗಳಲ್ಲಿ ಪ್ರತಿಪಾದಿಸಿರುವ, ಕೇಳಿರುವ ಮಿತಿಯಿಲ್ಲದ ವಿಷಯಗಳು ನನ್ನಿಂದ ಮರೆಯಾಗದಿರಲಿ.

ಅನೇನಾಧೀತೇ ಈ ಉಪನಿಷತ್ತಿನ ವಿಷಯಗಳು ವಿಸ್ಮರಣೆಯಾಗದಂತೆ ಆಹೋರಾತ್ರಿ, ನಿರಂತರವಾಗಿ ಪಠಿಸುತ್ತೇನೆ. ***ಋತಂ*** ಮತ್ತು ***ಸತ್ಯ*** ಎರಡೂ ಶಬ್ದಗಳು ಒಂದೇ ಅರ್ಥವನ್ನು ತಿಳಿಸಿದರೂ, ಋತವು ಮಾನಸಿಕ ಮತ್ತು ಸತ್ಯವು ವಾಚಿಕವಾಗಿವೆ. ಉಪನಿಷತ್ತು ತಿಳಿಸುವ ಪಾರಮಾರ್ಥಿಕ ವಿಷಯವನ್ನೇ ಹೇಳುತ್ತೇನೆ.

ಈ ಬ್ರಹ್ಮತತ್ತ್ವವು ಕೇಳುಗರನ್ನು (ಶಿಷ್ಯ) ಪಾಲಿಸಲಿ, ರಕ್ಷಿಸಲಿ; ಹೇಳುವವರನ್ನು (ಆಚಾರ್ಯರನ್ನು) ರಕ್ಷಿಸಲಿ; ಪ್ರಚಾರಮಾಡುವವರನ್ನು ರಕ್ಷಿಸಲಿ.

ಶಾಂತಿಃ ಶಾಂತಿಃ ಶಾಂತಿಃ (ಅಧಿಭೌತಿಕ, ಅಧಿದೈವಿಕ, ಅಧ್ಯಾತ್ಮಿಕ) ವಿಘ್ನಗಳು ಶಾಂತವಾಗಲಿ, ನಿವಾರಣೆಯಾಗಲಿ.

देवीह्येकाग्र आसीत् । सैव जगदण्डमसृजत् । कामकएति विज्ञायते ।
शृङ्गारकलेति विज्ञायते । तस्या एव ब्रह्माजीजनत् । विष्णुरजीजनत् ।
रुद्रोजीजनत् । सर्वे मरुद्गणाआजीजनन् । गम्धर्वाप्सरसः
किन्नरावादित्रवादिनस्समन्तादजीजनन् । भोग्यमजीजनत् । सर्वनजीजनत् ।
सर्व शाक्तमजीजनत् । अण्डजं स्वेदजमुद्भिजं जरायुजं
यत्किञ्चैतत्प्राणिस्थावरजङ्गमं मनुष्यमजीजनत् ।

ದೇವೀಹ್ಯೇಕಾಗ್ರ ಆಸೀತ್ । ಸೈವ ಜಗದಂಡಮಸೃಜತ್ । ಕಾಮಕಲೇತಿ ವಿಜ್ಞಾಯತೇ ।
ಶೃಂಗಾರಕಲೇತಿ ವಿಜ್ಞಾಯತೇ । ತಸ್ಯಾ ಏವ ಬ್ರಹ್ಮಾಜೀಜನತ್ । ವಿಷ್ಣುರಜೀಜನತ್ ।
ರುದ್ರೋಜೀಜನತ್ । ಸರ್ವೇ ಮರುದ್ಗಣಾ ಅಜೀಜನನ್ । ಗಂಧರ್ವಾಪ್ಸರಸಃ
ಕಿನ್ನರಾವಾದಿತ್ರವಾದಿನಸ್ಸಮಂತಾದಜೀಜನನ್ । ಭೋಗ್ಯಮಜೀಜನತ್ । ಸರ್ವಮಜೀಜನತ್
। ಸರ್ವ ಶಾಕ್ತಮಜೀಜನತ್ । ಅಂಡಜಂ ಸ್ವೇದಜಮುದ್ಭಿಜ್ಜಂ ಜರಾಯುಜಂ
ಯತ್ಕಿಂಚೈತತ್ಪ್ರಾಣಿಸ್ಥಾವರಜಂಗಮಂ ಮನುಷ್ಯಮಜೀಜನತ್ ।

ದೇವೀತಿ. ***ದೇವೀ ಹೀ ಏಕಾ ಅಗ್ರ ಆಸೀತ್*** ಮೊದಲಾಗಿ ಜಗತ್ತಿನ ಉತ್ಪತ್ತಿಮಾಡಿದ ಸಗುಣ–ನಿರ್ಗುಣ ಉಭಯಾತ್ಮಿಕಳಾದ ದೇವೀಯು ಒಬ್ಬಳೇ ಆಗಿ ಅದ್ವಿತೀಯಳಾಗಿದ್ದಳು. ***ಸೈವ ಜಗತ್ ಅಂಡಂ ಸೃಜತ್*** ಆಕಾಶ ಮೊದಲಾದವುಗಳ ಪಂಚೀಕರಣದ ಮೂಲಕ ಅಂಡಾಕಾರವಾಗಿರುವ ಈ ಜಗತ್ತನ್ನು ಸೃಷ್ಟಿಸಿದಳು. ***ಕಾಮಕಲೇತಿ ವಿಜ್ಞಾಯತೇ*** ಅವಳೇ ಸಗುಣಾಂಶದಿಂದ ಕಾಮಕಲಾ ಎಂದು ಮತ್ತು ***ಶೃಂಗಾರಕಲೇತಿ ವಿಜ್ಞಾಯತೇ*** ಶೃಂಗಾರಕಲಾ ಎಂದು ತಿಳಿಯಲ್ಪಡುವಳು. ***ತಸ್ಯಾ ಏವ ಬ್ರಹ್ಮಾ ಜೀಜನತ್*** ಅವಳ ಸಕಾಶದಿಂದಲೇ ಚತುರ್ಮುಖಬ್ರಹ್ಮನು ಜನಿಸಿದನು. ಅಂತೆಯೇ ವಿಷ್ಣುವೂ, ರುದ್ರನೂ, ಮರುದ್ಗಣಗಳೂ ಜನಿಸಿದರು. ***ಗಂಧರ್ವ ಅಪ್ಸರಸಃ ಕಿನ್ನರಾ ವಾ ಆದಿ ನಃ ಸಮಂತಾತ್ ಅಜೀಜನನ್*** ಅವಳಿಂದಲೇ ಗಂಧರ್ವ, ಅಪ್ಸರೆ, ಕಿನ್ನರಮುಂತಾದವರು ಜನಿಸಿದರು. ಹಾಗೂ ಭೋಗಭಾಗ್ಯಗಳು ಎಲ್ಲವೂ ಅವಳಿಂದಲೇ ಜನಿಸಿದವು. ***ಸರ್ವ ಶಾಕ್ತಮಜೀಜನತ್*** ಎಲ್ಲಾ ಶಾಕ್ತರು ಅವಳಿಂದಲೇ ಜನಿಸಿದರು. ***ಅಂಡಜಂ ಸ್ವೇದಜಂ ಉದ್ಭಿಜಂ ಜರಾಯುಜಂ ಯತ್ಕಿಂಚೈತತ್ ಪ್ರಾಣಿಸ್ಥಾವರಜಂಗಮಂ ಮನುಷ್ಯಂ ಅಜೀಜನತ್*** ಅಂಡಜ, ಸ್ವೇದಜ, ಉದ್ಭಿಜ, ಜರಾಯುಜ ಎಂಬ ಭೇದವಿರುವ ಜೀವಿಗಳು ಸ್ಥಾವ–ಜಂಗಮಗಳಾಗಿ ಮತ್ತು ಮನುಷ್ಯರಾಗಿ ಅವಳಿಂದ ಜನಿಸಿದರು.

सैषा पराशक्तिः । सैषा शाम्भवी विद्या । कादि विद्येति वा हादि विद्येति वा सादि विद्येति वा रहस्यम् । ओं ओं वाचि प्रतिष्ठा । सैव पुरत्रयं शरीरत्रयं व्याप्य बहिरन्तरवभासयन्ती देशकालवस्त्वन्तरसङ्गात् महात्रिपुरसुन्दरी वै प्रत्यक्चितिः । सैवात्मा ततोऽन्यदसत्यमनात्मा अत एषा ब्रह्मसंवित्तिर्भावा भावकला विनिर्मुक्ता चिदाद्या अद्वितीय ब्रह्मसंवित्तिः सच्चिदानन्दलहरी महात्रिपुरसुन्दरी बहिरन्तरनुप्रविश्य स्वयमेकैव विभाति । यदस्ति सन्मात्रं यद्विभाति चिन्मात्रं यत्प्रियमानन्दं तदेतत्सर्वाकारा महात्रिपुरसुन्दरी । त्वंचाहञ्च सर्वं विश्वं सर्वदेवता इतरत्सर्वं महात्रिपुरसुन्दरी । सत्यमेकं ललिताख्यं वस्तु । तदद्वितीतमखण्डार्थे परंब्रह्म ॥

ಸೈಷಾ ಪರಾಶಕ್ತಿಃ । ಸೈಷಾ ಶಾಂಭವೀ ವಿದ್ಯಾ । ಕಾದಿ ವಿದ್ಯೇತಿ ವಾ ಹಾದಿ ವಿದ್ಯೇತಿ ವಾ ಸಾದಿ ವಿದ್ಯೇತಿ ವಾ ರಹಸ್ಯಂ । ಓಂ ಓಂ ವಾಚಿ ಪ್ರತಿಷ್ಠಾ । ಸೈವ ಪುರತ್ರಯಂ ಶರೀರತ್ರಯಂ ವ್ಯಾಪ್ಯ ಬಹಿರಂತರವಭಾಸಯಂತೀ ದೇಶಕಾಲವಸ್ತ್ವಂತರಸಂಗಾತ್ ಮಹಾತ್ರಿಪುರಸುಂದರೀ ವೈ ಪ್ರತ್ಯಕ್ಚಿತಿಃ । ಸೈವಾತ್ಮಾ ತತೋಽನ್ಯದಸತ್ಯಮನಾತ್ಮಾ ಅತ ಏಷಾ ಬ್ರಹ್ಮಸಂವಿತ್ತಿರ್ಭಾವಾ ಭಾವಕಲಾ ವಿನಿರ್ಮುಕ್ತಾ ಚಿದಾದ್ಯಾ ಅದ್ವಿತೀಯ ಬ್ರಹ್ಮಸಂವಿತ್ತಿಃ ಸಚ್ಚಿದಾನಂದಲಹರೀ ಮಹಾತ್ರಿಪುರಸುಂದರೀ ಬಹಿರಂತರನುಪ್ರವಿಶ್ಯ ಸ್ವಯಮೇಕೈವ ವಿಭಾತಿ । ಯದಸ್ತಿ ಸನ್ಮಾತ್ರಂ ಯದ್ವಿಭಾತಿ ಚಿನ್ಮಾತ್ರಂ ಯತ್ಪ್ರಿಯಮಾನಂದಂ ತದೇತತ್ಸರ್ವಾಕಾರಾ ಮಹಾತ್ರಿಪುರಸುಂದರೀ । ತ್ವಂಚಾಹಂಚ ಸರ್ವಂ ವಿಶ್ವಂ ಸರ್ವದೇವತಾ ಇತರತ್ಸರ್ವಂ ಮಹಾತ್ರಿಪುರಸುಂದರೀ । ಸತ್ಯಮೇಕಂ ಲಲಿತಾಖ್ಯಂ ವಸ್ತು । ತದದ್ವಿತೀಯಮಖಂಡಾರ್ಥೇ ಪರಂಬ್ರಹ್ಮ ॥

ಸೈಷಾ ಪರಾಶಕ್ತಿಃ ಅವಳೇ ಪರಾಶಕ್ತಿಯು; ಬ್ರಹ್ಮ, ವಿಷ್ಣು, ರುದ್ರರಿಂದ ಅವಳ ಅಧಿಕತ್ವದಿಂದ ತುರೀಯಳಾಗಿ, ಸ್ವಪ್ರಧಾನತ್ವದಿಂದ ಪರತ್ವದ ಉತ್ಪತ್ತಿಯಾಗಿರುವುದು. ಇನ್ನು ತ್ರಿಮೂರ್ತಿಗಳು ನಿರ್ಗುಣತ್ವದಲ್ಲಿ ಉತ್ತೀರ್ಣರಾಗದೆ ಸಗುಣರಾಗಿರುವರು. ಅವಳು ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ ಎಂದು ಪ್ರಸಿದ್ಧವಾಗಿರುವ ಐದು ದೇವತೆಗಳಿಂದ ತುರ್ಯಾತೀತಳಾಗಿರುವಳು ಮತ್ತು ಸಗುಣತ್ವದಿಂದ ಕಂಡುಬರುವ ಸದಾಶಿವನಿಗೆ ಪರಾಶಕ್ತಿಯ ಅಧೀನತೆಯಿರುವುದು. ಹಾಗಾಗಿ ಬ್ರಹ್ಮ, ವಿಷ್ಣು, ರುದ್ರ, ಈಶ್ವರ, ಸದಾಶಿವ ಎಂಬ ಐವರು ದೇವತೆಗಳಿಗೆ ವಾಣೀ, ರಮಾ, ಉಮಾ, ಸಮನಾ, ಉನ್ಮನೀ ಎಂದು ಸಂಜ್ಞಿತರಾದ ಶಕ್ತಿಯರೊಡಗೂಡಿ ಮೂರ್ತರೂಪದಲ್ಲಿ ಜಗದ್ವ್ಯಾಪಾರದಲ್ಲಿ ಅಧಿಕೃತರಾಗಿರುವರು ಎಂಬುದು ಸಿದ್ಧವಾಗುವುದು. ಹಾಗೆ ಪರಾಶಕ್ತಿಯೇ ಸರ್ವಕಾರಣಸ್ವರೂಪಿಣಿಯಾಗಿರುವಳು. ***ಸೈಷಾ ಶಾಂಭವೀ ವಿದ್ಯಾ*** ಆ ಪರಾಶಕ್ತಿಯೇ ಶಂಭುಸಂಬಂಧಿನಿಯಾದ ಸಗುಣ–ನಿರ್ಗುಣ ವಿದ್ಯೆಯಾಗಿರುವಳು. ***ಕಾದಿ ವಿದ್ಯೇತಿ ವಾ ಹಾದಿ ವಿದ್ಯೇತಿ ವಾ ಸಾದಿ ವಿದ್ಯೇತಿ ವಾ ರಹಸ್ಯಂ*** ರಹಸ್ಯವಾಗಿರುವ ಕಏಈಲಹ್ರೀಂ ಎಂದಿರುವ ಪ್ರಥಮಪಾದದಿಂದ ಕಾದಿವಿದ್ಯೆಯೆಂದು, ಹಸಕಲಹ್ರೀಂ ಎಂಬ ದ್ವಿತೀಯಪಾದದಿಂದ ಹಾದಿವಿದ್ಯೆಯೆಂದು, ಸಕಲಹ್ರೀಂ ಎಂಬ ತೃತೀಯಪಾದವಿರುವುದರಿಂದ ಸಾದಿವಿದ್ಯೆಯೆಂದು

ಹೇಳಲ್ಪಡುವ ಆ ಪಂಚದಶಾಕ್ಷರೀ ಶ್ರೀವಿದ್ಯೆಯೇ ಶಾಂಭವೀವಿದ್ಯೆಯಾಗಿ ***ಓಂ ವಾಚಿ ಪ್ರತಿಷ್ಠಾ*** ಅದು ಓಂಕಾರ ವಚನದಲ್ಲಿ ಪ್ರತಿಷ್ಠಿತವಾಗಿದೆ ***ಓಂ*** ಎಂಬ ರಹಸ್ಯವು ಸತ್ಯವಾಗಿದೆ ಎಂಬ ಅರ್ಥವು. ***ಸೈವ ಪುರತ್ರಯಂ ಶರೀರತ್ರಯಂ ವ್ಯಾಪ್ಯ ಬಹಿರಂತರವಭಾಸಯಂತೀ ದೇಶಕಾಲವಸ್ತ್ವಂತರಸಂಗಾತ್ ಮಹಾತ್ರಿಪುರಸುಂದರೀ ವೈ ಪ್ರತ್ಯಕ್ಚಿತಿಃ*** ಪರಾಶಕ್ತಿಯು ಅಭ್ಯುದಯವನ್ನು ಬಯಸುವವರಿಗೆ ಮೂರ್ತರೂಪದಲ್ಲಿ ಉಪಾಸ್ಯಳಾಗಿರುವಳು ***ಸೈವಾತ್ಮಾ ತತೋಽನ್ಯದಸತ್ಯಮನಾತ್ಮಾ ಅತ ಏಷಾ ಬ್ರಹ್ಮಸಂವಿತ್ತಿರ್ಭಾವಾ ಭಾವಕಲಾ ವಿನಿರ್ಮುಕ್ತಾ*** ನಿಃಶ್ರೇಯಸ್ಸನ್ನು ಬಯಸುವವರಿಗೆ ಅಮೂರ್ತಚೈತನ್ಯರೂಪವಾಗಿ ಉಪಾಸ್ಯಳಾಗಿರುವಳು.

पञ्चरूपपरित्यागादस्वरूपप्रहाणतः ।
अधिष्ठानं परं तत्त्वमेकं सच्चिष्यते महदिति ॥

“प्रज्ञानं ब्रह्म” इति वा “अहं ब्रह्मास्मि” इति वा भाष्यते । “तत्त्वमसि” इत्येव सम्भाष्यते । “अयमात्मा ब्रह्म” इति वा “ब्रह्मैवाहमस्मि” इति वा “योहमस्मि” इति वा “सोहमस्मि” इति वा “योऽसौ सोहमस्मि” इति वा भाष्यते सैषा षोडशी श्रीविद्या पञ्चदशाक्षरी महात्रिपुरसुन्दरी बालाम्बिकेति वा सकलेति वा मातङ्गीति स्वयंवरकल्याणीति भुवनेश्वरीति चामुण्डेति चण्डेति वारहीति तिरस्करिणीति राजमातङ्गीति वा शुकश्यामलेति वा लघुश्यामलेति वा अश्वारूडेति वा प्रत्यङ्गिरा धूमावती सावित्री गायत्री सरस्वती ब्रह्मानन्दकलेति । ऋचः अक्षरे परमे व्योमन् । यस्मिनदेवा अधिविश्वा निषेदुः । यस्तन्नवेदकिमृचा करिष्यति । य इत्तद्विदुस्त इमे समासते । इत्युपनिषत् ॥

ಪಂಚರೂಪಪರಿತ್ಯಾಗಾದಸ್ವರೂಪಪ್ರಹಾಣತಃ ।
ಅಧಿಷ್ಠಾನಂ ಪರಂ ತತ್ತ್ವಮೇಕಂ ಸಚ್ಛಿಷ್ಯತೇ ಮಹದಿತಿ ॥

“ಪ್ರಜ್ಞಾನಂ ಬ್ರಹ್ಮ” ಇತಿ ವಾ “ಅಹಂ ಬ್ರಹ್ಮಾಸ್ಮಿ” ಇತಿ ವಾ ಭಾಷ್ಯತೇ । “ತತ್ತ್ವಮಸಿ” ಇತ್ಯೇವ ಸಂಭಾಷ್ಯತೇ । “ಅಯಮಾತ್ಮಾ ಬ್ರಹ್ಮ” ಇತಿ ವಾ “ಬ್ರಹ್ಮೈವಾಹಮಸ್ಮಿ” ಇತಿ ವಾ “ಯೋಽಹಮಸ್ಮಿ” ಇತಿ ವಾ “ಸೋಽಹಮಸ್ಮಿ” ಇತಿ ವಾ “ಯೋಽಸೌ ಸೋಽಹಮಸ್ಮಿ” ಇತಿ ವಾ ಯಾ ಭಾಷ್ಯತೇ ಸೈಷಾ ಷೋಡಶೀ ಶ್ರೀವಿದ್ಯಾ ಪಂಚದಶಾಕ್ಷರೀ ಮಹಾತ್ರಿಪುರಸುಂದರೀ ಬಾಲಾಂಬಿಕೇತಿ ವಾ ಸಕಲೇತಿ ವಾ ಮಾತಂಗೀತಿ ಸ್ವಯಂವರಕಲ್ಯಾಣೀತಿ ಭುವನೇಶ್ವರೀತಿ ಚಾಮುಂಡೇತಿ ಚಂಡೇತಿ ವಾರಾಹೀತಿ ತಿರಸ್ಕರಿಣೀತಿ ರಾಜಮಾತಂಗೀತಿ ವಾ ಶುಕಶ್ಯಾಮಲೇತಿ ವಾ ಲಘುಶ್ಯಾಮಲೇತಿ ವಾ ಅಶ್ವಾರೂಢೇತಿ ವಾ ಪ್ರತ್ಯಂಗಿರಾ ಧೂಮಾವತೀ ಸಾವಿತ್ರೀ

गायत्री सरस्वती ब्रह्मानंदकलेति । ಋಚಃ ಅಕ್ಷರೇ ಪರಮೇ ವ್ಯೋಮನ್ ।
ಯಸ್ಮಿನ್‌ದೇವಾ ಅಧಿವಿಶ್ವೇ ನಿಷೇದುಃ । ಯಸ್ತನ್ನವೇದಕಿಮೃಚಾ ಕರಿಷ್ಯತಿ । ಯ
ಇತ್ತದ್ವಿದುಸ್ತ ಇಮೇ ಸಮಾಸತೇ । ಇತ್ಯುಪನಿಷತ್ ॥

"ಪ್ರಜ್ಞಾನಂ ಬ್ರಹ್ಮ", "ಅಹಂ ಬ್ರಹ್ಮಾಸ್ಮಿ", "ತತ್ತ್ವಮಸಿ", "ಅಯಮಾತ್ಮಾ ಬ್ರಹ್ಮ" ಎಂಬ ನಾಲ್ಕು ಮಹಾವಾಕ್ಯಗಳಿಂದ ಅವಳು ಸಂಬೋಧಿಸಲ್ಪಡುವಳು. ಈ ಮಹಾವಾಕ್ಯ ಚತುಷ್ಟಯಗಳು ರಹಸ್ಯೋಪನಿಷತ್ತಿನಲ್ಲಿ ಪ್ರತಿಲೋಮವಾಗಿ ವರ್ಣಿತವಾಗಿದೆ ಎಂಬುದು ಇನ್ನೊಂದು ವಿಷಯ. ಇನ್ನು "ಬ್ರಹ್ಮೈವಾಹಮಸ್ಮಿ", "ಯೋಹಮಸ್ಮಿ", "ಸೋಹಮಸ್ಮಿ", "ಯೋಽಸೌ ಸೋಹಮಸ್ಮಿ" ಎಂಬ ವಾಕ್ಯಚತುಷ್ಟಯಗಳು ಹಿಂದೆ ತಿಳಿಸಿದ "ಪ್ರಜ್ಞಾನಂ ಬ್ರಹ್ಮ" ಮುಂತಾದ ವಾಕ್ಯಚತುಷ್ಟಯಗಳ ವಿಲಕ್ಷಣ ಅರ್ಥವನ್ನು ತಿಳಿಸುವುದಾಗಿ ಪುನರುಕ್ತಿಯ ದೋಷದ ಪ್ರಸಂಗವು ಏರ್ಪಡಬಹುದು. ಅವುಗಳಿಗೆ ಪೂರ್ವೋಕ್ತ ವಾಕ್ಯಾರ್ಥದ ವಿಲಕ್ಷಣತೆ ಇಲ್ಲದಿರುವುದೂ ಅಸಂಭವವು. "ಅಹಂ ಬ್ರಹ್ಮಾಸ್ಮಿ" ಮುಂತಾದವುಗಳನ್ನು ಅಭ್ಯಾಸ ವಿಷಯವಾಕ್ಯವಾಗಿ ಹೇಳಿದರೆ, ಅದು ವೃತ್ತಿ ಸೂಚಕವಾಗಿ ಆಗುವ ಅರ್ಹತೆಯೇ ಅದರ ವಿಲಕ್ಷಣತೆಯು ಎಂದು ತಿಳಿಯಬೇಕು. "ಪ್ರಜ್ಞಾನಂ ಬ್ರಹ್ಮ" ಮೊದಲಾದ ವಾಕ್ಯಗಳಲ್ಲಿ ಹಿಂದು ಹಿಂದಿನ ಸಾಧ್ಯತೆಯು ಮುಂದು ಮುಂದಿನ ಸಾಧನವಾಗುವಂತೆ "ಅಹಮಸ್ಮಿ" ಮುಂತಾದ ವಾಕ್ಯಗಳು ಕೂಡಾ ಇವೆ ಎಂದು ಹೇಳುವುದು ಯುಕ್ತವಾಗುತ್ತದೆ. ಮೊದಲನೆಯದನ್ನು ನಿಧಿಧ್ಯಾಸನ ಅಭ್ಯಾಸ ರೂಪದಲ್ಲಿ, ಎರಡನೆಯದನ್ನು ಮನನ ಅಭ್ಯಾಸ ರೂಪವಾಗಿ, ಮೂರನೆಯದನ್ನು ಶ್ರವಣ ಅಭ್ಯಾಸ ರೂಪದಲ್ಲಿ ಮತ್ತು ನಾಲ್ಕನೆಯದನ್ನು ದರ್ಶನ ಅಭ್ಯಾಸ ರೂಪವಾಗಿ ಸಾಧಿಸಬಹುದು. ದರ್ಶನ, ಶ್ರವಣ, ಮನನ, ನಿಧಿಧ್ಯಾಸನಗಳು ಉತ್ತರೋತ್ತರವಾಗಿ ಸಾಧ್ಯವಾಗುವುದರಿಂದ ಹಿಂದು ಹಿಂದಿನ ಸಾಧನತ್ವವನ್ನು ಸರ್ವತ್ರ ಹೇಳಿದೆ. ಹೀಗೆಯೇ ಎಲ್ಲವನ್ನೂ ತಿಳಿಯುವುದು. ಇದು ಮಹಾವಾಕ್ಯಗಳನ್ನು ಮುಮುಕ್ಷುಗಳು ಭಾವಿಸುವ ರೀತಿಯಾಗಿದೆ. ಆ ನಿರ್ಗುಣಚೈತನ್ಯ ಸ್ವರೂಪಿಣೀ ಪರಾಶಕ್ತಿಯ ವ್ಯವಹಾರದಶೆಯನ್ನು ಷೋಡಶೀ, ಶ್ರೀವಿದ್ಯಾ, ಕಾದಿಪಂಚದಶಾಕ್ಷರೀ, ಮಹಾತ್ರಿಪುರಸುಂದರೀ ಮುಂತಾದ ಸಗುಣ ಹೆಸರುಗಳಿಂದ ಕರೆಯುವ ಅಭ್ಯುದಯಾರ್ಥಿಗಳು ಭಾವಿಸುವ ಸ್ವರೂಪವಾಗಿದೆ.

ಇನ್ನು ನಿಃಶ್ರೇಯಸ್ಸಿನವರು ಮತ್ತು ಅಭ್ಯುದಯಪರರಲ್ಲಿ ಕತ್ತಲೆ-ಪ್ರಕಾಶದಂತೆ ಇರುವ ವಿರುದ್ಧತ್ವವು ಸರ್ವಶಾಸ್ತ್ರಗಳಲ್ಲಿಯೂ ಪ್ರಸಿದ್ಧವಾಗಿದೆ. ನಿಃಶ್ರೇಯಸ್ಸಿನಲ್ಲಿ ಜ್ಞಾನಿವಿಷಯತ್ವವಿದ್ದು ಅಭ್ಯುದಯದಲ್ಲಿ ಅಜ್ಞಾನಿವಿಷಯತ್ವವಿದೆ. ಅದನ್ನು ಈ ಉಪನಿಷತ್ತಿನಲ್ಲಿ ನಿಃಶ್ರೇಯಸ್ಸಿನ ಅರ್ಥದಲ್ಲಿ ನಿರ್ಗುಣೋಪಾಸನೆಯಾಗಿಯೂ, ಅಭ್ಯುದಯದ ಅರ್ಥದಲ್ಲಿ ಸಗುಣೋಪಾಸನೆಯಾಗಿಯೂ ಪ್ರಸ್ತಾಪಿಸಿರುವುದು ಕಂಡುಬರುತ್ತದೆ. ಅದು ಒಂದು ವಾಕ್ಯದಲ್ಲಿಯೇ ಗೊತ್ತಾಗುವುದಿಲ್ಲ. "ಪ್ರಜ್ಞಾನಂ ಬ್ರಹ್ಮ" ಮುಂತಾದ ಮಹಾವಾಕ್ಯಗಳನ್ನು ಸಗುಣಬ್ರಹ್ಮದ ಪರವಾಗಿ ಕಲ್ಪಿಸುವುದು ಉಚಿತವಲ್ಲ ಮತ್ತು ಮಹಾತ್ರಿಪುರಸುಂದರೀ ಮುಂತಾದ ಶಬ್ದಗಳನ್ನು ನಿರ್ಗುಣಬ್ರಹ್ಮದ ಪರವಾಗಿ ಕಲ್ಪಿಸುವುದೂ ಉಚಿತವಲ್ಲ. ಅವುಗಳ ವಿರುದ್ಧಭಾವವನ್ನೇ ಇಲ್ಲಿ ಉಪಪಾದಿಸಿದೆ.

ನಿಃಶ್ರೇಯಸ್ಸು-ಅಭ್ಯುದಯ ಎರಡೂ ಫಲಗಳಸಿದ್ಧಿಗಾಗಿ ನಿರ್ಗುಣ-ಸಗುಣ ಸಮುಚ್ಚಯ ಉಪಾಸನೆಯ ವಿಷಯವನ್ನೂ ಮಧ್ಯಮಾಧಿಕಾರಿಗಳ ಅಪೇಕ್ಷೆಯಂತೆ ಪ್ರಸ್ತಾಪಿಸಿದೆ. ಮಂದಾಧಿಕಾರಿಗಳು ಸಗುಣೋಪಾಸಕರಾಗಿದ್ದು, ಉತ್ತಮಾಧಿಕಾರಿಗಳು ನಿರ್ಗುಣೋಪಸಕರಾಗಿರುವರು. ಸಗುಣ-ನಿರ್ಗುಣ ಉಪಾಸನೆಯಲ್ಲಿ ಕತ್ತಲೆ-ಪ್ರಕಾಶದಂತೆ ವಿರುದ್ಧ ಕಲ್ಪನೆಗಳಿದ್ದು, ಉತ್ತಮಾಧಿಕಾರಿಗಳ ದೃಷ್ಟಿಯೇ ಅರ್ಹವಾಗಿದೆ, ಮಧ್ಯಮಾಧಿಕಾರಿಗಳ ದೃಷ್ಟಿಯಲ್ಲ.

ಸಮುಚ್ಚಯ ಉಪಾಸನೆಯ ಫಲಭೂತವಾಗಿ ನಿಃಶ್ರೇಯಸ್ಸು–ಅಭ್ಯುದಯಗಳ ಸಾಮಾನಾಧಿಕರಣ್ಯದಿಂದ ಪರಮೇಶ್ವರನಿಂದ ನಿಯಮಿತವಾದ ಅಧಿಕಾರದಿಂದ ಬ್ರಹ್ಮ, ವಿಷ್ಣು, ರುದ್ರ ಮುಂತಾದವರು ಕೇಳಿಬರುವರು. ಆ ಅಧಿಕಾರಿಗಳಿಗೆ ವ್ಯತಿರಿಕ್ತವಾದ ಉಭಯಫಲಗಳೂ ಸಿದ್ಧಿಸುವ ಶಕ್ಯತೆಯು ಅಸಂಭವನೀಯ. ಸಮುಚ್ಚಯ ಉಪಾಸನೆಯಲ್ಲಿ ಸಿದ್ಧರಾದವರಿಗೆ ಸಮುಚ್ಚಯಫಲವೇ ಲಭಿಸುವುದು. ಆದುದರಿಂದ ಅಧಿಕಾರಿಭೇದದಿಂದ ಉಭಯಲಿಂಗಿಗಳೂ ಪ್ರವೃತ್ತರಾಗುವುದಕ್ಕೆ ಈ ಉಪನಿಷತ್ತಿನಲ್ಲಿ ಸ್ವಲ್ಪವೂ ವಿರೋಧವಿಲ್ಲ.

ವಿದ್ವಾಂಸರು ಈ ಶಬ್ದಬ್ರಹ್ಮವನ್ನು ಪರಬ್ರಹ್ಮವೇ ಆಗಿರುವ ಭಾವದಿಂದ ಪ್ರಯೋಜನವನ್ನು ಹೊಂದಲು ಋಚ ಮೊದಲಾದವನ್ನು ತೋರಿಸಿ ಉಪನಿಷತ್ತನ್ನು ಉಪಸಂಹರಿಸುವ **ಋಚ ಇತಿ.** ***ಋಚಃ*** ಋಕ್ ಮೊದಲಾದ ವೇದಮಂತ್ರಗಳು ***ವಿಶ್ವೇ*** ವಿಶ್ವದ ಸರ್ವ ***ದೇವಾ*** ದೇವತೆಗಳೂ ***ಅಕ್ಷರೇ*** ಅವಿನಾಶಿನಿ ***ಪರಮೇ*** ಸರ್ವೋತ್ಕೃಷ್ಟವಾದ ***ಯಸ್ಮಿನ್ ವ್ಯೋಮನ್*** ಅವಕಾಶದಲ್ಲಿ, ಚಿದಾಕಾಶದಲ್ಲಿ ***ಅಧಿ ನಿಷೇದುಃ*** ಲೀನವಾಗುವುವು. ಚಿದಾಕಾಶಾತ್ಮಕ ನಿರ್ಗುಣಪರಬ್ರಹ್ಮದಲ್ಲಿ ಸಕಲ ವೇದಗಳ ಮತ್ತು ದೇವತೆಗಳ ಅಧಿಷ್ಠಾನತ್ವದಿಂದ ಕೈಮುತಿಕನ್ಯಾಯದಂತೆ ನರ, ತಿರ್ಯಕ್ ಮೊದಲಾದ ಉಳಿದ ಪ್ರಪಂಚದ ಅಧಿಷ್ಠಾನತ್ವವೂ ಲಕ್ಷಿತವಾಗುವುದು. ***ಯಃ ತತ್ ನ ವೇದ*** ಅದರ ಅಕ್ಷರತ್ವ ಮೊದಲಾದ ಲಕ್ಷಣಗಳು ಪರಬ್ರಹ್ಮವನ್ನು ತಿಳಿಯಲೂ ಆಗುವುದಿಲ್ಲ ಮತ್ತು ತಿಳಿಸಲೂ ಆಗುವುದಿಲ್ಲ ಎಂದು ಹೇಳುತ್ತವೆಯಾದುದರಿಂದ ಬ್ರಹ್ಮ ಹಾಗೂ ಆತ್ಮನ ಐಕ್ಯತೆಯ ಜ್ಞಾನಹೀನರು ***ಋಚಾ*** ವೇದಗಳ ಮೂಲಕ ಶಬ್ದಬ್ರಹ್ಮನನ್ನು ಮಾತ್ರವೇ ಅಧ್ಯಯನ ಮಾಡಬಹುದು ಎಂಬ ಅರ್ಥದಲ್ಲಿ. ***ಕಿಂ ಕರಿಷ್ಯತಿ*** ಅದರಿಂದ ಏನು ಪ್ರಯೋಜನವಿದೆ?

ಶಬ್ದಬ್ರಹ್ಮಣಿ ನಿಷ್ಣಾತೋ ನ ನಿಷ್ಣಾಯಾತ್ಪರೇ ಯದಿ ।
ಶ್ರಮಃ ಶ್ರಮಫಲಂ ತಸ್ಯ ಹ್ಯಧೇನುಮಿವ ರಕ್ಷತಃ ॥

ಎಂಬ ವಚನವು ಪರಬ್ರಹ್ಮಜ್ಞಾನಹೀನನ ಅಧೀನವಾಗಿರುವ ಶಬ್ದಬ್ರಹ್ಮನು ಶ್ರಮಮಾತ್ರ ಫಲತ್ವವುಳ್ಳವನು ಎಂದು ಹೇಳಿದೆ. ***ಯ ತತ್*** ಹೀಗಿರುವ ಪರಬ್ರಹ್ಮನು ***ಇತ್*** ಹೀಗೆ, ಪೂರ್ವೋಕ್ತ ಪ್ರಕಾರವಾಗಿ ***ವಿದುಸ್ತ*** ಅರಿವುಳ್ಳವರನ್ನು ***ಇಮೇ*** ವರ್ತಮಾನದಲ್ಲಿ ಜೀವನ್ಮುಕ್ತರನ್ನು ***ಸಮಾಸತೇ*** ಪರಬ್ರಹ್ಮನಲ್ಲಿ ಉತ್ತಮವಾಗಿ ಆಸೀನರಾಗಿಸಲಿ, ಒಂದಾಗಿಸಲಿ ಎಂಬ ಅರ್ಥವು.

ಇದರ ಭಾವವು ಹೀಗಿದೆ: ಲೋಕದಲ್ಲಿರುವ ಸಮಸ್ತ ವೇದಮಂತ್ರಗಳನ್ನು ಅರಿತಿರುವ ಪುರುಷನು ಕೂಡ ಅದು ಅದರ ಪರಮತಾತ್ಪರ್ಯವಾದ ಪರಬ್ರಹ್ಮದೊಡನೆ ಐಕ್ಯವಿರುವ ಪರೋಕ್ಷಜ್ಞಾನದ ಅನುಭವಹೀನನಾಗಿದ್ದರೆ, ಆಗ ಅವನ ಅಧ್ಯಯನದ ಶ್ರಮವು ಚಿತ್ತಶುದ್ಧಿಯು ಮಾತ್ರ ಪ್ರಯೋಜನವುಳ್ಳದ್ದಾಗಿರುವುದು, ಸದ್ಯೋಮುಕ್ತಿಯ ಪ್ರಯೋಜನವಿಲ್ಲ ಎಂದು.

ಇತ್ಯುಪನಿಷತ್ ಹೀಗಿದೆ ಉಪನಿಷತ್ತು.

समाप्तेयं बह्वृचोपनिषत् ॥
ಸಮಾಪ್ತೇಯಂ ಬಹ್ವೃಚೋಪನಿಷತ್ ॥

ಇತಿ ಶ್ರೀಮತ್ಸುಂದರೇಶ್ವರತಾತಪಾದಶಿಷ್ಯ ಅಪ್ಪಯ್ಯದೀಕ್ಷಿತಾಚಾರ್ಯಕೃತೌ ಬಹ್ವೃಚೋಪನಿಷದ್ಭಾಷ್ಯಂ ಸಮಾಪ್ತಮ್ । ಶಿವಮ್ ॥

ಓಮ್ ವಾಗ್ಮೇ ಮನಸಿ ಪ್ರತಿಷ್ಠಿತಾ । ಮನೋ ಮೇ ವಾಚಿ ಪ್ರತಿಷ್ಠಿತಮ್ ॥ ಆವಿರಾವೀರ್ಮ ಏಧಿ ॥
ವೇದಸ್ಯ ಮ ಆಣೀಸ್ಥಃ ಶ್ರುತಂ ಮೇ ಮಾ ಪ್ರಹಾಸೀಃ ॥
ಅನೇನಾಧೀತೇನಾಹೋರಾತ್ರಾನ್ ಸಂದಧಾಮಿ । ಋತಂ ವದಿಷ್ಯಾಮಿ । ಸತ್ಯಂ ವದಿಷ್ಯಾಮಿ ॥
ತನ್ಮಾಮವತು । ತದ್ವಕ್ತಾರಮವತು । ಅವತುಮಾಂ ಅವತುವಕ್ತಾರಮವತುವಕ್ತಾರಮ್ ॥
ಓಮ್ ಶಾಂತಿಃ ಶಾಂತಿಃ ಶಾಂತಿಃ ॥

॥ ॐ तत् सत् ॥ ॐ ತತ್ ಸತ್॥

श्री श्री भगवत्यै नमः ॥

ಶ್ರೀ ಶ್ರೀ ಭಗವತ್ಯೈ ನಮಃ ॥

अरुणोपनिषत् ।

ಅರುಣೋಪನಿಷತ್ ।

(ಲಕ್ಷ್ಮೀಧರ ವ್ಯಾಖ್ಯೆ)

ओं भद्रंकर्णेभिः श्रुणुयाम देवाः भद्रं पश्येमाक्षभिर्यजत्राः ।
स्थिररङ्गैःस्तुष्टुवाग्ं सस्तनूभिः व्यशेमदेवहितं यदायूः ।
स्वस्तिनः इन्द्रो वृद्धश्रवा स्वस्तिनः पूषा विश्ववेदाः ।
स्वस्तिनस्ताक्ष्र्यो अरिष्टनेमिः स्वस्तिनो बृहस्पतिर्दधातु ॥

ओं शान्तिः शान्तिः शान्तिः ॥

ಓಂ ಭದ್ರಂಕರ್ಣೇಭಿಃ ಶ್ರುಣುಯಾಮ ದೇವಾಃ ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।
ಸ್ಥಿರೈರಂಗೈಃಸ್ತುಷ್ಟುವಾಗ್ಂ ಸಸ್ತನೂಭಿಃ ವ್ಯಶೇಮದೇವಹಿತಂ ಯದಾಯೂಃ ।
ಸ್ವಸ್ತಿನಃ ಇಂದ್ರೋ ವೃದ್ಧಶ್ರವಾ ಸ್ವಸ್ತಿನಃ ಪೂಷಾ ವಿಶ್ವವೇದಾಃ ।
ಸ್ವಸ್ತಿನಸ್ತಾರ್ಕ್ಷ್ಯೋ ಅರಿಷ್ಟನೇಮಿಃ ಸ್ವಸ್ತಿನೋ ಬೃಹಸ್ಪತಿರ್ದಧಾತು ॥

ಓಂ ಶಾಂತಿಃ ಶಾಂತಿಃ ಶಾಂತಿಃ ॥

इमा नुकं भुवना सीषधेम ।

ಇಮಾ ನುಕಂ ಭುವನಾ ಸೀಷಧೇಮ ।

ಪೃಶ್ನಿಗಳೆಂಬ ಮುನಿಗಳು ಪರಸ್ಪರ ಸಂಭಾಷಿಸಿಕೊಳ್ಳುತ್ತಿದ್ದಾರೆ – ***ಇಮಾಂ*** ಈ ಚಕ್ರವಿದ್ಯೆಯನ್ನು ***ನುಕಂ*** ಸಂಭಾವನಾರ್ಥದಲ್ಲಿ ***ಭುವನಾ*** ಲೋಕಗಳನ್ನು ***ಸೀಷಧೇಮ*** ಚೆನ್ನಾಗಿ ತಿಳಿಯುವೆವು. ಶ್ರೀಚಕ್ರವಿದ್ಯೆಯನ್ನು ಆಶ್ರಯಿಸಿಯೇ ಸಮಸ್ತ ಲೋಕಗಳು ನೆಲೆಸಿವೆ ಎಂದು ತರ್ಕಿಸಿ ತಿಳಿಯುವೆವು. ಅಥವಾ ಈ ಚಕ್ರವಿದ್ಯೆಯನ್ನು ಭುವನರೂಪವಾಗಿ ತಿಳಿಯುವೆವು. ***ನುಕಂ*** ಪ್ರಶ್ನಾರ್ಥದಲ್ಲಿದೆ. 'ನು ಪೃಚ್ಛಾಯಾಂ ವಿತರ್ಕೇ ಚ' ಎಂದು ಅಮರಕೋಶದಲ್ಲಿದೆ.

इन्द्रश्च विश्वे च देवाः ।

ಇಂದ್ರಶ್ಚ ವಿಶ್ವೇ ಚ ದೇವಾಃ ।

ಇಂದ್ರಶ್ಚ ವಿಶ್ವೇ ಚ ದೇವಾಃ ಇಂದ್ರನು ಮತ್ತು ಎಲ್ಲ ದೇವತೆಗಳೂ ಎಂದು ಅರ್ಥವು ಸ್ಪಷ್ಟವಾಗಿದೆ; ಅವರೆಲ್ಲರೂ ಚಕ್ರವಿದ್ಯೆಯನ್ನು ಆಶ್ರಯಿಸಿದ್ದಾರೆ ಎಂದು ಪೂರ್ತಿಮಾಡಿಕೊಳ್ಳಬೇಕು.

यज्ञं च नस्त्वनं च प्रजां च ।
आदित्यैरिन्द्रः सह सीषधातु ॥
ಯಜ್ಞಂ ಚ ನಸ್ತನ್ವಂ ಚ ಪ್ರಜಾಂ ಚ ।
ಆದಿತ್ಯೈರಿಂದ್ರಃ ಸಹ ಸೀಷಧಾತು ॥

ಯಜ್ಞಂ ಅಗ್ನಿಷ್ಟೋಮ ಮುಂತಾದ ***ನಃ*** ನಮಗೆ ***ತನ್ವಂ*** ಶರೀರಾರ್ಧ, ಪತ್ನಿ ***ಪ್ರಜಾಂ*** ಸಂತಾನವನ್ನು. ಚಕಾರಗಳು ಒಟ್ಟುಗೂಡಿಸುತ್ತವೆ. ***ಆದಿತ್ಯೈಃ*** ಮರುದ್ಗಣಗಳು ***ಇಂದ್ರಃ*** ಇಂದ್ರನ ***ಸಹ*** ಜೊತಗೂಡಿ; ಚಕ್ರವಿದ್ಯೆಯ ಉಪಾಸನೆಯಿಂದ ಗಳಿಸಿದ ಪರಮೈಶ್ವರ್ಯ; ***ಸೀಷಧಾತು*** ಸಂಪಾದಿಸಿದ. ಇಂದ್ರನು ಮರುದ್ಗಣಗಳೊಡನೆ ಚಕ್ರವಿದ್ಯೆಯ ಉಪಾಸನೆಯಿಂದ ಪರಮೈಶ್ವರ್ಯವನ್ನು ಸಂಪಾದಿಸಿದವನಾಗಿ, ಚಕ್ರವಿದ್ಯೆಯನ್ನು ನಮಗೆ ಉಪದೇಶಿಸಿ ಅಗ್ನಿಷ್ಟೋಮ ಮುಂತಾದ ಯಜ್ಞಗಳನ್ನು, ಶರೀರಾರ್ಧರೂಪಿಣಿಯಾದ ಉತ್ತಮ ಪತ್ನಿಯನ್ನು, ಉತ್ತಮ ಸಂತಾನವನ್ನು ಮತ್ತು ಎಲ್ಲ ವಿಧದ ಸಂಪತ್ತನ್ನು ಒದಗಿಸಿಕೊಡಲಿ.

आदित्यैरिन्द्रः सगणो मरुद्भिः ।
अस्माकं भूत्वविता तनूनाम् ॥
ಆದಿತ್ಯೈರಿಂದ್ರಃ ಸಗಣೋ ಮರುದ್ಭಿಃ ।
ಅಸ್ಮಾಕಂ ಭೂತ್ವವಿತಾ ತನೂನಾಮ್ ॥

ಆದಿತ್ಯೈರಿಂದ್ರಃ ಸಗಣೋ ಮರುದ್ಭಿಃ । ಅಸ್ಮಾಕಂ ತನೂನಾಮ್ ಪುತ್ರ ಮಿತ್ರ ಕಳತ್ರಗಳ ***ಅವಿತಾ*** ರಕ್ಷಕನಾಗಿ ***ಭೂತು*** ಇರುವನು. ಆದಿತ್ಯರಿಂದಲೂ ಮರುದ್ಗಣಗಳಿಂದಲೂ ಕೂಡಿದ ಇಂದ್ರನು ನಮ್ಮ ಪುತ್ರ ಮಿತ್ರ ಕಳತ್ರಾದಿಗಳ ರಕ್ಷಕನಾಗಿರುವನು. ಇಂದ್ರನೇ ನಮ್ಮ ಯೋಗಕ್ಷೇಮದ ಸಂಪಾದಕನು ಎಂಬ ಭಾವ.

अप्लवस्य प्रप्लवस्य ॥
ಅಪ್ಲವಸ್ಯ ಪ್ರಪ್ಲವಸ್ಯ ॥

ಅಪ್ಲವಸ್ಯ ಪ್ರಪ್ಲವಸ್ಯ ಪೃಶ್ನಿಮುನಿಗಳು ಚಕ್ರವಿದ್ಯೆಯನ್ನು ಪ್ರಸ್ತಾಪಿಸುತ್ತಾರೆ. ಆಪಾದಮಸ್ತಕವಾಗಿ *ಪ್ಲವನಂ* ಅಮೃತಸೇಚನೆಯನ್ನು ಮಾಡು; ಎಪ್ಪತ್ತೆರಡುಸಾವಿರ ನಾಡೀಮಾರ್ಗಗಳಲ್ಲಿ ಪೂರ್ಣ ಸೇಚನೆಯನ್ನು ಮಾಡು.

आण्डीभव ज मा मुहुः ॥
ಆಂಡೀಭವ ಜ ಮಾ ಮುಹುಃ ॥

ಆಂಡೀ ಚ್ವಿ ಪ್ರತ್ಯಯದಿಂದ ಅಂತ್ಯವಾಗುವ ಶಬ್ದ; ಆಂಡ ಅಂದರೆ ಪಿಂಡಾಂಡ ಬ್ರಹ್ಮಾಂಡ. ನಮ್ಮದಾದ ಪಿಂಡಾಂಡರೂಪದಲ್ಲಿಯೂ, ನಿನ್ನದಾದ ಬಾಹ್ಯ ಬ್ರಹ್ಮಾಂಡರೂಪದಿಂದಲೂ ***ಭವ*** ಪ್ರಾಪ್ತವಾಗು. ನಿನ್ನ

ಸಾಯುಜ್ಯವನ್ನು ನೀಡು ಎಂಬ ಅರ್ಥದಲ್ಲಿ. ***(ಅ)ಜ*** ತಿಳಿದುಕೋ ***ಮುಹುಃ*** ಮತ್ತೆ ಮತ್ತೆ ನನ್ನನ್ನು ತಿಳಿದುಕೋ, ಅನುಗ್ರಹಿಸು ಎಂಬ ಅರ್ಥದಲ್ಲಿ. 'ಅಜ ಗತೌ' ಎಂಬ ಧಾತುವಿಗೆ ಛಾಂದಸವಾಗಿ ಅಕಾರ ಲೋಪವಾಗಿದೆ.

सुखादीन्दुःखनिधनाम् ॥
ಸುಖಾದೀಂದುಃಖನಿಧನಾಮ್ ॥

ಸುಖಾದಿ ಇಂದುಃ ಸುಖವನ್ನು ಬರುವಂತೆಮಾಡುವವನು *ಸುಖಾದಿಯು*, ಸುಖ ಸಂಪಾದಕನು *ಇಂದುಃ* ಬೈಂದವಸ್ಥಾನದಲ್ಲಿರುವ ಚಂದ್ರನು ***ಖನಿಧನಾಂ*** ಖಂ ಅಂದರೆ ಬೈಂದವಸ್ಥಾನವೇ ಶ್ರೇಷ್ಠವಾದ ಸಂಪತ್ತಾಗಿ ಉಳ್ಳ. ಅಥವಾ ***ಸುಖಾದೀಂ*** ಸುಖವು ಮೊದಲಾಗುವ, ಸುಖಾತ್ಮಕವಾದ ***ದುಃಖನಿಧನಾಂ*** ದುಃಖವು ನಿಧನವಾಗುವ, ನಾಶವಾಗುವ ಅಂದರೆ ದುಃಖದ ಲವಲೇಶ ಅರಿವು ಇಲ್ಲದಂತಹ. ಅಥವಾ ***ಸುಖಾದೀಂ*** *ಸು* ಉತ್ತಮವಾದ *ಖ* ಇಂದ್ರಿಯ, ಮನಸುಗಳಿಂದ *ಆದೀಂ* ಆದ್ಯವಾಗಿರುವ, ಮನೋವೇದ್ಯವಾಗಿರುವ ***ದುಃಖನಿಧನಾಂ*** ದುಃಖಗಳಿಗೆ, ಚಕ್ಷುರಾದಿ ದುಷ್ಟ ಇಂದ್ರಿಯಗಳಿಗೆ ಅಗೋಚರವಾಗಿರುವ. (ಈ ಪದವು ಮುಂದಿನ 'ಪುರಂ' ಪದದೊಡನೆ ಅನ್ವಯವಾಗುವುದು).

प्रतिमुञ्चस्व स्वां पुरम् ॥
ಪ್ರತಿಮುಂಚಸ್ವ ಸ್ವಾಂ ಪುರಮ್ ॥

ಸ್ವಾಂ ಭಗವತೀಯ ***ಪುರಂ*** ಶರೀರವು ***ಪ್ರತಿಮುಂಚಸ್ವ*** ಅಧಿಷ್ಠಿತವಾಗಿರುವುದು. ಭಗವತೀಯಾದ ನಿನಗೆ ಸೇರಿದ ಈ ಶರೀರದಲ್ಲಿ ನೆಲೆಸು.

मरीचयः स्वायम्भुवाः ॥
ಮರೀಚಯಃ ಸ್ವಾಯಂಭುವಾಃ ॥

ಸ್ವಾಯಂ ಸ್ವಯಂ ಭಗವತೀಯ ಅವಕಾಶದಿಂದ ***ಭವಾ*** ಉತ್ಪನ್ನವಾದ ***ಮರೀಚಯಃ*** ಮಯೂಖಗಳು, ಕಿರಣಗಳು. ಸರ್ವ ಭುವನಗಳನ್ನು ಆವರಿಸಿಕೊಂಡಿವೆ ಎಂದು ಸೇರಿಸಿಕೊಳ್ಳಬೇಕು. ಸೂರ್ಯ ಚಂದ್ರ ಅಗ್ನಿಗಳಿಗೆ ಪ್ರಕಾಶಕತ್ವವು ಉಂಟಾಗಿರುವುದು ಸ್ವಾಯಂಭುವ ಮರೀಚಿಗಳ ಅನುಗ್ರಹದಿಂದ ಎಂದು ಮುಂದೆ ತಿಳಿಸಲಾಗುವುದು.

ये शरीराण्यकल्पयन् ॥
ಯೇ ಶರೀರಾಣ್ಯಕಲ್ಪಯನ್ ॥

ಈ ಮಯೂಖಗಳು, ಮುನ್ನೂರಅರುವತ್ತು ಸಂಖ್ಯೆಯ ಕಿರಣಗಳು ಶರೀರಗಳನ್ನು, ಕಾಲಾತ್ಮಕವಾದ ಮುನ್ನೂರಅರುವತ್ತು ದಿನಗಳ ಸಂವತ್ಸರವನ್ನು ಉಂಟುಮಾಡಿವೆ. 'ಹಾಯನಾತ್ಮಾ ಪ್ರಜಾಪತಿಃ', 'ಸಂವತ್ಸರೋ ವೈ ಪ್ರಜಾಪತಿಃ' (ತೈ.ಬ್ರಾ 1–6–2) ಸಂವತ್ಸರವೇ ಪ್ರಜಾಪತಿಯು ಎಂಬ ಶ್ರುತಿಯಿದೆ.

ते ते देहं कल्पयन्तु ॥
ತೇ ತೇ ದೇಹಂ ಕಲ್ಪಯಂತು ॥

ತೇ ಆ ಮರೀಚಿಗಳು ***ತೇ*** ಭಗವತೀಯಾದ ನಿನ್ನ ***ದೇಹಂ*** ದೇಹವನ್ನು ***ಕಲ್ಪಯಂತು*** ಆಶ್ರಯಿಸಲಿ. ದೇಹವೆಂದರೆ ಅವಯವವಾದ ಚರಣಗಳು ಲಕ್ಷಿತವಾಗುವುವು. ಕಿರಣಗಳು ಭಗವತೀಯ ಚರಣಗಳಿಂದ ಉತ್ಪನ್ನವಾಗಿವೆ ಎಂಬ ಅರ್ಥದಲ್ಲಿ.

मा च ते ख्या स्म तीरिषत् ॥

ಮಾ ಚ ತೇ ಖ್ಯಾ ಸ್ಮ ತೀರಿಷತ್ ॥

ನಿನ್ನ ***ಖ್ಯಾ*** ಖ್ಯಾತಿಯು, ಜ್ಞಾನವು ***ಮಾ ಚ ತೀರಿಷತ್*** ನಮ್ಮನ್ನು ಬಿಡದಿರಲಿ. ನಿನ್ನ ವಿಷಯಕ ಜ್ಞಾನವು ನಮಗೆ ಸದಾ ಸಿದ್ಧಿಸಲಿ ಎಂಬ ಅರ್ಥದಲ್ಲಿ.

ಮುಂದೆ ಪೃಶ್ನಿಗಳು ಚಕ್ರವಿದ್ಯೆಯ ಅನುಷ್ಠಾನದಲ್ಲಿ ತ್ವರೆ ಮಾಡುವವರಾಗಿ ಪರಸ್ಪರ ಸಂಭಾಷಿಸುತ್ತಾರೆ.

उत्तिष्ठत मा स्वप्त । अग्निमिच्छध्वं भारताः ।
राज्ञः सोमस्य तृप्तासः । सूर्येण सयुजोषसः ॥

ಉತ್ತಿಷ್ಠತ ಮಾ ಸ್ವಪ್ತ । ಅಗ್ನಿಮಿಚ್ಛಧ್ವಂ ಭಾರತಾಃ ।
ರಾಜ್ಞಃ ಸೋಮಸ್ಯ ತೃಪ್ತಾಸಃ । ಸೂರ್ಯೇಣ ಸಯುಜೋಷಸಃ ॥

ಹೇ ***ಭಾರತಾಃ*** *ಭಾ* ರೂಪದ, ಜ್ಯೋತಿರೂಪದ ಚಕ್ರವಿದ್ಯೆಯಯನ್ನು *ರತಾಃ* ಉಪಾಸಿಸುವವರೇ. ಅಥವಾ ಭಾರತಿಯ, ಸರಸ್ವತಿಯ, ಶ್ರೀವಿದ್ಯೆಯ ಉಪಾಸಕರೇ. ಸಾಮಾನ್ಯ ಅರ್ಥದಲ್ಲಿ ತೊಡಗಿಸಿದ ಪ್ರತ್ಯಯವು ವಿಶೇಷವಾಚಕ ಆಗುವುದರಿಂದ *ಭಾರತಾ* ಆಗುವುದು. ***ಉತ್ತಿಷ್ಠತ*** ಉಪಾಸನೆಯನ್ನು ಆರಂಭವನ್ನು ಮಾಡಿರಿ. ***ಮಾ ಸ್ವಪ್ತ*** ಅಪ್ರಮತ್ತರಾಗಿ, ಪ್ರಮಾದವಿಲ್ಲದೆ. ***ಅಗ್ನಿಮಿಚ್ಛಧ್ವಂ*** ಸ್ವಾಧಿಷ್ಠಾನಾಗ್ನಿಯನ್ನು ಪ್ರಜ್ವಲಿಸಿರಿ. ***ರಾಜ್ಞಃ*** ಚಂದ್ರನ. ***ಸೋಮಸ್ಯ*** ಉಮೆಯಿಂದ ಕೂಡಿದವನು; ಚಂದ್ರಮಂಡಲದಲ್ಲಿರುವ ಬೈಂದವಸ್ಥಾನದಲ್ಲಿ ದೇವೀಯಿರುವುದರಿಂದ ಚಂದ್ರನು ಸೋಮವಾಚಕನಾಗಿದ್ದಾನೆ, ಅಂತಹ ಚಂದ್ರನ ಅಮೃತಪ್ರವಾಹಗಳಿಂದ. ***ತೃಪ್ತಾಸಃ*** ತೃಪ್ತರಾಗಿ. ***ಸೂರ್ಯೇಣ*** ಅನಾಹತ ವಿಶುದ್ಧಿಚಕ್ರಗಳ ಮಧ್ಯೆಯಿರುವ ಸೂರ್ಯನೊಡನೆ ***ಸಯುಜಾ*** ಜೊತೆಗೂಡಿರುವ; ಅಗ್ನಿ ಮತ್ತು ಚಂದ್ರರ ಮಧ್ಯೆಯಿರುವ. ಅಥವಾ ಸೂರ್ಯನೊಡನೆ ಜೊತೆಯಾಗಿರುವ ರಾಜನಾದ ಸೋಮನಿಂದ ತೃಪ್ತರಾಗಿ ಎಂದು ಅನ್ವಯವಾಗುವುದು. ಎಂತಹವರು? ***ಉಷಸಃ*** ಮಾಯಾಮಯ ಕ್ಲೇಶಗಳು ದಗ್ಧವಾಗಿರುವವರು. ಅಥವಾ ಉಷಃಕಾಲದಲ್ಲಿ ಧ್ಯಾನನಿರತರಾಗುವವರು. ಆ ಸಮಯದಲ್ಲಿ ಭಗವತೀಯ ನಿಧಿಧ್ಯಾಸನವು ವಿಹಿತವಾಗಿದೆ.

ಮುಂದಕ್ಕೆ ಪೃಶ್ನಿಗಳು ಪೂಜಾಸಾಮಗ್ರಿಗಳನ್ನು ಉಪದೇಶಿಸುತ್ತಾರೆ.

युवा सुवासाः ॥

ಯುವಾ ಸುವಾಸಾಃ ॥

ಯುವಾ ದೃಢಾಂಗರು ಸ್ವಸ್ಥರಾದವರು ***ಸುವಾಸಾಃ*** ಶುಭ್ರವಸ್ತ್ರಧಾರಿಗಳು; ಇದು ಶುಭ್ರ ಆಭರಣ, ಶುಭ್ರಮಾಲೆಗಳು ಇತ್ಯಾದಿಗಳನ್ನು ಉಪಲಕ್ಷಣವಾಗಿ ಸೂಚಿಸುತ್ತದೆ. ಹಾಗಿರುವವನಾಗಿ ಪೂಜಿಸಬೇಕು ಎಂದು ಸೇರಿಸಿಕೊಳ್ಳಬೇಕು.

ಮುಂದೆ ಶ್ರೀಚಕ್ರದ ಸ್ವರೂಪವನ್ನು ಹೇಳುತ್ತಾರೆ.

अष्टाचक्रा नवद्वारा ॥

ಅಷ್ಟಾಚಕ್ರಾ ನವದ್ವಾರಾ ॥

ಅಷ್ಟಕೋಣ, ಎರಡು ದಶಾರಗಳು, ಚತುರ್ದಶಕೋಣ, ಅಷ್ಟಪತ್ರ, ಷೋಡಶಪತ್ರ, ತ್ರಿವಲಯ, ತ್ರಿರೇಖಾತ್ಮಕ ಭೂಪುರ ಹೀಗೆ ಎಂಟು ಚಕ್ರಗಳು ಇರುವುದು ಯಾವುದೋ ಅದು ***ಅಷ್ಟಾಚಕ್ರಾ.*** ಆದುದರಿಂದಲೇ ನವದ್ವಾರಗಳುಳ್ಳದ್ದಾಗಿದೆ; ತ್ರಿಕೋಣರೂಪದ ಒಂಭತ್ತು ದ್ವಾರಗಳು.

देवानां पूरयोध्या ॥

ದೇವಾನಾಂ ಪೂರಯೋಧ್ಯಾ ॥

ಇಂದ್ರಾದಿ ದೇವತೆಗಳಿಗೆ ಪೂಜ್ಯವಾಗಿರುವ ಪುರವು, ಶ್ರೀವಿದ್ಯಾನಗರವು. ಅಥವಾ ***ದೇವಾಃ*** ಪ್ರಕಾಶಿಸುವುವುಗಳು ಅಂದರೆ ಇಪ್ಪತ್ತೈದು ತತ್ತ್ವಗಳು; ಅವುಗಳ ***ಪುರ,*** ಅಧಿಷ್ಠಾನ. ಅಥವಾ ಸೂರ್ಯ ಚಂದ್ರ ಅಗ್ನಿಗಳ ಪುರವು, ಸೋಮಸೂರ್ಯಾಗ್ನಿ ರೂಪದ ಶ್ರೀಚಕ್ರವು. ಅದರ ಪುರತ್ರಯಗಳು ಸಮಷ್ಟಿರೂಪವಾಗಿರುವುದರಿಂದ *ಪೂಃ* ಎಂದು ಏಕವಚನದ ಸಂಬೋಧನೆ ಎಂದು ತಿಳಿಯಬೇಕು. ***ಅಯೋಧ್ಯಾ*** ಅಸಾಧ್ಯವು; ಅನಧಿಕಾರಿಗಳಿಗೆ, ಮಂದಭಾಗ್ಯರಿಗೆ ಅಸಾಧ್ಯವು ಎಂಬ ಅರ್ಥದಲ್ಲಿ.

तस्याग्ं हिरणमयः कोशः ।
स्वर्गो लोको ज्योतिषाऽऽवृतः ॥

ತಸ್ಯಾಗ್ಂ ಹಿರಣ್ಮಯಃ ಕೋಶಃ ।
ಸ್ವರ್ಗೋ॰ ಲೋಕೋ॰ ಜ್ಯೋತಿಷಾಽಽವೃತಃ ॥

ತಸ್ಯಾಂ ಆ ಪಟ್ಟಣದಲ್ಲಿ, ಶ್ರೀಚಕ್ರದ ಮಧ್ಯದಲ್ಲಿ ***ಹಿರಣ್ಮಯಃ ಕೋಶಃ*** ಸಹಸ್ರದಲಕಮಲವೆಂಬ ಕೋಶ; ಬೈಂದವಸ್ಥಾನದಲ್ಲಿ ಸಹಸ್ರದಲಕಮಲವಿದೆ. ***ಜ್ಯೋತಿಷಾ*** ಜ್ಯೋತಿಯಿಂದ ***ಸ್ವರ್ಗೋ॰ಲೋಕಃ ಆವೃತಃ*** ಜ್ಯೋತಿರ್ಲೋಕವು, ಸ್ವರ್ಗಲೋಕವು ಆವೃತವಾಗಿದೆ.

ಮುಂದೆ ಪೃಶ್ನಿಗಳು ಚಕ್ರವಿದ್ಯೆಯ ಉಪಾಸನೆಯ ಫಲವನ್ನು ತಿಳಿಸುತ್ತಾರೆ.

यो वै तां ब्रह्मणो वेद अमृतेनावृतं पुरीम् ।
तस्यै ब्रह्म च ब्रह्मा च आयुः कीर्तिं प्रजां ददुः ॥

ಯೋ ವೈ ತಾಂ ಬ್ರಹ್ಮಣೋ ವೇದ ಅಮೃತೇನಾವೃತಂ ಪುರೀಮ್ ।
ತಸ್ಮೈ ಬ್ರಹ್ಮ ಚ ಬ್ರಹ್ಮಾ ಚ ಆಯುಃ ಕೀರ್ತಿಂ ಪ್ರಜಾಂ ದದುಃ ॥

ಬ್ರಹ್ಮಣಃ ಬ್ರಹ್ಮಸ್ವರೂಪದ ಭಗವತೀಯ ***ತಾಂ*** ಹಿಂದೆ ತಿಳಿಸಿದ ***ಅಮೃತೇನ ಆವೃತಾಂ*** ಚಂದ್ರಮಂಡಲದಿಂದ ಸ್ರವಿಸಿದ ಸುಧಾಧಾರೆಯಿಂದ ಆವೃತವಾದ ***ಪುರೀಂ*** ಶ್ರೀಚಕ್ರರೂಪದ ತ್ರಿಪುರಾದೇವಿಯ ಪುರವನ್ನು ***ಯೋ ವೇದ*** ಜ್ಞಾನಪೂರ್ವಕ ಅರ್ಚನೆಯನ್ನು ಮಾಡಿದರೆ ***ತಸ್ಮೈ*** ಅರ್ಚನೆಮಾಡಿದ ವಿದ್ವಾಂಸನಿಗೆ ***ಬ್ರಹ್ಮ ಚ*** ಬ್ರಹ್ಮಸ್ವರೂಪಳಾದ ಭಗವತೀಯು ***ಬ್ರಹ್ಮಾ ಚ*** ಮತ್ತು ಬ್ರಹ್ಮಸ್ವರೂಪನಾದ ಭಗವಂತನು. ಚಕಾರಗಳು ಉಭಯರ ಮೇಳನವನ್ನು

ಸಮುಚ್ಚಯಗೊಳಿಸುತ್ತದೆ ಏಕೆಂದರೆ ಅವರಿಬ್ಬರೂ ಮೇಳನವಾಗಿಯೇ ಸಹಸ್ರಾರದಲ್ಲಿ, ಬೈಂದವಸ್ಥಾನದಲ್ಲಿ, ಸುಧಾಸಿಂಧುವಿನ ಮಧ್ಯದ ಮಣಿದ್ವೀಪದಲ್ಲಿ ಚಿಂತಾಮಣಿಗೃಹದಲ್ಲಿ ನಿವಾಸಿಸುತ್ತಾರೆ. ಈ ಇಬ್ಬರೂ ***ಆಯುಃ*** ಜೀವಿತವನ್ನು ***ಕೀರ್ತಿಂ*** ಯಶಸ್ಸನ್ನು ***ಪ್ರಜಾಂ*** ಸಂತಾನವನ್ನು ***ದದುಃ*** ನೀಡುವವರಾಗಲಿ. 'ವ್ಯತ್ಯಯೋ ಬಹುಲಮ್' ಎಂಬ ಸೂತ್ರದಂತೆ ವಚನವ್ಯತ್ಯಾಸವಾಗಿ *ದದುಃ* ಶಬ್ದವು ಬಹುವಚನದಲ್ಲಿದೆ.

ಶಿವ–ಶಕ್ತಿಯರು ಅಲ್ಲಿಯೇ ನಿವಾಸವಾಗಿರುವರು ಎಂದು ತಿಳಿಸುತ್ತಾ

विभ्राजमानाग्ं हरिणीं यशसां सम्परिवृताम् ।
पुरग्ं हिरण्मयीं ब्रह्मा विवेशापराजिता ॥
ವಿಭ್ರಾಜಮಾನಾಗ್ಂ ಹರಿಣೀಂ ಯಶಸಾಂ ಸಂಪರಿವೃತಾಮ್ ।
ಪುರಗ್ಂ ಹಿರಣ್ಮಯೀಂ ಬ್ರಹ್ಮಾ ವಿವೇಶಾಪರಾಜಿತಾ ॥

ವಿಭ್ರಾಜಮಾನಾಂ ಅನಂತಕೋಟಿಸಂಖ್ಯಾಕ ಕಿರಣಗಳಿಂದ ಪ್ರಕಾಶಿಸುವ ***ಹರಿಣೀಂ*** ಸುವರ್ಣವರ್ಣದವಳಾದ; 'ಹಿರಣ್ಯವರ್ಣಾಂ ಹರಿಣೀಂ' (ಶ್ರೀಸೂಕ್ತ) ಎಂದು ಶ್ರುತಿಯು ಇದೆ. ***ಯಶಸಾ*** ಕೀರ್ತಿಯಿಂದ ***ಸಂಪರಿವೃತಾಮ್*** ಚೆನ್ನಾಗಿ ಆವರಿಸಲ್ಪಟ್ಟ; ಈ ಲೋಕದಲ್ಲಿ ಕೀರ್ತಿವಂತರಾದವರೆಲ್ಲರೂ ಭಗವತೀಯ ಅನುಗ್ರಹದಿಂದಾಗಿಯೇ ಕೀರ್ತಿಯನ್ನು ಪ್ರಾಪ್ತಿಸಿಕೊಂಡಿದ್ದಾರೆ ಎಂಬ ಅರ್ಥದಲ್ಲಿ. ***ಪುರಂ*** ಆ ಬೈಂದವರೂಪದ ಚಿಂತಾಮಣಿಗೃಹವನ್ನು ***ಬ್ರಹ್ಮಾ*** ಸದಾಶಿವನು; 'ಬ್ರಹ್ಮಾ ಶಿವೋ ಮೇ ಅಸ್ತು ಸದಾಶಿವೋಮ್' (ತೈ.ಆ. 10–39) ಎಂದು ಶ್ರುತಿಯಿದೆ. ಪುಲ್ಲಿಂಗ ಬ್ರಹ್ಮ ಶಬ್ದಕ್ಕೂ ಸದಾಶಿವ ಶಬ್ದಕ್ಕೂ ಒಂದೇ ಅರ್ಥವಿದೆ. ***ವಿವೇಶ ಅಪರಾಜಿತಾ*** ಸಾದಾಖ್ಯಾ ಎಂಬ ಚಂದ್ರಕಲೆಯು ಪ್ರವೇಶಿಸಿದೆ. ಇಲ್ಲಿ ಎರಡು ವಾಕ್ಯಗಳಲ್ಲಿ ಇಬ್ಬರ ಪ್ರವೇಶಭೇದವನ್ನು ಪ್ರತಿಪಾದಿಸಿದೆ. ಬೈಂದವದ ಚಿಂತಾಮಣಿಗೃಹದಲ್ಲಿ ಸದಾಶಿವನು ಸದಾ ಸನ್ನಿಹಿತನಾಗಿರುತ್ತಾನೆ; ಅಪರಾಜಿತಳಾದ ಕುಂಡಲಿನೀಶಕ್ತಿಯು ಷಟ್‌ಚಕ್ರಗಳನ್ನು ಭೇದಿಸಿ ಮತ್ತೆ ಮತ್ತೆ ಪ್ರವೇಶಿಸುತ್ತಾಳೆ ಎಂಬ ವಿಷಯವನ್ನು ಇದು ಜ್ಞಾಪಿಸುತ್ತದೆ.

ಶ್ರೀಚಕ್ರದಲ್ಲಿ ಶಿವ–ಶಕ್ತಿಯರ ಅವಸ್ಥಾಪ್ರಕಾರವನ್ನು ಹೇಳುತ್ತಾ

पराङेत्यज्यामयी । पराङेत्यनाशकी ॥
ಪರಾಙೇತ್ಯಜ್ಯಾಮಯೀ । ಪರಾಙೇತ್ಯನಾಶಕೀ ॥

ಪರಾಙ್ ಶಿವ–ಶಕ್ತಿಯರಲ್ಲಿ ಅಧೋಮುಖಿಯೂ ಚಕ್ರರೂಪಿಣಿಯೂ ಆಗಿರುವ ಶಕ್ತಿಯು. ***ಅಜ್ಯಾಮಯೀ*** ನಾಶರಹಿತಳು, ನಿತ್ಯೆ ದುಃಖರಹಿತ ಆನಂದಮಯೀ ಆಗಿ. ಅಥವಾ *ಅಜ್ಯಾಮಯೀ* ಜ್ಯಾ ಭೂಮಿಯು, ಅದರಿಂದ ಪಂಚಭೂತಗಳು ಲಕ್ಷಿತವಾಗುವುವು. ತದ್ರೂಪದಲ್ಲಿ ಇಲ್ಲದವಳು ಅಜ್ಯಾಮಯೀ ಅಂದರೆ ಮನಸ್ತತ್ತ್ವ ಮುಂತಾದ ರೂಪಗಳಲ್ಲಿ ಇರುವವಳು, ನಾಲ್ಕು ಶಿವಚಕ್ರಗಳ ರೂಪವಾಗಿ ಇರುವವಳು; ನಾಲ್ಕು ಶಿವಚಕ್ರಗಳು, ತ್ರಿಕೋಣಗಳು ಬೈಂದವದ ಕೆಳಗೆ ಅಧೋಮುಖವಾಗಿವೆ. ***ಅನಾಶಕೀ*** ನಾಶರಹಿತಳು, ಶಕ್ತಿಚಕ್ರರೂಪದ ಐದು ತ್ರಿಕೋಣಗಳ ರೂಪವಾಗಿರುವವಳು ***ಪರಾಙ್*** ಅಧೋಮುಖವಾಗಿರುವವಳು; ಶಕ್ತಿಚಕ್ರಗಳು ಶಿವಚಕ್ರಗಳ ದೃಷ್ಟಿಯಿಂದ ಅಧೋಮುಖವಾಗಿವೆ. ಈ ರೀತಿ ಶಿವತ್ರಿಕೋಣಗಳು ಮತ್ತು ಶಕ್ತಿತ್ರಿಕೋಣಗಳು ಪರಸ್ಪರ ಅಧೋಮುಖವಾಗಿರುವುದು ಚಕ್ರಲೇಖನಕ್ರಮದಿಂದ ತಿಳಿದುಬರುತ್ತದೆ.

ಮುಂದೆ ವಿದ್ವಾಂಸನಿಗೆ ದೊರಕುವ ಫಲವನ್ನು ತಿಳಿಸುತ್ತಾ

इह चामुत्र चान्वेति । विद्वान् देवासुरानुभयान् ॥

ಇಹ ಚಾಮುತ್ರ ಚಾನ್ವೇತಿ । ವಿದ್ವಾನ್ದೇವಾಸುರಾನುಭಯಾನ್ ॥

ದೀವ್ಯಂತಿ ಅಂದರೆ ಪ್ರಕಾಶಿಸುವವುಗಳು ಆದುದರಿಂದ ***ದೇವಾಃ,*** ಹನ್ನೊಂದು ಇಂದ್ರಿಯಗಳು. ***ಅಸುರಾಃ*** ಅಸು ಅಂದರೆ ಪ್ರಾಣ, ಪಂಚವಾಯುಗಳು, ಅವುಗಳನ್ನು ರಾಂತಿ, ಸ್ವೀಕರಿಸುವವು ಪಂಚ ತನ್ಮಾತ್ರೆಗಳು ಲಕ್ಷಿತವಾಗುವುವು. ***ಉಭಯಾನ್*** ದೇವ (ಇಂದ್ರಿಯಗಳಲ್ಲಿ) ಅಸುರರಲ್ಲಿ (ಪ್ರಾಣಪಂಚಕ) ಉಭಯರಲ್ಲಿ ಅನ್ವಿತವಾಗುವ ಮಾಯಾ, ಶುದ್ಧವಿದ್ಯಾ, ಮಹೇಶ್ವರ, ಸದಾಶಿವ ತತ್ತ್ವಗಳನ್ನು ***ವಿದ್ವಾನ್*** ಇಪ್ಪತ್ತೈದು ತತ್ತ್ವಗಳನ್ನು ತಿಳಿದವನು ಶಿವ-ಶಕ್ತಿ ಸಂಪುಟಾತ್ಮಕವಾದ, ಇಪ್ಪತ್ತೈದು ತತ್ತ್ವಗಳಿಗೆ ವಿಲಕ್ಷಣವಾದ, ಅತೀತವಾದ ಇಪ್ಪತ್ತಾರನೆಯ ತತ್ತ್ವವನ್ನು ತಿಳಿಯುವ ವಿದ್ವಾಂಸನು. ***ಇಹ ಚ*** ಇಹಲೋಕದಲ್ಲಿ ಪೂಜಾತಾರತಮ್ಯದಿಂದ ***ಅಮುತ್ರ ಚ*** ಪರಲೋಕದಲ್ಲಿ ಸಾರ್ಷ್ಟಿ ಸಾಲೋಕ್ಯ ಸಾಮೀಪ್ಯ ಸಾರೂಪ್ಯ ಸಾಯುಜ್ಯ ರೂಪದ ಐದು ವಿಧದ ಮುಕ್ತಿಯನ್ನು ***ಅನ್ವೇತಿ*** ಅನ್ವಯಿಸಿಕೊಳ್ಳು, ಯೋಜಿಸಿಕೊಳ್ಳುವನು.

ನಂತರ ದೇವಾಸುರರಿಬ್ಬರನ್ನೂ ತಿಳಿಯುವ ಉಪಾಯವನ್ನು ತಿಳಿಸುತ್ತಾರೆ.

यत्कुमारी मन्द्रयते यद्योषिद्यत्पतिव्रता ।
अरिष्टं यत्किञ्च् क्रियते अग्निस्तदनुवेधति ॥
ಯತ್ಕುಮಾರೀ ಮಂದ್ರಯತೇ ಯದ್ಯೋಷಿದ್ಯತ್ಪತಿವ್ರತಾ ।
ಅರಿಷ್ಟಂ ಯತ್ಕಿಂ ಚ ಕ್ರಿಯತೇ ಅಗ್ನಿಸ್ತದನುವೇಧತಿ ॥

ಕುಂಡಲಿನೀಶಕ್ತಿಯ ಮೂರು ಅವಸ್ಥೆಗಳನ್ನು ಹೇಳಲಾಗಿದೆ. ***ಯತ್*** ಯಾವ ಚಕ್ರದಲ್ಲಿ ***ಕುಮಾರೀ*** ಕುಮಾರಾವಸ್ಥೆಯಲ್ಲಿರುವ, ಮೊದಲಿಗೆ ಸುಪ್ತಾವಸ್ಥೆಯಿಂದ ಎಚ್ಚೆತ್ತವಳಾಗಿ ***ಮಂದ್ರಯತೇ*** ಮಂದ್ರಸ್ವರವನ್ನು ಮಾಡುವುದು, ಕುಂಡಲಿನೀಯ ಸರ್ಪಾಕಾರದಿಂದಾಗಿ. ಸರ್ಪಗಳು ಸುಪ್ತತೆಯಿಂದ ಎಚ್ಚೆತ್ತಾಗ ಮಂದ್ರಸ್ವರವನ್ನು ಮಾಡುವುದು ಪ್ರಸಿದ್ಧವಾಗಿದೆ. ಅದರಂತೆ ಎಂಬ ಅರ್ಥದಲ್ಲಿ. ***ಯದ್ಯೋಷಿತ್*** ಯಾವ ಚಕ್ರದಲ್ಲಿ ಕುಲಯೋಷಿತೆಯಾಗಿ ವಿಷ್ಣುಗ್ರಂಥಿಪರ್ಯಂತ ಸಾಗಿ ಸ್ವೀಕರಿಸುತ್ತಾಳೆಯೋ ಎಂದು ಸೇರಿಸಿಕೊಳ್ಳುವುದು. 'ಕುಲಯೋಷಿತ್ಕುಲಂ ತ್ಯಕ್ತ್ವಾ ರಾತಿ ವಿಷ್ಣೋಃ ಪ್ರಭೇದನೇ' ಕುಲಯೋಷಿತೆಯು ಕುಲವನ್ನು ತ್ಯಜಿಸಿ ವಿಷ್ಣುಗ್ರಂಥಿಯನ್ನು ಭೇದಿಸುವುದರಲ್ಲಿ ತೊಡಗುತ್ತಾಳೆ ಎಂದು ಸನತ್ಕುಮಾರವಚನವಿದೆ. ***ಯತ್*** ಯಾವ ಚಕ್ರದಲ್ಲಿ ***ಪತಿವ್ರತಾ*** ಪತಿಯಾದ ಸದಾಶಿವನ ಜೊತೆಗೆ ಸಹಸ್ರದಲಕಮಲದಲ್ಲಿ ವಿಹರಿಸುವ. *ರಿಷ್ಟಂ* ಶುಭದ ಅಭಾವ, ಶುಭವಲ್ಲದಿರುವುದು; 'ರಿಷ್ಟಂ ಕ್ಷೇಮೇ ಶುಭಾಭಾವೇ' ಎಂದು ಅಮರಕೋಶವಿದೆ. ಅದರಿಂದ ಬೇರೆಯಾದುದು ***ಅರಿಷ್ಟಂ*** ಶುಭಪ್ರದ, ಅಮೃತದ ಆಸ್ವಾದವನ್ನು ಮಾಡು ಎಂಬ ಅರ್ಥದಲ್ಲಿ. ***ಯತ್ಕಿಂಚಿತ್ಕ್ರಿಯತೇ*** ಏನೇನು ಮಾಡಬೇಕಾಗಿದೆಯೋ ***ತತ್*** ಅದನ್ನು ***ಅಗ್ನಿಃ*** ಸ್ವಾಧಿಷ್ಠಾನದಲ್ಲಿರುವ ಅಗ್ನಿಯು ***ಅನುವೇಧತಿ*** ಸಹಾಯಮಾಡುತ್ತದೆ. ಇಲ್ಲಿ ಅಭ್ಯಾಸವಶದಿಂದ ವಾಯುವಿನ ಸಹಾಯದಿಂದ ಅಗ್ನಿಯನ್ನು ಪ್ರಜ್ವಲಿಸಿ ಅಗ್ನಿಶಿಖೆಗಳು ಕೂಡಿ ಕರಗಿಸಿದ ಚಂದ್ರಮಂಡಲದ ಅಮೃತಧಾರೆಯ ಅನುಭವವಾದಾಗ ಇಪ್ಪತ್ತೈದು ತತ್ತ್ವಗಳಿಗೆ ಅತೀತಳಾದ ಪರಮೇಶ್ವರೀಯನ್ನು ಅರಿಯಲು ಸುಲಭವಾಗುವುದು ಎಂಬ ಉಪದೇಶವು.

ಚಕ್ರವಿದ್ಯೆಯ ಉಪಾಸನೆಯು ಎಲ್ಲಾ ವರ್ಣದವರಿಗೆ, ಎಲ್ಲಾ ಆಶ್ರಮಧರ್ಮದವರಿಗೆ, ಜ್ಞಾನಿ–ಅಜ್ಞಾನಿಗಳಿಗೆ ಫಲದಾಯಕವೆಂದು ತಿಳಿಸಿ ಹೇಳುತ್ತಾರೆ

अशृतासः शृतासश्च यज्वानो येऽप्ययज्वनः ।
स्वर्यन्तो नापेक्शन्ते ॥
ಅಶೃತಾಸಃ ಶೃತಾಸಶ್ಚ ಯಜ್ವಾನೋ ಯೇಽಪ್ಯಯಜ್ವನಃ ।
ಸ್ವರ್ಯಂತೋ ನಾಪೇಕ್ಷಂತೇ ॥

ಅಶೃತಾಸಃ ಅಪಕ್ವರು, ಅಂತಃಕರಣದ ಕಲ್ಮಷವು ನಾಶವಾಗದವರು ***ಶೃತಾಸಶ್ಚ*** ಪಕ್ವವಾದವರು; 'ಆಜ್ಜಸೇರಸುಕ್' ಎಂಬ ಸೂತ್ರದಂತೆ 'ಅಸುಕ್' ಬಂದಿದೆ. ಅಂತಃಕರಣ ಶುದ್ಧಿಯಾದವರು. ***ಯಜ್ವಾನಃ*** ಯಜ್ಞಶೀಲರಾದವರು, ತ್ರೈವರ್ಣಿಕರು ಮತ್ತು ಆಶ್ರಮಿಗಳು. ***ಅಯಜ್ವಾನಃ*** ಯಾಗರಹಿತರು, ಶೂದ್ರಾದಿಗಳು; 'ತಸ್ಮಾಚ್ಛೂದ್ರೋ ಯಜ್ಞೇಽನವಕ್ಲೃಪ್ತಃ' (ತೈ.ಸಂ 7–1–1) ಎಂದು ಶ್ರುತಿಯು ತ್ರೈವರ್ಣಿಕರಿಗೆ ಮಾತ್ರ ನಿಯತವಾದ ಅಧಿಕಾರವುಳ್ಳ ಯಜ್ಞ ಶಬ್ದದಿಂದ ವಾಚ್ಯವಾಗುವ ಅಗ್ನಿಷ್ಟೋಮಾ ಮುಂತಾದ ಯಾಗಗಳನ್ನು ತಿಳಿಸುತ್ತದೆ. ಶ್ರೀಚಕ್ರವಿದ್ಯೋಪಾಸನೆಯಲ್ಲಿ ಶೂದ್ರರಿಗೂ ಅಧಿಕಾರವಿರುವುದರಿಂದ ನಿಷಾದಸ್ಥಪತಿ ನ್ಯಾಯದಂತೆ ವೈದಿಕಕರ್ಮಗಳ ಅಧಿಕಾರ ಸಿದ್ಧಿಸುವುದರಿಂದ ಶ್ರುತಿವಾಕ್ಯಕ್ಕೆ ಹಾನಿಯಾಗುವುದಿಲ್ಲ. ***ಯಂತಃ*** 'ಇಣ್ ಗತೌ' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ; ಚಕ್ರವಿದ್ಯೆಯನ್ನು ತಿಳಿದವರು ***ಸ್ವಃ*** ಸ್ವರ್ಗವನ್ನು ***ನ ಅಪೇಕ್ಷಂತೇ*** ಅಪೇಕ್ಷಿಸುವುದಿಲ್ಲ.

ಚಕ್ರವಿದ್ಯೆಯ ಉಪಾಸನೆಗೆ ವ್ಯತಿರೇಕವಾಗಿ ಇತರ ದೇವತೆಗಳ ಉಪಾಸನೆಯಿಂದ ಅನಿಷ್ಟಗಳಾಗುತ್ತವೆ ಎಂದು ತಿಳಿಸಲು

इन्द्रमग्निं च ये विदुः सिकता इव संयन्ति ।
रश्मिभिः समुदीरिताः अस्माल्लोकादमुष्माच्च ॥
ಇಂದ್ರಮಗ್ನಿಂ ಚ ಯೇ ವಿದುಃ ಸಿಕತಾ ಇವ ಸಂಯಂತಿ ।
ರಶ್ಮಿಭಿಃ ಸಮುದೀರಿತಾಃ ಅಸ್ಮಾಲ್ಲೋಕಾದಮುಷ್ಮಾಚ್ಚ ॥

ಸುರಾಸುರರ ಪ್ರಮುಖರಿಂದ ವಂದಿಸಲ್ಪಟ್ಟ ಚರಣಾರವಿಂದಗಳುಳ್ಳವಳಾದ, ಸರ್ವಭೂತಗಳ ಅಂತರ್ಯಾಮಿಯಾದ, ಸರ್ವವ್ಯಾಪಿನಿಯಾಗಿ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣಳಾದ ಶ್ರೀವಿದ್ಯಾರೂಪಿಣಿಯಾದ ಭಗವತೀಗಿಂತ ಬೇರೆಯಾದ ಇಂದ್ರ, ಅಗ್ನಿ ಮುಂತಾದವರನ್ನು; ಚಕಾರವು ಯಮ ಮುಂತಾದ ಲೋಕಪಾಲಕರನ್ನೂ, ಪೃಥಿವಿ ಮೊದಲಾಗಿ ಸದಾಶಿವನವರೆಗಿನ ತತ್ತ್ವಗಳನ್ನೂ ಯಾರು ಉಪಾಸನೀಯವಾಗಿ ತಿಳಿಯುವರೋ, ಅವರು ***ಸಿಕತಾ ಇವ*** ಮರಳಿನ ಕಣಗಳಂತೆ ***ಸಂಯಂತಿ*** ಪರಸ್ಪರ ಬೇರೆಯಾಗಿ ಭ್ರಷ್ಟರಾಗುತ್ತಾರೆ ಎಂಬ ಅರ್ಥದಲ್ಲಿ. ***ರಶ್ಮಿಭಿಃ*** ಮುಂದಿನ ವಿವರಣೆಯಲ್ಲಿ 'ಅಪೇತ ವೀತ' ಮುಂತಾಗಿ ಪ್ರತಿಪಾದಿತವಾದ ಯಮಪಾಶಗಳಿಂದ ***ಸಮುದೀರಿತಾಃ*** ಬದ್ಧರಾಗುವರು, ಬಂಧಿಸಲ್ಪಡುವರು ಎಂಬ ಅರ್ಥದಲ್ಲಿ. ***ಅಸ್ಮಾಲ್ಲೋಕಾತ್ ಅಮುಷ್ಮಾತ್ ಚ*** ಈ ಲೋಕದಲ್ಲಿ ಮತ್ತು ಪರಲೋಕದಲ್ಲಿಯೂ ಕೂಡಾ, ಭ್ರಷ್ಟರಾಗುವರು ಎಂದು ಸೇರಿಸಿಕೊಳ್ಳುವುದು. ಅದೇರೀತಿ ಬೇರೆ ಶ್ರುತಿಯೂ ಹೇಳುತ್ತದೆ. 'ಅಂಧಂ ತಮಃ ಪ್ರವಿಶಂತಿ ಯೇಽವಿದ್ಯಾಮುಪಾಸತೇ' (ಈ.ಉ. 9). ಅವಿದ್ಯೆಯ, ವಿದ್ಯಾವಿರುದ್ಧವಾದ,

ಜ್ಞಾನಮಾರ್ಗವಿರುದ್ಧವಾದ 'ವಾಚಂ ಧೇನುಮುಪಾಸೀತ' (ಬೃ.ಉ. 7-8-1) ಎಂದು ಅಧ್ಯಾರೋಪಿತ ಇಂದ್ರಾದಿಗಳ ಸೇವೆಯನ್ನು ಯಾರು ಮಾಡುವರೋ, ಅಂತಹ ಅವಿದ್ವಾಂಸರು ಅಂಧತಾಮಿಸ್ರ ಲೋಕವನ್ನು ಪ್ರವೇಶಿಸುತ್ತಾರೆ. ಚಕಾರವು ಪ್ರಕರಣದ ಸಮಾಪ್ತಿಯ ದ್ಯೋತಕವಾಗಿದೆ.

ऋषिभिरदात् प्रश्निभिः ॥
ಋಷಿಭಿರದಾತ್ಪೃಶ್ನಿಭಿಃ ॥

ಪೃಶ್ನಿಗಳೆಂಬ ಹೆಸರಿನ ಋಷಿಗಳಿಂದ ಇದೆಲ್ಲವೂ ಕೊಡಲ್ಪಟ್ಟಿತು. ಕರ್ಮಣಿಪ್ರಯೋಗದಲ್ಲಿ ಲುಙ್‌ಲಕಾರವು. ಛಾಂದಸ ಪ್ರಯೋಗದಲ್ಲಿ ಕರ್ಮಣಿಪ್ರತ್ಯಯದ ಲೋಪವಾಗಿದೆ; ಕರ್ತೃಪ್ರತ್ಯಯವು ವ್ಯತ್ಯಾಸವಾಗಿದೆ. ಇದು ಪೃಶ್ನಿಗಳೆಂಬ ಋಷಿಗಳಿಂದ ಹೇಳಲ್ಪಟ್ಟಿದೆ ಎಂಬ ಅರ್ಥವು. ಅಥವಾ ಪೃಶ್ನಿಗಳು ಸೇರಿರುವ ಋಷಿಸಂಘವು ಈ ವಿಷಯವನ್ನು ಹೇಳಿದೆ ಎಂಬ ಅರ್ಥವು.

समाप्तेयमुपनिषत् ॥
ಸಮಾಪ್ತೇಯಮುಪನಿಷತ್ ॥

ಲಕ್ಷ್ಮೀಧರಾಚಾರ್ಯನಿಂದ ರಚಿಸಲ್ಪಟ್ಟ ಟೀಕೆಯು ಸಮಾಪ್ತಿಯಾಯಿತು.

ಓಂ ಭದ್ರಂಕರ್ಣೇಭಿಃ ಶ್ರುಣುಯಾಮ ದೇವಾಃ ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।
ಸ್ಥಿರೈರಂಗೈಃಸ್ತುಷ್ಟುವಾಗ್ಂ ಸಸ್ತನೂಭಿಃ ವ್ಯಶೇಮದೇವಹಿತಂ ಯದಾಯೂಃ ।
ಸ್ವಸ್ತಿನಃ ಇಂದ್ರೋ ವೃದ್ಧಶ್ರವಾ ಸ್ವಸ್ತಿನಃ ಪೂಷಾ ವಿಶ್ವವೇದಾಃ ।
ಸ್ವಸ್ತಿನಸ್ತಾರ್ಕ್ಷ್ಯೋ ಅರಿಷ್ಟನೇಮಿಃ ಸ್ವಸ್ತಿನೋ ಬೃಹಸ್ಪತಿರ್ದಧಾತು ॥

ಓಂ ಶಾಂತಿಃ ಶಾಂತಿಃ ಶಾಂತಿಃ ॥

॥ ॐ तत् सत् ॥ ॐ ತತ್ ಸತ್॥

ಅಥರ್ವಪಾತಕಾಸ್ತೇಽಪಿ ಪ್ರಯಾಂತಿ ಪರಮಾಂ ಗತಿಮ್ ॥ ಇತಿ ನಾಗರ ಖಂಡೇ ॥

देव्यथर्वशीर्षोपनिषत्

ದೇವ್ಯಥರ್ವಶೀರ್ಷೋಪನಿಷತ್

ओं भद्रंकर्णेभिः श्रुणुयाम देवाः भद्रं पश्येमाक्षभिर्यजत्राः ।
स्थिररङ्गैःस्तुष्टुवाग्ं सस्तनूभिः व्यशेमदेवहितं यदायूः ।
स्वस्तिनः इन्द्रो वृद्धश्रवा स्वस्तिनः पूषा विश्ववेदाः ।
स्वस्तिनस्ताक्ष्यो अरिष्टनेमिः स्वस्तिनो बृहस्पतिर्दधातु ॥

ओं शान्तिः शान्तिः शान्तिः ॥

ಓಂ ಭದ್ರಂಕರ್ಣೇಭಿಃ ಶ್ರುಣುಯಾಮ ದೇವಾಃ ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।
ಸ್ಥಿರೈರಂಗೈಃಸ್ತುಷ್ಟುವಾಗ್ಂ ಸಸ್ತನೂಭಿಃ ವ್ಯಶೇಮದೇವಹಿತಂ ಯದಾಯೂಃ ।
ಸ್ವಸ್ತಿನಃ ಇಂದ್ರೋ ವೃದ್ಧಶ್ರವಾ ಸ್ವಸ್ತಿನಃ ಪೂಷಾ ವಿಶ್ವವೇದಾಃ ।
ಸ್ವಸ್ತಿನಸ್ತಾರ್ಕ್ಷ್ಯೋ ಅರಿಷ್ಟನೇಮಿಃ ಸ್ವಸ್ತಿನೋ ಬೃಹಸ್ಪತಿರ್ದಧಾತು ॥

ಓಂ ಶಾಂತಿಃ ಶಾಂತಿಃ ಶಾಂತಿಃ ॥

ಓಂ ಸರ್ವೇ ವೈ ದೇವಾ ದೇವೀಮುಪತಸ್ಥುಃ । ಕಾಸಿ ತ್ವಂ ಮಾಹಾದೇವಿ । ಸಾಬ್ರವೀದಹಂ ಬ್ರಹ್ಮಸ್ವರೂಪಿಣೀ । ಮತ್ತಃ ಪ್ರಕೃತಿಪುರುಷಾತ್ಮಕಂ ಜಗತ್ ಶೂನ್ಯಂಚಾಶೂನ್ಯಂ ಚ ಅಹಮಾನಂದಾನಾನಂದಾಃ । ವಿಜ್ಞಾನಾವಿಜ್ಞಾನೇ ಅಹಮ್ । ಬ್ರಹ್ಮಾಬ್ರಹ್ಮಣೀ ವೇದಿತವ್ಯೇ । ಇತ್ಯಾಹ್ಯಾಥರ್ವಣೀಶ್ರುತಿಃ । ಅಹಂ ಪಂಚಭೂತಾನ್ಯಪಂಚಭೂತಾನಿ । ಅಹಮಖಿಲಂ ಜಗತ್ । ವೇದೋಹಮವೇದೋಹಂ ವಿದ್ಯಾಹಮವಿದ್ಯಾಹಮ್ । ಅಜಾಹಮನಜಾಹಮ್ । ಅಧಶ್ಚೋರ್ಧ್ವಂ ಚ ತಿರ್ಯಕ್ಚಾಹಮ್ । ಅಹಂ ರುದ್ರೇಭಿರ್ವಸುಭಿಶ್ಚರಾಮ್ಯಹಮಾದಿತ್ಯೈರುತವಿಶ್ವದೇವೈಃ । ಅಹಂ ಮಿತ್ರಾವರುಣಾವುಭಾ ಬಿಭರ್ಮ್ಯಹಮಿಂದ್ರಾಗ್ನೀ ಅಹಮಶ್ವಿನಾವುಭೌ । ಅಹಂ ಸೋಮಂ ತ್ವಷ್ಟಾರಂ ಪೂಷಣಂ ಭಗಂ ದಧಾಮ್ಯಹಮ್ । ವಿಷ್ಣುಮುರುಕ್ರಮಂ ಬ್ರಹ್ಮಾಣಮುತ ಪ್ರಜಾಪತಿಂ ದಧಾಮಿ ॥

ಅಹಂ ದಧಾಮಿ ದ್ರವಿಣಂ ಹವಿಷ್ಮತೇ ಸುಪ್ರಾವ್ಯೇ ಯಜಮಾನಾಯ ಸುನ್ವತೇ ।
ಅಹಂ ರಾಷ್ಟ್ರೀಸಂಗಮನೀವಸೂನಾಮಹಂ ಸುವೇ ಪಿತರಮಸ್ಯ ಮೂರ್ಧನ್ ಮಮ ಯೋನಿರಪ್ಸ್ವಂತಸ್ಸಮುದ್ರೇ ॥

ಯ ಏವಂ ವೇದ ಸ ದೇವೀಪದಮಾಪ್ನೋತಿ । ತೇ ದೇವಾ ಅಬ್ರುವನ್ । ನಮೋ ದೇವ್ಯೈ ಮಹಾದೇವ್ಯೈ ಶಿವಾಯ್ಯೈ ಸತತಂ ನಮಃ । ನಮಃ ಪ್ರಕೃತ್ಯೈ ಭದ್ರಾಯ್ಯೈ ನಿಯತಾಃ ಪ್ರಣತಾಃ ಸ್ಮೃತಾಮ್ । ತಾಮಗ್ನಿವರ್ಣಾಂ ತಪಸಾ ಜ್ವಲಂತೀಂ ವೈರೋಚನೀಂ ಕರ್ಮಫಲೇಷು ಜುಷ್ಟಾಂ ದುರ್ಗಾಂ ದೇವೀಂ ಶರಣಮಹಂ ಪ್ರಪದ್ಯೇ ಸುತರಾಂ ನಾಶಯೇತ್ ತಮಃ । ದೇವೀಂ ವಾಚಮಜನಯಂತ ದೇವಾಸ್ತಾಂ ವಿಶ್ವರೂಪಾಃ ಪಶವೋ ವದಂತಿ । ಸಾನೋಮಂದ್ರೇಷಮೂರ್ಜಂ ದುಹಾನಾ ಧೇನುರ್ವಾಗಸ್ಮಾನುಪಸುಷ್ಟುತೈತು । ಕಾಲರಾತ್ರಿಂ ಬ್ರಹ್ಮಸ್ತುತಾಂ ವೈಷ್ಣವೀಂ ಸ್ಕಂದಮಾತರಂ ಸರಸ್ವತೀಮದಿತಿಂ ದಕ್ಷದುಹಿತರಂ ತಮಾಮಃ ಪಾವನಾಂ ಶಿವಾಂ । ಮಹಾಲಕ್ಷ್ಮೀಶ್ಚ

ವಿದ್ಮಹೇ ಸರ್ವಸಿದ್ಧಿಶ್ಚ ಧೀಮಹೀ । ತನ್ನೋ ದೇವೀ ಪ್ರಚೋದಯಾತ್ । ಅದಿತಿರ್ಹ್ಯಜನಿಷ್ಟ ದಕ್ಷ ಯಾ ದುಹಿತಾ ತವ । ತಾಂ ದೇವಾ ಅನ್ವಜಾಯಂತ ಭದ್ರಾ ಅಮೃತಬಂಧವಃ । ಕಾಮೋ ಯೋನಿಃ ಕಮಲಾ ವಜ್ರಪಾಣಿರ್ಗುಹಾಹಸಾಮಾತರಿಶ್ವಾಭ್ರಾಮಿಂದ್ರಃ । ಪುನರ್ಗುಹಾ ಸಕಲಾ ಮಾಯಯಾ ಚ ಪುನಃ ಕೋಶಾ ವಿಶ್ವಮಾತಾಽದಿವಿದ್ಯೋಮ್ । ಏಶಾತ್ಮಶಕ್ತಿರೇಷಾ ವಿಶ್ವಮೋಹಿನೀ ಪಾಶಾಂಕುಶಧನುರ್ಬಾಣಧರಾ ಏಷಾ ಶ್ರೀ ಮಹಾವಿದ್ಯಾ ಯ ಏವಂ ವೇದ ಸಶೋಕಂ ತರತಿ । ನಮಸ್ತೇ ಅಸ್ತು ಭಗವತಿ ಭವತಿ ಮಾತರಸ್ಮಾಂಪಾತು ಸರ್ವತಃ । ಸೈವಾಷ್ಟೌ ವಸವಃ ಸೈಷೈಕಾದಶರುದ್ರಾಃ । ಸೈಷಾ ದ್ವಾದಶಾದಿತ್ಯಾಃ । ಸೈಷಾ ವಿಶ್ವೇದೇವಾಸ್ಸೋಮಪಾ ಅಸೋಮಪಾಶ್ಚ ॥

ಸೈಷಾ ಯಾತುಧಾನಾ ಅಸುರಾ ರಕ್ಷಾಂಸಿ ಪಿಶಾಚಾ ಯಕ್ಷಾಸ್ಸಿದ್ಧಾಃ । ಸೈಷಾ ಸತ್ತ್ವರಜಸ್ತಮಾಂಸಿ ಸೈಷಾ ಪ್ರಜಾಪತೀಂದ್ರಮನವಃ । ಸೈಷಾ ಗ್ರಹನಕ್ಷತ್ರಜ್ಯೋತಿಂಷಿಕಲಾಕಾಷ್ಠಾದಿಕಾಲರೂಪಿಣೀ ತಾಮಹಂ ಪ್ರಣೌಮಿ ನಿತ್ಯಂ । ತಾ ಪಾಪಹಾರಿಣೀಂ ದೇವೀಂ ಭುಕ್ತಿಮುಕ್ತಿಪ್ರದಾಯಿನೀಮ್ । ಅನಂತಾಂ ವಿಜಯಾಂ ಶುದ್ಧಾಂ ಶರಣ್ಯಾಂ ಶಿವದಾಂ ಶಿವಾಮ್ । ವಿಯದೀಕಾರಸಂಯುಕ್ತಂ ವೀತಿಹೋತ್ರಸಮನ್ವಿತಮ್ । ಅರ್ಧೇಂದುಲಸಿತಂ ದೇವ್ಯಾಬೀಜಂ ಸರ್ವಾರ್ಥಸಾಧಕಮ್ । ಏವಮೇಕಾಕ್ಷರಂ ಮಂತ್ರಂ ಯತಯಃ ಶುದ್ಧಚೇತಸಃ । ಧ್ಯಾಯಂತಿ ಪರಮಾನಂದಮಯಾ ಜ್ಞಾನಾಂಬುರಾಶಯಃ । ವಾಙ್ಮಾಯಾ ಬ್ರಹ್ಮಭೂಸ್ತಸ್ಮಾತ್ಷಷ್ಠಂವಕ್ತ್ರಸಮನ್ವಿತಮ್ । ಸೂರ್ಯೋವಾಮಶ್ರೋತ್ರಬಿಂದುಸಂಯುಕ್ತಷ್ಟಾತೃತೀಯಕಃ ॥

ನಾರಾಯಣೇನ ಸಂಯುಕ್ತೋ ವಾಯುಶ್ಚಾಧರಸಂಯುತಃ । ವಿಚ್ಚೇನವಾರ್ಣಕೋಣುಸ್ಸ್ಯಾನ್ಮಹದಾನಂದದಾಯಕಃ । ಹೃತ್ಪುಂಡರೀಕಮಧ್ಯಸ್ಥಾ ಪ್ರಾತಃ ಸೂರ್ಯಸಮಪ್ರಭಾಮ್ । ಪಾಶಾಂಕುಶಧರಾಂ ಸೌಮ್ಯಾಂ ವರದಾಭಯಹಸ್ತಕಾಮ್ । ತ್ರಿನೇತ್ರಾಂ ರಕ್ತವಸನಾಂ ಭಕ್ತಕಾಮದುಘಾಂ ಭಜೇ ॥

ನಮಾಮಿ ತ್ವಾಮಹಂ ದೇವೀಂ ಮಹಾಭಯವಿನಾಶಿನೀಮ್ । ಮಹಾದುರ್ಗಪ್ರಶಮನೀಂ ಮಹಾಕಾರುಣ್ಯರೂಪಿಣೀಮ್ । ಯಸ್ಯಾಃ ಸ್ವರೂಪಂ ಬ್ರಹ್ಮಾದಯೋ ನ ಜಾನಂತಿ ತಸ್ಮಾದುಚ್ಯತೇಽಜ್ಞೇಯಾ । ಯಸ್ಯಾ ಅಂತೋ ನ ವಿದ್ಯತೇ ತಸ್ಮಾದುಚ್ಯತೇಽನಂತಾ । ಯಸ್ಯಾ ಗ್ರಹಣಂ ನೋಪಲಭ್ಯತೇ ತಸ್ಮಾದುಚ್ಯತೇಽಲಕ್ಷ್ಯಾ । ಯಸ್ಯಾ ಜನನಂ ಲೋಪಲಭ್ಯತೇ ತಸ್ಮಾದುಚ್ಯತೇಽಜಾ । ಏಕೈವ ಸರ್ವತ್ರ ವರ್ತತೇ ತಸ್ಮಾದುಚ್ಯತ ಏಕಾ । ಏಕೈವ ವಿಶ್ವರೂಪಿಣೀ ತಸ್ಮಾದುಚ್ಯತೇ ನೈಕಾ । ಅತ ಏವೋಚ್ಯತೇಽಜ್ಞೇಯಾನಂತಾಲಕ್ಷ್ಯಾಜೈಕಾ ನೈಕೇತಿ ॥

ಮಂತ್ರಾಣಾಂ ಮಾತೃಕಾದೇವೀ ಶಬ್ದಾನಾಂ ಜ್ಞಾನರೂಪಿಣೀ । ಜ್ಞಾನಾನಾಂ ಚಿನ್ಮಯಾತೀತಾ ಶೂನ್ಯಾನಾಂ ಶೂನ್ಯಸಾಕ್ಷಿಣೀ । ಯಸ್ಯಾಃ ಪರತರಂ ನಾಸ್ತಿ ಸೈಷಾ ದುರ್ಗಾ ಪ್ರಕೀರ್ತಿತಾ । ದುರ್ಗಾತ್ಸಂತ್ರಾಯತೇ ಯಸ್ಮಾದ್ದೇವೀ ದುರ್ಗೇತಿ ಕಥ್ಯತೇ । ಪ್ರಪದ್ಯೇ ಶರಣಂ ದೇವೀಂ ದುದುರ್ಗೇ ದುರಿತಂ ಹರ । ತಾಂ ದುರ್ಗಾಂ ದುರ್ಗಮಾಂ ದೇವೀಂ ದುರಾಚಾರವಿಘಾತಿನೀಮ್ । ನಮಾಮಿ ಭವಭೀತೋಽಹಂ ಸಂಸಾರಾರ್ಣವತಾರಿಣೀಮ್ ॥

ಇದಮಥರ್ವಶೀರ್ಷಂ ಯೋಽಧೀತೇ ಸಪಂಚಾಥರ್ವಶೀರ್ಷಜಪಫಲಮವಾಪ್ನೋತಿ । ಇದಮಥರ್ವಶೀರ್ಷಮಜ್ಞಾತ್ವಾ[(1)] ಯೋಽರ್ಚಾಂ ಸ್ಥಪಯತಿ ಶತಲಕ್ಷಂ ಪ್ರಜಪ್ತ್ವಾಪಿ ಸೋಽರ್ಚಾ ಸಿದ್ಧಿನ್ನ[(2)] ವಿಂದತಿ ॥

ಶತಮಷ್ಟೋತ್ತರಂ ಚಾಸ್ಯಾಃ ಪುರಶ್ಚರ್ಯಾವಿಧಿಃ ಸ್ಮೃತಃ ದಶವಾರಂ ಪಠೇದ್ಯಸ್ತು ಸದ್ಯಃ ಪಾಪೈಃ ಪ್ರಮುಚ್ಯತೇ । ಮಹಾದುರ್ಗಾಣಿ ತರತಿ ಮಹಾದೇವ್ಯಾಃ ಪ್ರಸಾದತಃ । ಸಾಯಮಧೀಯಾನೋ[(3)] ದಿವಸಕೃತಂ ಪಾಪಂ ನಾಶಯತಿ ।

ಪ್ರಾತರಧೀಯಾನೋ ರಾತ್ರಿಕೃತಂ ಪಾಪಂ ನಾಶಯತಿ । ಸಾಯಂಪ್ರಾತಃಪ್ರಯುಂಜಾನೋಽಪಾಪೋ ಭವತಿ । ನಿಶೀಥೇ ತುರೀಯಸಂಧ್ಯಾಯಾಂ ಜಪ್ತ್ವಾ ವಾಕ್ಸಿದ್ಧಿರ್ಭವತಿ । ನೂತನಪ್ರತಿಮಾಯಾಂ ಜಪ್ತ್ವಾ ದೇವತಾಸಾನ್ನಿಧ್ಯಂ ಭವತಿ । ಪ್ರಾಣಪ್ರತಿಷ್ಠಾಯಾಂ ಜಪ್ತ್ವಾ ಪ್ರಾಣಾನಾಂ ಪ್ರತಿಷ್ಠಾ ಭವತಿ । ಭೌಮಾಶ್ವಿನ್ಯಾಂ ಮಹಾದೇವೀಸನ್ನಿಧೌ ಜಪ್ತ್ವಾ ಮಹಾಮೃತ್ಯುಂ ತರತಿ ಯ ಏವಂ ವೇದೇತ್ಯುಪನಿಷತ್ ॥

ಓಮ್ ಭದ್ರಂಕರ್ಣೇಭಿಃ ಶೃಣುಯಾಮ ದೇವಾಃ ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ ।
ಸ್ಥಿರೈರಂಗೈಃಸ್ತುಷ್ಟುವಾಗ್ಂ ಸಸ್ತನೂಭಿಃ ವ್ಯಶೇಮದೇವಹಿತಂ ಯದಾಯೂಃ ।
ಸ್ವಸ್ತಿನಃ ಇಂದ್ರೋ ವೃದ್ಧಶ್ರವಾ ಸ್ವಸ್ತಿನಃ ಪೂಷಾ ವಿಶ್ವವೇದಾಃ ।
ಸ್ವಸ್ತಿನಸ್ತಾರ್ಕ್ಷ್ಯೋ ಅರಿಷ್ಟನೇಮಿಃ ಸ್ವಸ್ತಿನೋ ಬೃಹಸ್ಪತಿರ್ದಧಾತು ॥

ಪಾಠಾಂತರಗಳು – (1) ಶೀರ್ಷಂ ಜ್ಞಾತ್ವಾ ।
(2) ಸಿದ್ಧಿಂ ಚ ವಿಂದತಿ ।
(3) ಪ್ರಾತರಧೀಯಾನೋ ರಾತ್ರಿಕೃತಂ ಪಾಪಂ ನಾಶಯತಿ ।
ಸಾಯಮಧೀಯಾನೋ ದಿವಸಕೃತಂ ಪಾಪಂ ನಾಶಯತಿ ।
ತತ್ಸಾಯಂಪ್ರಾತಃ ಪ್ರಯುಂಜಾನಃ ಪಾಪೋಽಪಾಪೋ ಭವತಿ ।

॥ ॐ तत् सत् ॥ ॐ ತತ್ ಸತ್॥

कौलोपनिषत्

ಕೌಲೋಪನಿಷತ್

(ಪಾಠಾಂತರ)

ಅಥಾತೋ ಧರ್ಮಜಿಜ್ಞಾಸಾ । ಜ್ಞಾನಂ ಬುದ್ಧಿಶ್ಚ । ಜ್ಞಾನಂ ಮೋಕ್ಷಂಚ ಕಾರಣಮ್ । ಮೋಕ್ಷಾತ್ ಸರ್ವಂಗತಾ ಬುದ್ಧಿಃ । ಪ್ರಪಂಚೇಶ್ವರಃ । ಪಂಚ ವಿಷಯಾಃ ಪ್ರಪಂಚಾಃ ಪಂಚಮಕಾರಾಃ । ತೇಷಾಂ ಜ್ಞಾನಸ್ವರೂಪಾಃ । ಯೋಗೋ ಮೋಕ್ಷಃ । ಕುಲಧರ್ಮಕರಣಂ ಜ್ಞಾನಮ್ । ಅನಿತ್ಯಜ್ಞಾನಮ್ । ಜ್ಞಾನೇ ಧರ್ಮಃ । ಏಷಾಂ ಮೋಕ್ಷ ಇತ್ಯಧ್ಯಾತ್ಮಃ । ಸರ್ವೇಂದ್ರಿಯಾಣಾಂ ನಯನಪ್ರಧಾನಮ್ । ಅಧರ್ಮವಿಹಿತಾ ನ ಕಾರ್ಯಾ ಧರ್ಮಃ ಶಾಂಭವಮ್ । ಆತ್ಮನೋಽನಿಂದಾ । ಗುರುರೇಕಃ ಸರ್ವತ್ರೈಕತಾ । ಬುದ್ಧಿರ್ಮತಿಮತಾ ಪ್ರಕಟ್ಯಾಂ (ಪ್ರಾಕಟ್ಯಂ) ನ ಕುರ್ಯಾತ್ । ಪಶುಭಾಷಣಂ । ಅನ್ಯಾಯೋ ನ್ಯಾಯಃ । ಕಿಮಪಿ ಆತ್ಮರಹಸ್ಯಂ ನ ವದೇತ್ ಶಿಷ್ಯಾಯ ವದೇತ್ । ಅಂತಃ ಶಾಕ್ತಃ । ಬಹಿಃ ಶೈವಃ । ಲೋಕೇ ನ ನಿಂದಾತ್ । ಲೋಕೇ ವೈಷ್ಣವಃ । ಕೌಲಂ ನ ನಿಂದಾತ್ । ಪ್ರಕಟ್ಯೇ ನ ನಿರಯಃ । ನ ತಿಷ್ಠೇತ್ । ನಿಯಮೇನ ನಿಯಮಾನ್ನ ಮೋಕ್ಷಃ । ಏತಜ್ಂಗಾ(ಜ್ಞಾ)ನಂ ವ್ರತಂಚರೇತ್ । ಕೌಲಂ ಪ್ರತಿಷ್ಠಾಂ ಕುರ್ಯಾತ್ । ನಿಃಸಂಗ ಏವ ಭವೇದಿತ್ಯಾಧ್ಯಾತ್ಮಮ್ । ಅನಿತ್ಯಕರ್ಮಲೋಪಃ । ಮಪಂಚಮಲಾಭೇ ಕ್ರಮಂ ಕುರ್ಯಾತ್ । ಅತ್ರ ಶಕ್ತಿಪ್ರಧಾನಮ್ । ಸರ್ವತ್ರ ನಿರ್ಭಯತಾ ಫಲಮಾತ್ಮಾ ಲತಾರೂಪಮ್ । ಶಕ್ತಿಷು ನಿಷ್ಠುರತಾಂ ನ ಕುರ್ಯಾತ್ । ನ ಸ್ವೇಚ್ಛಯಾ ಪಂಚಮಂ ಸ್ವೀಕುರ್ಯಾತ್ । ಕುಲಭ್ರಷ್ಟಂ ನ ಸಂಭಾಷಯೇತ್ । ವೀರಸ್ತ್ರಿಯಮನಿಚ್ಛಾಯಾ ನ ರಮೇತ್ । ಸ್ತ್ರಿಯಂ ನ ಹನ್ಯಾತ್ ಏತಾಸ್ತು ಜಪೇತ್ ಪ್ರಾತರುತ್ಥಾಯ ದೇಶಿಕಃ । ತತ್ವಾಜ್ಞಾಸಿದ್ಧಿರ್ಭವತಿ । ಇತಿ ಪೂಜಾಂ ಕುರ್ವಂತಿ ದಿವ್ಯಂತೇ ನಂದನೇ ವನೇ ॥

ಇತಿ ಸದಾಶಿವಪ್ರಣೀತಾ ಕೌಲೋಪನಿಷತ್ ಸಮಾಪ್ತಾ ।

॥ ॐ तत् सत् ॥ ॐ ತತ್ ಸತ್॥

ॐ नमः काल्यै ।

ॐ ನಮಃ ಕಾಲ್ಯೈ ।

अद्वैतभावनोपनिशत्

ಅದ್ವೈತಭಾವನೋಪನಿಷತ್

ಅದ್ವೈತಭಾವನಾಂ ವಕ್ಷ್ಯೇ ಶೃಣುಷ್ವಂ ಕಮಲಾನನೇ ।
ಯಸ್ಯ ವಿಜ್ಞಾನಮಾತ್ರೇಣ ಭವೇದ್ಗಂಗಾಧರಃ ಸ್ವಯಮ್ ॥

ಅಹಂ ಸ್ತ್ರೀ । ಪುರುಷೋಽಹಮ್ । ಸದಾಶಿವೋಽಹಮ್ । ಪರಮಪ್ರಕೃತ್ಯೋ(ತಿರ)ಽಹಮ್ । ಪರಮಪುರುಷೋಽಹಮ್ । ನಾದೋಽಹಮ್। ಬಿಂದುರಹಮ್ । ಕಲಾಶ್ಚಾಹಮ್ । ಶಬ್ದಬ್ರಹ್ಮಾಹಮ್ । ಕ್ರಿಯಾಯಾಗೋಽಹಮ್ । ಬ್ರಹ್ಮಾಹಮ್ । ವಿಷ್ಣುರಹಮ್ । ಸೌರೋಽಹಮ್ । ಬ್ರಾಹ್ಮೋಽಹಮ್ । ವೈಷ್ಣವೋಽಹಮ್ । ಶಿವಾಽಹಮ್ । ನಾನಾಶಾಕ್ತ್ಯಹಮ್ । ಅಸುರೋಽಹಮ್ । ಸುರೋಽಹಮ್ । ಉಚ್ಚಾರರಹಿತೋಽಹಮ್ । ವಿದ್ಯಾಽಹಮ್ । ವೇದಾಶ್ಚಾಹಮ್ । ವೇದಶಾಖಿನ (ವೇದಸಾಕ್ಷಿಣ)ಶ್ಚಾಹಮ್ । ವೇದಕ್ರಿಯಾಽಹಮ್ । ಕರ್ಮಯೋಗೋಽಹಮ್ । ಧರ್ಮಕರ್ಮಾಽಹಮ್ । ಪಿತಾಽಹಮ್ । ಮಾತಾಽಹಮ್ । ಪುತ್ರೋಽಹಮ್ । ಗುರುರಹಮ್ । ಆಚಾರ್ಯೋಽಹಮ್ । ಆಗಮೋಽಹಮ್ । ರಾಮಾಯಣೋಽಹಮ್ । ಮಹಾಭಾಗವತೋಽಹಮ್ । ಮಹಾಭಾರತೋಽಹಮ್ । ಶ್ರೀಭಾಗವತೋಽಹಮ್ । ಶ್ರುತಿಶಾಸ್ತ್ರಾಣ್ಯಹಮ್ । ಮಂತ್ರೋಽಹಮ್ । ಮಂತ್ರಾರ್ಥೋಽಹಮ್ । ಸ್ತವೋಽಹಮ್ । ಕವಚೋಽಹಮ್ । ಅಹಂ ಸಹಸ್ರನಾಮಾನಿ । ಅಹಂ ಗಾಯತ್ರೀ । ಬೀಜಾನ್ಯಹಮ್ । ಕೂಟಾಕ್ಷರೋಽಹಮ್ । ತ್ರ್ಯಕ್ಷರೋಽಹಮ್ । ಪಂಚಾಶನ್ಮಾತೃಕಾಽಹಮ್ । ಪಂಚಭೂತಾನ್ಯಹಮ್ । ಪಂಚಮಹಾಭೂತಾನ್ಯಹಮ್ । ತತ್ತ್ವಾನ್ಯಹಮ್ । ಸ್ಥೂಲೋಽಹಮ್ । ಸೂಕ್ಷ್ಮೋಽಹಮ್ । ಕುಲಾಕುಲಾಶ್ಚಾಽಹಮ್ । ಪ್ರಮಾಣಾದಿ ಷೋಡಶಪದಾರ್ಥೋಽಹಮ್ । ಋಷಯಶ್ಚಾಽಹಮ್ । ಮುನಯಶ್ಚಾಽಹಮ್ । ಲಕ್ಷ್ಮೀರಹಮ್ । ಸ್ತ್ರಿಯೋಽಹಮ್ । ಶ್ರಿಯೋಽಹಮ್ । ಪ್ರಿಯೋಽಹಮ್ । ಗೌರ್ಯಹಮ್ । ಭೂತೋಽಹಮ್ । ಕುಷ್ಮಾಂಡೋಽಹಮ್ । ಪ್ರೇತೋಽಹಮ್ । ಲೋಕಪಾಲಾಶ್ಚಾಽಹಮ್ । ಗ್ರಹಾಶ್ಚಾಽಹಮ್ । ದಿಗ್ಗಜಾಶ್ಚಾಽಹಮ್ । ದಶದಿಶೋಽಹಮ್ । ಊರ್ಧ್ವೋಽಹಮ್ । ಅಧೋಽಹಮ್ । ಚತುರ್ದಶಭುವನಾನ್ಯಹಮ್ । ತತ್ಸ್ಯೋಽಹಮ್ । ತದಸಂಪ್ರದರ್ಚಾತ್ರದ್ವಾನಂತರಮ್ । ತದಹಂ ಸಂಪ್ರಕುರ್ಯಾತ್ ॥

ಜಪೇನ್ಮಂತ್ರಂ ವಿಧಾನೇನ ಸಂಖ್ಯಾಂ ಕುರ್ವನ್ ವಿಧಾನತಃ ।
ನ ದೋಷೋ ಮಾನಸೇ ಜಾಪೇ ಇತ್ಯಾಹ ಭಗವಾನ್ ಶಿವಃ ॥

ಇತಿ ಸದಾಶಿವಪ್ರಣೀತಂ ಅದ್ವೈತಭಾವಂ ಸಮಾಪ್ತಮ್ ।

॥ ॐ तत् सत् ॥ ॐ ತತ್ ಸತ್॥

कालिकोपनिषत्
ಕಾಲಿಕೋಪನಿಷತ್

ಅಥ ಹ ಏನಾಂ ಬ್ರಹ್ಮರಂಧ್ರೇ ಬ್ರಹ್ಮರೂಪಿಣೀಮಾಪ್ನೋತಿ । ಶುಭಗಾಂ ತ್ರಿಗುಣಾಮುಕ್ತ್ವಾ । ಶುಭಗಾ ತು ಕಾಮರೇಫೇಂದಿರಾವಿಂದುಮೇಲನರೂಪಾ । ಸಮಷ್ಟಿರೂಪಿಣೀ । ಏತತ್ತ್ರಿಗುಣಿತಮಾದೌ । ತದನುಕೂರ್ಚದ್ವಯಂ । ಕೂರ್ಚಬೀಜಂತು । ವ್ಯೋಮಷಷ್ಠಸ್ವರವಿಂದುಮೇಲನರೂಪಮ್ । ತದೇವ ದ್ವಿರುಚ್ಚಾರ್ಯ । ಭುವನಾದ್ವಯಮ್ । ಭುವನಾ ತು ವ್ಯೋಮಜ್ವಲನೇಂದಿರಾಶೂನ್ಯಮೇಲನರೂಪಾ । ತದ್ದ್ವಯಮ್ । ದಕ್ಷಿಣೇ ಕಾಲಿಕೇ ಇತಿ ಅಭಿಮುಖ್ಯತಾ । ತದನುಬೀಜಸಪ್ತಕಮುಚ್ಚಾರ್ಯ । ವೃಹದ್ಭಾನುಜಾಯಾಮುಚ್ಚರೇತ್ । ಮತ್ವಾ ಶಿವಮಯೋ ಭವೇತ್ । ಸರ್ವಸಿದ್ಧೀಶ್ವರೋ ಭವೇತ್ । ಗತಿಸ್ತಸ್ಯಾಸ್ತಿ । ನಾನ್ಯಸ್ಯ । ಸ ತು ನಾರೀಶ್ವರಃ । ಸ ತು ದೇವೇಶ್ವರಃ । ಇತಿ ॥

ಅಭಿನವಜಲದಸಂಕಾಶಾ । ಘನಸ್ತನೀ । ಕುಟಿಲದಂಷ್ಟ್ರಾ । ಸ(ಶ)ವಾಸನಾ ಕಾಲಿಕಾ ಧ್ಯೇಯಾ । ತ್ರಿಕೋಣಂ ತ್ರಿಕೋಣಂ ನವಕೋಣಂ । ಪದ್ಮಂ । ತಸ್ಮಿನ್ ದೇವೀಂ ಷಡಂಗೇನಾಭ್ಯರ್ಚ್ಯ । ತದಿದಂ ಸರ್ವಾಂಗಮ್ । ಓಂ ಕಾಲೀ ಕಪಾಲಿನೀ ಕುಲ್ಲಾ ಕುರುಕುಲ್ಲಾ ವಿರೋಧಿನೀ । ವಿಪ್ರಚಿತ್ತಾ । ಉಗ್ರಾ । ಉಗ್ರಪ್ರಭಾ । ದೀಪ್ತಾ । ನೀಲಾ । ಘನಾ । ವಲಾಕಾ । ಮಾತ್ರಾ । ಮುದ್ರಾ । ಮಿತಾ । ಸೈವ ಪಂಚದಶಕೋಣಗಾ । ಓಂ ಬ್ರಾಹ್ಮೀ ಮಾಹೇಶ್ವರೀ ಚೈಂದ್ರೀ ಚಾಮುಂಡಾ ಕೌಮಾರೀ ಅಪರಾಜಿತಾ । ವಾರಾಹೀ ನಾರಸಿಂಹೀ ಚ ಅಷ್ಟಪತ್ರಗಾ । ದ್ವಿತೀಯಚತುಃಷಷ್ಠಾಷ್ಟ(ದಶ)ದ್ವಾದಶಚತುರ್ದಶಷೋಡಶಸ್ವರಭೇದೇನ ಪ್ರಥಮೇನ । ಪ್ರಣವೇನ ವಾ । ಮಂತ್ರಂ ವಿದಧ್ಯಾತ್ । ಅಂಗೇ ತನ್ಮೂಲೇ(ನಾ)ವಾಹನಮ್ । ತದ್ಯೈವ ಪೂಜನಮ್ । ಯ ಏನಂ ಮಂತ್ರರಾಜಂ ನಿಯಮೇನ ಅನಿಯಮೇನ ವಾ । ಲಕ್ಷಂ ಲಕ್ಷಮಾವರ್ತಯತಿ । ಸ ಪಾಪ್ಮಾನಂ ತರತಿ । ಸ ದುಷ್ಕೃತಾನಿ ತರತಿ । ಸ ಬ್ರಹ್ಮಭಾಗ್ಭವತಿ । ಸೋಽಮೃತತ್ವಭಾಗ್ಭವತಿ । ಸ ಸರ್ವಶೋಕಂ ತರತಿ । ಸ ಆಯುರಾರೋಗ್ಯಮೈಶ್ವರ್ಯಂ ಲಭತೇ ಸದಾ । ಪಂಚಮಕಾರೇಣ ಪೂಜಯೇತ್ । ಸದಾ ಭಕ್ತೋ ಭವೇತ್ । ಸದಾ ವೇದಭಕ್ತೋ ಭವೇತ್ । ಸ ಸರ್ವಶಾಸ್ತ್ರಂ ಜಾನಾತಿ । ಸ ಸರ್ವಪ್ರತ್ಯಯಕಾರೀ ಭವತಿ । ರಾಜಾನೋ ದಾಸತಾಂ ಯಾಂತಿ । ಸಿದ್ಧಮಂತ್ರಸ್ಯ ಜಪಿನಾಮ್ । ಯಶ್ಚ ಪಾವಾತ್ಯಮ್ । ತನ್ಮಯಮ್ । ಶಿವ ಏವ ಹಿ । ಜಪ್ತ್ವಾ ಸರ್ವದೈವತಮ್ । ಮಂತ್ರಂ ಬೀಜಮ್ । ಯಃ ಸ್ವಯಮ್ । ಶಿವ ಏವಾಯಮ್ । ಅಣಿಮಾದಿವಿಭೂತೀನಾಮೀಶ್ವರಃ । ಕಾಲಿಕಾಂ ಲಭೇತ್ । ಆವಯೋಃ ಪಾತ್ರಭೂತೋಽಸೌ । ಸುಕೃತೀ ತ್ಯಕ್ತಕಲ್ಮಷಃ । ಜೀವನ್ಮುಕ್ತಃ ಸ ವಿಜ್ಞೇಯೋ ಯಃ ಸ್ಮರೇದ್ ಘೋರಾಕ್ಷಿಣಾಮ್ । ದಶಾಂಶ ಹೋಮಯೇತ್ । ತದನು ತರ್ಪಯೇತ್ । ಅಥ ಹ ಏಕೇಷು ಯಾನ್ ಕಾಮಾನ್ ವಾಹಯತಿ ಭೀಷಯತಿ । ಅನಿರುದ್ಧಜ್ಞಾನಾತ್ । ಅನಿರುದ್ಧಸರಸ್ವತೀ । ಅಥ ಏಕಂ ಕಾಲಿಕಾಮನುಂ ಜಪೇತ್ । ಯಂ (ಯಃ) ಮತ್ಶ್ರದ್ಧಾತ್ಮಾ ಜ್ಞಾನವೈರಾಗ್ಯಯುಕ್ತಃ । ಶಾಂಭವಂ(ವ) ದೀಕ್ಷಾಸುರತಃ । ಶಾಕ್ತೋ ವಾ ದಿವಾ ಬ್ರಹ್ಮಚಾರೀ । ರಾತ್ರೀ ನಗ್ನಃ । ಸರ್ವದಾ ಮೈಥುನಾಸಕ್ತಮಾನಸಃ । ಜಪಪೂಜಾದಿನಿಯಮೋ ಯೋಷಿತ್ಸು ಪ್ರಿಯಕರಃ । ಸುಭಗೋದಕೇನ ತರ್ಪಣಮ್ । ತೇನೈವ ಪೂಜನಮ್ । ಸರ್ವ(ದಾ)ಕಾಲೀರೂಪಾ(ಪಮಾ)ತ್ಮಾನಂ ವಿಭಾವಯೇತ್ । ಸರ್ವಯೋಷಿದಾಶ(ಸ)ಕ್ತೋ ಭವತಿ । ಸರ್ವಹತ್ಯಾಂ ತರತಿ । ಅಥ ಪಂಚಮಕಾರೇಣ ಸರ್ವಮಾಪ್ನೋತಿ । ವಿದ್ಯಾಂ ಪಶುಂ ಧನಂ ಧಾನ್ಯಂ ಸರ್ವಶಸ್ಯಂಚ । ಕವಿತ್ವಂಚ । ನಾನ್ಯಃ ಪರಮಃ ಪಂಥಾ ವಿದ್ಯತೇ । ಮೋಕ್ಷಾಯ । ಜ್ಞಾನಾಯ । ಧರ್ಮಾಯ । ತತ್ಸರ್ವಂ ಭವ್ಯಂ ಯತ್ಕಿಂಚಿತ್ ದೃಶ್ಯಾದೃಶ್ಯಮಾನಂ । ಸ್ಥಾವರಜಂಗಮ(ಮಂ)

ತತ್ಸರ್ವಮ್ । ಕಾಲಿಕಾತಂತ್ರೇ ತು । ತಂ ಪ್ರೋಕ್ತಮ್ । ವೇದೇಽಯಮ್ । ಮನುಜಾಪೀ । ಸ ಪಾಪ್ಮಾನಂ ತರತಿ । ಸತು ಅಗಮ್ಯಾಗಮನಂ ತರತಿ । ಸ ಸರ್ವಸನ್ನ್ಯಾಮೀ ಭವತಿ । ಸ ವಿರಕ್ತೋ ಭವತಿ । ಸ ವೈ ಸರ್ವವೇದಕಾರೀ ಭವತಿ । ಸ ಸರ್ವಮಂತ್ರಜಾಪೀ ಭವತಿ । ಸ ಸರ್ವಶಾಸ್ತ್ರವೇತ್ತಾ ಭವತಿ । ಸ ಸರ್ವಯಂತ್ರಾಧಿಕಾರೀ ಭವತಿ । ಆವಯೋರ್ಮಿತ್ರಭೂತೋ ಭವತಿ । ಇತ್ಯಾಹ ಭಗವಾನ್ ಶಿವಃ । ನಿರ್ವಿಕಲ್ಪೇನ ಮನಸಾ ಯಃ ಸರ್ವಂ ಕರೋತಿ । ಅಥ ಹ ಏನಂ ಮೂಲಾಧಾರೇ ಸ್ಮರೇದ್ದಿವ್ಯಂ ತ್ರಿಕೋಣಂ ತೇಜಸಾಂ ನಿಧಿಮ್ । ತಸ್ಯಾಗ್ನಿರೇಖಾಮಾನೀಯ ಅಥ ಊರ್ಧ್ವಂ ವ್ಯವಸ್ಥಿತಮ್ । ನೀಲತೋಯದಮಧ್ಯಸ್ಥತಡಿಲ್ಲೇಖೇವ ಭಾಸ್ವರಾಮ್ । ನೀಲಾಂ ಸುಪೀತಾಂ ಭಾಸ್ಕರವದುಪಮಾಮ್ । ತಸ್ಯಾಃ ಶಿಖಾಯಾ ಮಧ್ಯೇ ಪರಮೋರ್ಧ್ವವ್ಯವಸ್ಥಿತಾಮ್ । ಸ ಬ್ರಹ್ಮಾ ಸ ಶಿವಃ । ಸ ಸ್ಮರಃ ಸ ಸರ್ವಪಾಪೈಃ ಪ್ರಮುಚ್ಯತೇ । ಸ ಮಹಾಪಾತಕೇಭ್ಯಃ ಪೂತೋ ಭೂತ್ವಾ ಸರ್ವಸಿದ್ಧಿಂ ಕೃತ್ವಾ ಕೈವಲ್ಯಂ ಭಜತೀತಿ । ಭೈರವೋಽಸ್ಯ ಋಷಿರನುಷ್ಟುಪ್ಛಂದಃ ಲಜ್ಜಾ ಬೀಜಂ ಕೂರ್ಚಂ ಶಕ್ತಿಃ ಕವಿತ್ವಾರ್ಥೇ ವಿನಿಯೋಗಃ । ಋಷಿಚ್ಛಂದೋದ್ದೈವತಂ ಜ್ಞಾತ್ವಾ ಮಂತ್ರಫಲಮಶ್ನುತೇ । ಅಥ ಸರ್ವಾಂ ವಿದ್ಯಾಂ ಪ್ರಥಮಮೇಕಂ ದ್ವಯಂ ತ್ರಯಂ ವಾ ಪುಟಿತಂ ಕೃತ್ವಾ ವಾ ಜಪೇತ್ । ಗತಿಸ್ತಸ್ಯಾಸ್ತೀತಿ । ನಾನ್ಯಸ್ಯ । ಇಹಂ ಗತಿಃ । ಓಂ ಸತ್ವಂ(ತ್ಯಂ) ತತ್ಸರ್ವಂ(ತತ್ಸತ್) । ಅಥ ಹೇನಂ ಗುರುಂ ಪರಿತೋಷ್ಯ ಗೋಹಿರಣ್ಯಾದಿಭಿರ್ಗೃಹೀಯಾತ್ । ಮಂತ್ರರಾಜಮ್ । ಗುರುರಪಿ ಶಿಷ್ಯಾಯ । ಸತ್ಕುಲೀನಾಯ ಶುಶ್ರೂಷವೇ । ಸ್ತ್ರಿಯಂ ದೃಷ್ಟ್ವಾ ಸ್ವಯಂ ಪರಿಜಪ್ಯ ನಿಶಾಯಾಂ ವಿಹರೇತ್ । ಏಕಾಕೀ ಶಿವಗೇಹೇ । ಲಕ್ಷಂ ತದೂರ್ಧ್ವಂ ವಾ ಜಪ್ತ್ವಾ ದೇಯಮ್ । ಓಂ ತತ್ಸತ್ಯಮ್ । ಓಂ ತತ್ಸತ್ಯಮ್ । ನಾನ್ಯಪ್ರಕಾರೇಣ ವಾ ಸಿದ್ಧಿರ್ಭವತೀತಿ । ಕಾಲಿಕಾಮನೌ ವಾ ಭಾವಯತಿ । ತ್ರಿಪುರಾಮಂತ್ರೇ ವಾ ಸರ್ವಸ್ಯ ದುರ್ಗಾಮನೀ ಸಿದ್ಧಿರ್ಭವತೀತಿ ॥

ಇತಿ ಅಥರ್ವಸೌಭಾಗ್ಯಕಾಂಡೇ ಕಾಲಿಕೋಪನಿಷತ್ ಸಮಾಪ್ತಾ ।

॥ ॐ तत् सत् ॥ ॐ ತತ್ ಸತ್॥

ॐ नमः शिवाय ।

ಓಂ ನಮಃ ಶಿವಾಯ ।

तारोपनिषत्

ತಾರೋಪನಿಷತ್

ಅಥ ಹೇನಾಂ ಬ್ರಹ್ಮರಂಧ್ರೇ ತಾರಿಣೀಮಾಪ್ನಾತಿ । ತಾರಯತೀತಿ ತಾರಾ । ತಾರಾ ಸ್ಯಾದರ್ದ್ವಪಂಚಾಕ್ಷರರೂಪಾ ಬ್ರಹ್ಮವಿಷ್ಣುಮಹೇಶ್ವರಸದಾಶಿವವಿಂದುಮೇಲನರೂಪಾ ವಿದ್ಯಾ । ತಥಾ ಪ್ರಥಮಂ ಭುವನಾಮುಚ್ಚರೇತ್ । ವ್ಯೋಮಜ್ವಲನೇಂದಿರಾಕಲಾವಿಂದುಮೇಲನರೂಪಾ । ತತೋ ವಧೂಮುಚ್ಚರೇತ್ । ಷೋಡಶಹಲತೂರ್ಯ–ಸ್ವರವಿಂದುಮೇಲನರೂಪಾ । ತತಃ ಕೂರ್ಚಂ ವ್ಯೋಮಷಷ್ಠವಿಂದುಮೇಲನರೂಪಮ್ । ನೀಲಾಖ್ಯಾ ಸರಸ್ವತೀ । ಇಮಾಮಧೀಯಾನಸ್ತರ್ಕಾಗಮಪುರಾಣಕಾವ್ಯಾದಿವಾಗೀಶ್ವರೋ ಭವತಿ । ತಾರಾದಿಕಾಸ್ತಾಂತಾ ಚೇತ್ ತಾರಾ ಭವತಿ । ಏತಸ್ಯಾ ಜ್ಞಾನಮಾತ್ರೇಣ ಜೀವನ್ಮುಕ್ತೋ ಭವೇದ್ ವೈ । ತಾಮೇತ್ಯ ಸರ್ವವಿದ್ಯಾಜ್ಞಾನವಾನ್ ಭವತಿ । ವಾರತ್ರಯಂ ಯಃ ಪಠೇತ್ । ಸ ಸನ್ಯಾಸೀ ಶಿವ ಏವ ಸರ್ವದೇವಮಯೋ ಭವತಿ. ತಾರರಹಿತಾ ಪುನರೇಕಜಟಾ ಭವತಿ । ಏತದ್ರೂಪಾಮಧೀಯಾನಾ ಸಮಾನಫಲದಾ । ನಾತ್ರ ಮಿತ್ರಾಮಿತ್ರಾದಿವಿಚಾರಣಾ । ಸಿದ್ಧವಿದ್ಯಾನಾಮಾಸಾಂ ಫಲಂ ದಕ್ಷಿಣಾವತ್ । ಅಥಾತೋ ಮಂತ್ರಾನ್ ಜಲಶುದ್ಧಿಕ್ಷಾಲನಾಚಮನಕರಾಕ್ಷತಪ್ರಕ್ಷೇಪತ್ರಿವಿಧವಿಘ್ನೋತ್ಸಾರಣ–ಭೂಮ್ಯಭಿಮಂತ್ರಣಂ ಜಲಾಭ್ಯುಕ್ಷಣಕುಸುಮಶುದ್ಧಿಯಂತ್ರನಿರ್ಮಾಣರೂಪಾನಾಗಮವಾದೀ ಲಿಖೇತ್ । ಏಕಲಿಂಗೇ ಪಿತೃಭೂಮೌ ಚಿರಶೂನ್ಯನಿರ್ಜನೇ ದೇವಾಲಯೇ ವಿಜನೇ ಚತುಷ್ಪಥೇ ಉಜ್ಜಟೇ ಭೂಧರತಟೇ ನಿರ್ಜನೇ ದೇಶೇ ನಿರ್ಜನದೇವಾಗಾರೇ ಶ್ರೀಫಲಮೂಲೇ ವಿಜನೇ ನದೀತೀರೇ ಚೈತ್ಯಹಟ್ಟೇ ವಟಾಶ್ವತ್ಥಮೂಲೇ ಸ್ವಗೃಹೇ ವಾ ಪೂಜಾ । ಪಂಚತತ್ತ್ವವಿಧಾನಾ । ಅಕ್ಷೋಭ್ಯಮುನಿರಸ್ಯಾಪಿ ಕ್ವಮ್ದಸ್ತು ವೃಹತೀ ಕೂರ್ಚಂ ಬೀಜಂ ಶಕ್ತಿರ್ಭುವನಾ ವಧೃಃ ಕೀಲಕಮ್ । ಏಕಜಟಾ ತಾರಿಣೀ ವಜ್ರೋದಕೈಕೋಗ್ರಜಟಾ ಮಹಾಪ್ರತಿಸರಾ ಪಿಂಗೋಗ್ರೈಕಜಟಾ ಆಭಿಮುಖ್ಯೇನ ಷಡಂಗಾನಿ ಇಂದ್ರನೀಲವರ್ಣಾಭಾ ಮೂಲಮಂತ್ರಭಾಂಜಿ ಮೂಲಾಧಾರನಾಭಿಹೃದಯ–ಬ್ರಹ್ಮರಂಧ್ರೇಷು ಭುವನಾ ಬಧೃಕೂರ್ಚಶೋಷಣದಹನಪ್ರೋತ್ಮಾರಣಾಮೃತೀಕೃತಿಮೂರ್ತಿರ್ಜನನೀಯಾ ತತ್ತ್ವಬೋಧೇನ । ಸಜಲಪ್ರಾವೃಷೇಣ್ಯಘನರಾಜಿನಿಭಾಪ್ಯ(ದ್ವ್ಯ)ಷ್ಟವರ್ಷಾ ಪೀನೋನ್ನತವಕ್ಷೋರುಹಾ ನಾನಾವಿಧಸ್ತ್ರ್ಯಲಂಕಾರ ವಿರಾಜಿತಾ । ಖರ್ವಾ ಲಂಬೋದರೀ ಭೀಮಾ ವ್ಯಾಘ್ರತ್ವಗಾವೃತಾ ಮಹಾಚೀನ–ಗುರುಕಪಾಲಪಂಚಮುದ್ರಾ ವಿರಾಜಿತಾ ಭೀಮದಂಷ್ಟ್ರಾ ಕರಾಲಾಸ್ಯಾ ಪಿಂಗಲೋಗ್ರೈಕಜಟಾ ಖಪ್ರ(?)ಕರ್ತೃ–ದಕ್ಷಿಣಕರಯುಗಾ ಕಪಾಲೋತ್ಪಲವಾಮಕರಯುಗಾ ಅರುಣತ್ರಿನೇತ್ರಾ ಸಾವೇಶಸ್ಮರಯುತಾ ಅಕ್ಷೋಭ್ಯ–ಮೌಲೀಂದುಪ್ರಜ್ವಲಿತಾ ಪಿತೃಭೂಮಿಮಧ್ಯಸ್ಥಾ ಧ್ಯೇಯಾ । ಚಿತ್ತತೋಷಣಾನಂತರಂಸ್ವಯಂ ತಾರಿಣೀತಿ ಆತ್ಮ(ತ್ಮಾ)ಭೇದತಯಾ ಆತ್ಮನಿ ಮಂತೋಷ್ಯ ಪೂರ್ವಮೋಂಕಾರಂ ತತ ಆಕಾರಃ ಪರಂ ಸುರೇಖೇ ವಜ್ರರೇಖೇ ಉತ್ತರಂ ಕೂರ್ಚಂ ತದಂತಾಸ್ತ್ರವಹ್ನಿಜಾಯಾ । ಚತುರಸ್ರಾಷ್ಟದಲತ್ರಿಕೋಣರೂಪಂ ಯಂತ್ರಮ್ । ಲಕ್ಷ್ಮೀಃ ಸರಸ್ವತೀ ರತಿಃ ಪ್ರೀತಿಃ ಕೀರ್ತಿಸ್ತುಷ್ಟಿಃ ಶಾಂತಿಃ ಸದಾಶಿವಶ್ಚಾತ್ರ ಗಮಾಗಮವಶಾತ್ ಪುಷ್ಪಾಂಜಲಿಯೋಗ–ಮೂಲಮಂತ್ರರೂಪಪಟಲವಿಹಿತಕುಸುಮಪರದ್ರವ್ಯದಾನತರ್ಪಣಮ್ । ನೈವೇದ್ಯಭೂತವಲಿದಾನಾದಿ–ಸುಸ್ಥ(ಮುಖ್ಯ)ಷಡಂಗಾನಿ । ಗುರೂನಾಪಿ ಯಥಾದೇಶಂ । ಪೂರ್ವಾದಿದಿಶಿ ಗಣೇಶವಟುಕಕ್ಷೇತ್ರಪಾಲಯೋಗಿನ್ಯಃ । ಆಗ್ನೇಯಾದಿಷು ವೈರೋಚನಶಂಕಶಂಖಪಾಂಡರ[1] ತಾರಕಾನ್ । ತ್ರಿಕೋಣೇಷು ಬೀಜತ್ರಯಮ್ ಬ್ರಾಹ್ಮೀ ವೈಷ್ಣವೀ ಮಾಹೇಶ್ವರೀ ಶಕ್ತಿತ್ರಯಯುತಾ ಯಥಾಯೋಗ್ಯಂ ವಸ್ತ್ರಾಲಂಕಾರ ಮಹಾಶಂಖಮಾಲಯಾ ಲಕ್ಷಂ

ನಿಯಮೇನಾನಿಯಮೇನ ವಾ ಸಿದ್ಧವಿದ್ಯಾನಾಂ ದೇವಜ್ಞಾನಪ್ರಕಾಶಕಾನಾಂ ಸಂಜ್ಞಾನಸಂಗಾನ್ । ಕಾಲಿಕಾವಿಹಿತಾನಿ ಕಲ್ಪಾನಿ ಕುರ್ಯಾತ್ । ಅಥ ಹೈನಂ ಭಗವಂತಂ ಪರಮೇಷ್ಠಿನಂ ಸನತ್ಕುಮಾರಃ ಪಪ್ರಚ್ಛಯೇನ ಸರ್ವಸ್ಯ ಸರ್ವಂ ಭವತಿ ಮ(ತ)ನ್ಮಂತ್ರಂ ಕಥಯ ಭಗವನ್ ಕೋಹಿ ಮಂತ್ರಾಣಾಂ ಪರಮಾ ಮಂತ್ರದೇವತಾನಾಂಚ ದೈವತಂ ಕಿಮುತಾಸ್ಯ ವಿದ್ಯಾಯುಗಶೋಧನಂ ಪುತ್ರಪೌತ್ರಕವಿತ್ವಂಚ ಧನಧಾನ್ಯಕವಿತ್ವಂಚ ನಿರ್ವಾಣಮೋಕ್ಷಂ ಲಭತೇ ಬುಧಃ । ಕೇನ ವಿಧಿನಾ ಆರಾಧ್ಯತೇ ಕೇನ ಮಂತ್ರೇಣ ಸರ್ವಮಿತಿ । ಅಥಾಹ ಭಗವಾನ್ ಬ್ರಹ್ಮಾ ಮಂತ್ರಾಣಾಂ ಪರಮೋ ಮಂತ್ರಸ್ತಾರೇತಿ ಪರಮಾ ತಾರಾ ಸಾ ದೇವಾನಾಂಚ ದೇವತಾ । ಸರ್ವದಾ ಸ್ತ್ರೀಷು ಮಧ್ಯೇ ಜಪೇತ್ । ಸ್ತ್ರಿಯಾ ಯೋನೌ ಸದಾ ಜಪೇತ್ । ಋತುಮತೀಂ ಗಚ್ಛೇತ್ । ತುಲಸೀಂ ತ್ಯಜೇತ್ ಏವಂ ಕೃತ್ವಾ ಗುರುಃ ಶಿಷ್ಯೋಽಯುತದ್ವಯಂ ನಿಶಾಯಾಂ ಏಕಾಕೀ ಶೂನ್ಯಗೃಹೇ ತಿಮಿರಾಲಯೇ । ತದಾ ಸರ್ವಸ್ಯ ಸರ್ವಂತರತಿ ಯಶಸ್ಯಂತೇ ನರಾಃ ॥ ಓಂ

ಇತಿ ತಾರೋಪನಿಷತ್ ಸಮಾಪ್ತಾ ।

ಓಂ ತಾರಾಯೈ ನಮಃ ।

॥ ૐ तत् सत् ॥ ૐ ತತ್ ಸತ್॥

ಆಕರಗ್ರಂಥಗಳ ಸೂಚಿ
